ಶುಕ್ರವಾರ, ಆಗಸ್ಟ್ 11, 2023 | ಬೆಂಗಳೂರು | ₹ 7.00 | ಸಂಪುಟ 76| ಸಂಚಿಕೆ 222 | ಪುಟ 14
www.prajavani.net
prajavani.net prajavani prajavani prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸಿನಿಮಾ ಪುರವಣಿ
ಎರಡು ತಿಂಗಳ ಅಂತರದಲ್ಲಿ ಎರಡು ಸಿನಿಮಾ. ಚಂದನವನದಲ್ಲೀಗ 'ಚೈತ್ರ'ಕಾಲ



ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
65,688 ▼	19,543 ▼	₹60,780 (ಬೆಂಗಳೂರು) ▼	₹72,100 (ಬೆಂಗಳೂರು) ▼	82.68 ▲

ಕೇಂದ್ರ ಸರ್ಕಾರ ಮಂಡಿಸಿದ ಹೊಸ ಮಸೂದೆಗೆ 'ಇಂಡಿಯಾ' ವಿರೋಧ

ಆಯುಕ್ತರ ನೇಮಕ: ಸಿಜೆಐ ಇಲ್ಲ

ಪ್ರಜಾವಾಣಿ ವಾರ್ತೆ

ನವದೆಹಲಿ: ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ಆಯ್ಕೆ ಸಮಿತಿಯಿಂದ ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿಯವರನ್ನು (ಸಿಜೆಐ) ಹೊರಗೆ ಇರಿಸುವ ಉದ್ದೇಶದ ಮಸೂದೆಯನ್ನು ಕೇಂದ್ರ ಸರ್ಕಾರವು ರಾಜ್ಯಸಭೆಯಲ್ಲಿ ಗುರುವಾರ ಮಂಡಿಸಿದೆ. ಸಿಜೆಐ ಬದಲಿಗೆ ಸಂಪುಟ ದರ್ಜೆಯ ಸಚಿವರೊಬ್ಬರು ಸಮಿತಿಯ ಸದಸ್ಯರಾಗಲಿದ್ದಾರೆ. ಇದರಿಂದಾಗಿ ಸರ್ಕಾರಕ್ಕೆ ನೇಮಕಾತಿಯಲ್ಲಿ ಹೆಚ್ಚಿನ ಅಧಿಕಾರ ದೊರೆಯುತ್ತದೆ ಎನ್ನಲಾಗಿದೆ.

ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಆಯುಕ್ತರ ನೇಮಕಕ್ಕೆ ಪ್ರಧಾನಿ, ಲೋಕಸಭೆಯಲ್ಲಿ ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್ ಮುಖ್ಯ ನ್ಯಾಯಮೂರ್ತಿ ಇರುವ ಸಮಿತಿ ರಚಿಸಬೇಕು ಎಂದು ಸುಪ್ರೀಂ ಕೋರ್ಟ್ ಐದು ತಿಂಗಳ ಹಿಂದೆ ಹೇಳಿತ್ತು. ಸಂಸತ್ತು ಕಾನೂನು ರೂಪಿಸುವವರೆಗೆ ಈ ವ್ಯವಸ್ಥೆ ಜಾರಿಯಲ್ಲಿ ಇರುತ್ತದೆ ಎಂದು ಕೋರ್ಟ್ ಹೇಳಿತ್ತು.

ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಆಯುಕ್ತರು (ನೇಮಕಾತಿ, ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಮಸೂದೆ 2023 ಅನ್ನು ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ರಾಜ್ಯಸಭೆಯಲ್ಲಿ ಮಂಡಿಸಿದರು.


ಕಾಂಗ್ರೆಸ್, ಎಎಪಿ ಸೇರಿದಂತೆ ವಿರೋಧ ಪಕ್ಷಗಳು ಮಸೂದೆಯನ್ನು ತೀವ್ರವಾಗಿ ವಿರೋಧಿಸಿವೆ. ಸಂವಿಧಾನ ಪೀಠದ ಆದೇಶವನ್ನು ದುರ್ಬಲ ಮತ್ತು ಬುಡಮೇಲುಗೊಳಿಸಲಾಗಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.



ಈ ಮಸೂದೆಯು ಅಸಾಂವಿಧಾನಿಕ. ಸಂಸತ್ತು ಇದನ್ನು ಅಂಗೀಕರಿಸಿದರೂ ಸುಪ್ರೀಂ ಕೋರ್ಟ್ ಇದನ್ನು ರದ್ದು ಮಾಡಲಿದೆ
ಪ್ರಶಾಂತ್ ಭೂಷಣ್, ಹಿರಿಯ ವಕೀಲ



ಸುಪ್ರೀಂ ಕೋರ್ಟ್ ನೀಡಿದ ತೀರ್ಪು ತನಗೆ ಇಷ್ಟವಾಗದಿದ್ದರೆ ಸರ್ಕಾರ ಅದನ್ನು ಬುಡಮೇಲು ಮಾಡುತ್ತದೆ. ಮುಕ್ತ ಚುನಾವಣೆ ಮೇಲೆ ಇದು ಪ್ರತಿಕೂಲ ಪರಿಣಾಮ ಬೀರಲಿದೆ
ಅರವಿಂದ ಕೇಜ್ರಿವಾಲ್, ದೆಹಲಿ ಮುಖ್ಯಮಂತ್ರಿ



ಮಸೂದೆ ಮಂಡಿಸುವ ಮೂಲಕ ಪ್ರಧಾನಿ ಮೋದಿ ಮತ್ತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಚುನಾವಣಾ ಆಯೋಗದ ಮೇಲೆ ಹಿಡಿತ ಸಾಧಿಸಲು ಯತ್ನಿಸುತ್ತಿದ್ದಾರೆ
ಮಾಣಿಕಂ ಟ್ಯಾಗೋರ್, ಕಾಂಗ್ರೆಸ್ ಸಚೇತಕ, ಲೋಕಸಭೆ

ಚುನಾವಣಾ ಆಯುಕ್ತರಾಗಿರುವ ಅನೂಪ್ ಚಂದ್ರ ಪಾಂಡೆ ಅವರು ಮುಂದಿನ ವರ್ಷ ಫೆಬ್ರುವರಿ 14ರಂದು ನಿವೃತ್ತರಾಗಲಿದ್ದಾರೆ. 2024ರಲ್ಲಿ ನಡೆಯಲಿರುವ ಲೋಕಸಭೆ ಚುನಾವಣೆಯ ವೇಳಾಪಟ್ಟಿಯು 2024ರ ಮಾರ್ಚ್‌ನಲ್ಲಿ ಪ್ರಕಟವಾಗುವ ನಿರೀಕ್ಷೆ ಇದೆ. ಈ ಹಿಂದಿನ ಎರಡು ಚುನಾವಣೆ ಸಂದರ್ಭಗಳಲ್ಲಿಯೂ ಮಾರ್ಚ್‌ನಲ್ಲಿ ವೇಳಾಪಟ್ಟಿ ಪ್ರಕಟವಾಗಿತ್ತು.

ಹಾಗಾಗಿಯೇ ಈಗ ಸರ್ಕಾರ ಮಂಡಿಸಿರುವ ಮಸೂದೆಗೆ ಮಹತ್ವ ಬಂದಿದೆ.

ಈ ಮಸೂದೆ ಜಾರಿಯಾದರೆ, ನ್ಯಾಯಸಮ್ಮತ ಚುನಾವಣೆ ನಡೆಸುವ ಆಶಯಕ್ಕೆ ಧಕ್ಕೆಯಾಗಲಿದೆ ಎಂದು ಕಳವಳ ವ್ಯಕ್ತಪಡಿಸಿದ ವಿರೋಧ ಪಕ್ಷಗಳ ಸದಸ್ಯರು, ಸಭಾಪತಿ ಅವರ ಪೀಠದ ಮುಂದೆ ತೆರಳಿ ಗದ್ದಲ ಎಬ್ಬಿಸಿದರು. ಜಾನ್ ಬ್ರಿಟ್ಟಾಸ್ ಮತ್ತು ಇತರ ಕೆಲವು ಸದಸ್ಯರು ಮಸೂದೆ ಮಂಡನೆಗೆ ಆಕ್ಷೇಪಿಸಿ ನೋಟಿಸ್ ಸಲ್ಲಿಸಿದರು.

ಈ ಮಸೂದೆಯಿಂದ ಚುನಾವಣಾ ಆಯೋಗವು ಸರ್ಕಾರದ ಕೈಗೊಂಬೆಯಾಗಲಿದೆ. ಈಗಿರುವ ಆಯೋಗವನ್ನು 'ಮೋದಿ ಚುನಾವಣಾ ಆಯೋಗ' ವೆಂದು ಬದಲಾಯಿಸುವುದು ಸೂಕ್ತ ಎಂದು ದೂರಿದರು.

7ನೇ ಪುಟ ನೋಡಿ

ಯಾರಿಗೆ ಅರ್ಹತೆ?

ಸರ್ಕಾರದ ಕಾರ್ಯದರ್ಶಿ ಶ್ರೇಣಿಯ ಹುದ್ದೆಯಲ್ಲಿ ಇರುವವರು ಅಥವಾ ಆ ಹುದ್ದೆಯನ್ನು ಈ ಹಿಂದೆ ಹೊಂದಿದ್ದವರನ್ನು ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಆಯುಕ್ತರ ನೇಮಕಕ್ಕೆ ಪರಿಗಣಿಸಲಾಗುತ್ತದೆ. ಚುನಾವಣೆ ನಿರ್ವಹಣೆಯ ಅನುಭವ, ಜ್ಞಾನ ಇರಬೇಕು. ಬದ್ಧತೆ ಹೊಂದಿರಬೇಕು.

ಶಾಂತಿ ಸ್ಥಾಪನೆ ಭರವಸೆ

ಸಂಘರ್ಷಪೀಡಿತ ರಾಜ್ಯದ ಜನರಲ್ಲಿ ವಿಶ್ವಾಸ ಮೂಡಿಸಲು ಯತ್ನ: ಪ್ರಧಾನಿ

ನವದೆಹಲಿ (ಪಿಟಿಐ): ಕೋಮು ಸಂಘರ್ಷದಿಂದ ನಲುಗಿರುವ ಮಣಿಪುರ ರಾಜ್ಯದಲ್ಲಿ ಶಾಂತಿ ಮರುಸ್ಥಾಪನೆಗೆ ಕೇಂದ್ರ ಮತ್ತು ಮಣಿಪುರ ರಾಜ್ಯ ಸರ್ಕಾರಗಳು ಕೆಲಸ ಮಾಡುತ್ತಿವೆ ಎಂದು ಪ್ರಧಾನಿ ನರೇಂದ್ರ ಮೋದಿ ಅವರು ಜನರಿಗೆ ಭರವಸೆ ನೀಡಿದ್ದಾರೆ. ಮಹಿಳೆಯರ ಮೇಲೆ ದೌರ್ಜನ್ಯ ಎಸಗುವವರ ಮೇಲೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದೂ ಅವರು ಹೇಳಿದ್ದಾರೆ.

ವಿರೋಧ ಪಕ್ಷಗಳ ಮೈತ್ರಿಕೂಟ 'ಇಂಡಿಯಾ' ಪರವಾಗಿ ಕಾಂಗ್ರೆಸ್ ಸಂಸದ ಗೌರವ್ ಗೊಗೋಯಿ ಅವರು ಮಂಡಿಸಿದ್ದ ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಮೋದಿ ಅವರು ಲೋಕಸಭೆಯಲ್ಲಿ ಗುರುವಾರ ಉತ್ತರ ನೀಡಿದರು. ರಾಹುಲ್ ಗಾಂಧಿ ಅವರ ಭಾಷಣವನ್ನು ಉಲ್ಲೇಖಿಸಿ, ಕೆಲವರು 'ಭಾರತ ಮಾತೆ'ಯ ಸಾವು ಬಯಸುತ್ತಿದ್ದಾರೆ. ಇಂಥ ಹೇಳಿಕೆಯು ಪ್ರತಿಯೊಬ್ಬ ಭಾರತೀಯನ ಭಾವನೆಗಳಿಗೆ ನೋವುಂಟು ಮಾಡಿದೆ ಎಂದು ಪ್ರತಿಪಾದಿಸಿದರು.

ಕಾಂಗ್ರೆಸ್ ಆಡಳಿತವನ್ನು ಟೀಕಿಸುವುದಕ್ಕೇ ಆದ್ಯತೆ ನೀಡಿದ ಅವರು, ಮಣಿಪುರದಲ್ಲಿ ನಡೆದಿರುವ ಹಿಂಸಾಚಾರ ನೋವುಂಟು ಮಾಡಿದೆ. ಮಹಿಳೆಯರ ವಿರುದ್ಧದ ಅಪರಾಧ ಒಪ್ಪಿತವಲ್ಲ. ಈಶಾನ್ಯ ರಾಜ್ಯಗಳಲ್ಲಿನ ಅಭಿವೃದ್ಧಿ ಕಾರ್ಯಗಳ ವಿವರ ನೀಡಿದ ಅವರು, 'ಈಶಾನ್ಯದ ರಾಜ್ಯಗಳಿಗೆ ನಾನೇ 50 ಸಾರಿ ಯಾದರೂ ಭೇಟಿ ನೀಡಿದ್ದೇನೆ' ಎಂದು ಹೇಳಿದರು.

7ನೇ ಪುಟ ನೋಡಿ



ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಮೋದಿ ಅವರು ಲೋಕಸಭೆಯಲ್ಲಿ ಗುರುವಾರ ಉತ್ತರ ನೀಡಿದರು

ಗಡಿಯಲ್ಲಿ, ಉಗ್ರರ ದಾಳಿ ಸಂದರ್ಭದಲ್ಲಿ ಕಾಂಗ್ರೆಸ್ ಮತ್ತು ಅದರ ಮಿತ್ರಪಕ್ಷಗಳಿಗೆ ಪಾಕಿಸ್ತಾನದ ಮೇಲೆ ಹೆಚ್ಚು ನಂಬಿಕೆ. ಭಾರತೀಯರ ಭಾವನೆಗಳನ್ನು ಅವು ಕಡೆಗಣಿಸುತ್ತಿವೆ
ನರೇಂದ್ರ ಮೋದಿ, ಪ್ರಧಾನಿ

ಪ್ರಧಾನಿ ಭಾಷಣದಲ್ಲಿ ಹೊಸದೇನಿದೆ? ಅವರು ದೇಶಕ್ಕೆ ಏನು ಹೇಳುತ್ತಿದ್ದಾರೆ? ಚರ್ಚೆಯಲ್ಲಿ ಪ್ರಸ್ತಾಪವಾಗಿದ್ದ ಅಂಶಗಳಿಗೆ ಅವರಿಂದ ಉತ್ತರವೇ ಇರಲಿಲ್ಲ
ಶಶಿ ತರೂರ್, ಕಾಂಗ್ರೆಸ್ ಸದಸ್ಯ

ಭಾಷಣದ ಕೊನೆಗೆ ಮಣಿಪುರ ಪ್ರಸ್ತಾಪ!

ಅವಿಶ್ವಾಸ ನಿರ್ಣಯದ ಮೇಲಿನ ಚರ್ಚೆಗೆ ಗುರುವಾರ ಲೋಕಸಭೆಯಲ್ಲಿ ಉತ್ತರಿಸಿದ ಪ್ರಧಾನಿ ಮೋದಿ ಭಾಷಣದ ಮೊದಲ 90 ನಿಮಿಷ ಮಣಿಪುರ ಬೆಳವಣಿಗೆಯ ಉಲ್ಲೇಖವೇ ಇರಲಿಲ್ಲ. ಇದಕ್ಕೆ ಆಕ್ಷೇಪಿಸಿದ ಪ್ರತಿಪಕ್ಷಗಳ ಸದಸ್ಯರು ಕಲಾಪ ಬಹಿಷ್ಕರಿಸಿ ಸಭಾತ್ಯಾಗ ಮಾಡಿದರು.

ಒಂದೆಡೆ ಮೋದಿ ಮಾತನಾಡುತ್ತಿದ್ದರೆ, ವಿರೋಧಪಕ್ಷಗಳ ಸಾಲಿನಿಂದ 'ಮಣಿಪುರ, ಮಣಿಪುರ' ಘೋಷಣೆ ಮೊಳಗುತ್ತಿತ್ತು. ಜನಾಂಗೀಯ ಸಂಘರ್ಷ ಪೀಡಿತ ಮಣಿಪುರ ಕುರಿತು ಮಾತನಾಡಬೇಕು ಎಂದು ವಿರೋಧಪಕ್ಷಗಳು ಆಗ್ರಹಪಡಿಸುತ್ತಿದ್ದವು.

ಒಂದೂವರೆ ಗಂಟೆ ಭಾಷಣದದಲ್ಲಿ ಮಣಿಪುರ ವಿಷಯವೇ ಪ್ರಸ್ತಾಪವಾಗದಿದ್ದಾಗ 'ಇಂಡಿಯಾ' ಮೈತ್ರಿಕೂಟದ ಸದಸ್ಯರು ಸಭಾತ್ಯಾಗ ಮಾಡಿದರು.

7ನೇ ಪುಟ ನೋಡಿ

ಯುಪಿಐ ಲೈಟ್ ಪಾವತಿ ಮಿತಿ ₹500ಕ್ಕೆ ಏರಿಕೆ

UPI UNIFIED PAYMENTS INTERFACE

ಮುಂಬೈ (ಪಿಟಿಐ): ಯುಪಿಐ ಲೈಟ್ ವಾಲೆಟ್ ಮೂಲಕ ಮಾಡುವ ಪಾವತಿಗಳ ಮಿತಿಯನ್ನು ಈಗಿರುವ ₹200ರಿಂದ ₹500ಕ್ಕೆ ಹೆಚ್ಚಿಸಲು ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ನಿರ್ಧರಿಸಿದೆ. ದೇಶದಲ್ಲಿ ಡಿಜಿಟಲ್ ಪಾವತಿ ವ್ಯವಸ್ಥೆಗೆ ಹೆಚ್ಚಿನ ಉತ್ತೇಜನ ನೀಡುವ ಉದ್ದೇಶದಿಂದ ಈ ಕ್ರಮ ಕೈಗೊಂಡಿದೆ.

10ನೇ ಪುಟ ನೋಡಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ ಮಾದರಿ ಎಲ್ಲ ನಗರ, ಪಟ್ಟಣಗಳಲ್ಲೂ ಜಾರಿ

ಅಕ್ರಮ ಕಟ್ಟಡಕ್ಕೂ ತೆರಿಗೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಲ್ಲ ನಗರ ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಸರ್ಕಾರಿ ಜಮೀನಿನಲ್ಲಿ ನಿರ್ಮಿಸಿರುವ ಅನಧಿಕೃತ ಕಟ್ಟಡಗಳನ್ನು ಬಿಟ್ಟು, ಇತರೆ ಎಲ್ಲ ಅಕ್ರಮ ಕಟ್ಟಡಗಳು, ಭೂಮಿ- ಖಾಲಿ ನಿವೇಶನ, ಕಟ್ಟಡವನ್ನು ಹೊಂದಿರುವ ಭೂಮಿ, ಬೈ-ಲಾ ಉಲ್ಲಂಘಿಸಿ ನಿರ್ಮಿಸಿದ ಕಟ್ಟಡ, ಅನಧಿಕೃತ ಬಡಾವಣೆಗಳಲ್ಲಿ ನಿರ್ಮಿಸಿರುವ ಕಟ್ಟಡಗಳಿಂದ ಆಸ್ತಿ ತೆರಿಗೆ ವಸೂಲಿ ಮಾಡಲು ಸರ್ಕಾರ ಚಿಂತನೆ ನಡೆಸಿದೆ.

ಇದರ ಸಾಧಕ- ಬಾಧಕಗಳನ್ನು ಪರಿಶೀಲಿಸಿ ಅಂತಿಮ ತೀರ್ಮಾನ ತೆಗೆದುಕೊಳ್ಳಲು ಸಚಿವ ಸಂಪುಟ ಉಪ ಸಮಿತಿಯೊಂದನ್ನು ರಚಿಸಲು ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ನಿರ್ಧರಿಸಲಾಯಿತು ಎಂದು ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವ ಎಚ್.ಕೆ.ಪಾಟೀಲ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು. ಇದನ್ನು ಜಾರಿ ಮಾಡುವುದರಿಂದ ಸ್ಥಳೀಯ ಸಂಸ್ಥೆಗಳು ಮತ್ತು ಮಹಾನಗರ ಪಾಲಿಕೆಗಳ ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿದೆ ಎಂದರು.

ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಕಾಯ್ದೆ- 2020ರ ಕಲಂ 144(6) ಮತ್ತು (21)ರ ಅಂಶವನ್ನು ರಾಜ್ಯದ ಇತರೆ ಮಹಾನಗರಪಾಲಿಕೆಗಳು ಮತ್ತು ನಗರಸ್ಥಳೀಯ ಸಂಸ್ಥೆಗಳಿಗೂ ವಿಸ್ತರಿಸಲು ಕರ್ನಾಟಕ ಮಹಾನಗರ ಪಾಲಿಕೆಗಳ ಕಾಯ್ದೆ 1976 ಮತ್ತು ಕರ್ನಾಟಕ ಪುರಸಭೆಗಳ ಕಾಯ್ದೆ 1964ರಲ್ಲಿ ಅಳವಡಿಸಿಕೊಳ್ಳುವ ಬಗ್ಗೆ ಚರ್ಚೆಯ ಅಗತ್ಯವಿದೆ. ಅದಕ್ಕಾಗಿ ಸಂಪುಟ ಉಪಸಮಿತಿ ರಚಿಸುವುದು ಸೂಕ್ತ ಎಂಬ ಅಭಿಪ್ರಾಯ ಸಂಪುಟ ಸಭೆಯಲ್ಲಿ ವ್ಯಕ್ತವಾಯಿತು ಎಂದರು.

ಬಿಬಿಎಂಪಿ ಕಾಯ್ದೆ ಪ್ರಕಾರ, ಸರ್ಕಾರಿ ಜಮೀನಿನಲ್ಲಿ ನಿರ್ಮಿಸಿರುವ ಅನಧಿಕೃತ ಕಟ್ಟಡಗಳನ್ನು ತೆರಿಗೆ ವ್ಯಾಪ್ತಿಗೆ ತರದೇ, ಅದನ್ನು ತೆರವುಗೊಳಿಸಬಹುದು. ಖಾಸಗಿ ಜಮೀನಿನಲ್ಲಿ ನಿರ್ಮಿಸಿದ ಕಟ್ಟಡ, ಭೂಮಿ- ಖಾಲಿ ನಿವೇಶನಗಳು, ಕಟ್ಟಡವನ್ನು ಹೊಂದಿರುವ ಭೂಮಿ, ಕಟ್ಟಡ ನಿಯಮ ಉಲ್ಲಂಘನೆ ಮಾಡಿರುವ ಕಟ್ಟಡ, ಅನಧಿಕೃತ ಬಡಾವಣೆಯಲ್ಲಿರುವ ಕಂದಾಯ ಭೂಮಿಯ ಮೇಲೆ ಇರುವ ಅಥವಾ ಮುಕ್ತಾಯ ಪ್ರಮಾಣ ಪತ್ರ (ಒ.ಸಿ) ಪಡೆಯದೇ ಇರುವ ಕಟ್ಟಡಗಳಿಗೆ ತೆರಿಗೆ ವಿಧಿಸಬಹುದು ಎಂದರು.

6ನೇ ಪುಟ ನೋಡಿ

ಸೈಬರ್ ಭದ್ರತಾ ನೀತಿಗೆ ಅಸ್ತು



ಸೈಬರ್ ಭದ್ರತೆ ಮತ್ತು ದತ್ತಾಂಶ ಖಾಸಗಿತನದ ಬಗ್ಗೆ ಜಾಗೃತಿ ಮೂಡಿಸುವ 'ಕರ್ನಾಟಕ ಸೈಬರ್ ಭದ್ರತಾ ನೀತಿ 2023'ಕ್ಕೆ ಸಚಿವ ಸಂಪುಟ ಸಭೆ ಒಪ್ಪಿಗೆ ನೀಡಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ರಾಜ್ಯ ಸರ್ಕಾರ, ಸ್ಥಳೀಯ ಸಂಸ್ಥೆಗಳು, ಪಂಚಾಯಿತಿಗಳು ಈ ಜಾಗೃತಿ ಕಾರ್ಯಕ್ರಮವನ್ನು ಕಾಲಕಾಲಕ್ಕೆ ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸುವುದರ ಜತೆಗೆ, ಮೌಲ್ಯಮಾಪನವನ್ನೂ ನಡೆಸಲಿವೆ ಎಂದರು. ಸೈಬರ್ ಭದ್ರತೆ ಕುರಿತು ಜಾಗೃತಿ ಮೂಡಿಸಲು ಕಾರ್ಯಕ್ರಮ ರೂಪಿಸಲಾಗುವುದು. ಪ್ರಸ್ತುತ ಇರುವ ಸೈಬರ್ ಭದ್ರತೆ ಮತ್ತು ದತ್ತಾಂಶ ಖಾಸಗಿತನದ ಕುರಿತು ಸಮೀಕ್ಷೆಗಳನ್ನು ನಡೆಸಲಾಗುವುದು ಎಂದು ಹೇಳಿದರು.

ಸ್ಥಳೀಯ ಶೈಕ್ಷಣಿಕ ಸಂಸ್ಥೆಗಳು ಮತ್ತು ಸ್ವಯಂ ಸೇವಕರ ಮೂಲಕ ಜಾಗೃತಿ ಮೂಡಿಸಲು ವಿಕೇಂದ್ರಿಕೃತ ಕ್ರಮ ಕೈಗೊಳ್ಳಲಾಗುವುದು. ಸರ್ಕಾರದ ನೇತೃತ್ವದಲ್ಲಿ ನಡೆಯುವ ಹೊಸ ತಂತ್ರಾಂಶಗಳ ಪ್ರಾರಂಭ, ಆನ್‌ಲೈನ್ ಬ್ಯಾಂಕಿಂಗ್ ಮತ್ತು ತಾಂತ್ರಿಕ ಸಾಕ್ಷರತೆ ಕಾರ್ಯಕ್ರಮಗಳು ಸೈಬರ್ ಭದ್ರತೆ, ಜಾಗೃತಿ ಮತ್ತು ತರಬೇತಿಯನ್ನು ಒಳಗೊಂಡಿರುತ್ತದೆ ಎಂದು ಪಾಟೀಲ ತಿಳಿಸಿದರು.

ತಾಳೆ ಬದಲಿಗೆ ಸೂರ್ಯಕಾಂತಿ ಎಣ್ಣೆ

ಸಮಗ್ರ ಶಿಶು ಅಭಿವೃದ್ಧಿ ಯೋಜನೆಯಡಿ ಅಂಗನವಾಡಿ ಕೇಂದ್ರಗಳ ಫಲಾನುಭವಿಗಳಿಗೆ ಪೂರಕ ಪೌಷ್ಟಿಕ ಆಹಾರ ತಯಾರಿಕೆಗೆ ತಾಳೆ ಎಣ್ಣೆ (ಪಾಮೋಲಿನ್) ಬದಲಿಗೆ ಸೂರ್ಯಕಾಂತಿ ಎಣ್ಣೆಯನ್ನು ಬಳಸಲು ತೀರ್ಮಾನಿಸಲಾಗಿದೆ ಎಂದು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು. ರಾಜ್ಯದಲ್ಲಿ ರೈತರು ಯಥೇಚ್ಛವಾಗಿ ಸೂರ್ಯಕಾಂತಿ ಬೆಳೆಯುತ್ತಾರೆ. ಸರ್ಕಾರದ ನಿರ್ಧಾರದಿಂದ ರೈತರಿಗೂ ಅನುಕೂಲವಾಗುತ್ತದೆ. ಸೂರ್ಯಕಾಂತಿ ಎಣ್ಣೆಯನ್ನು ಫಲಾನುಭವಿಗಳ ಸಂಖ್ಯೆಗೆ ಅನುಗುಣವಾಗಿ ₹66.04 ಕೋಟಿ ವೆಚ್ಚದಲ್ಲಿ ಟೆಂಡರ್ ಕರೆದು ಎಣ್ಣೆ ಖರೀದಿಸಲು ಸಂಪುಟ ಸಭೆ ತೀರ್ಮಾನಿಸಿದೆ ಎಂದರು.

ಮಣಿಪುರ: ಸಾಮೂಹಿಕ ಅತ್ಯಾಚಾರದ ದೂರು

ಪ್ರಜಾವಾಣಿ ವಾರ್ತೆ

ಇಂಫಾಲ್ : ಅಪರಿಚಿತ 'ಕುಕಿ ದುಷ್ಕರ್ಮಿಗಳು' ತಮ್ಮ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದಾರೆ ಎಂದು ಮಣಿಪುರದ ಚುರಚಾಂದ್‌ಪುರ ಜಿಲ್ಲೆಯ 37 ವರ್ಷದ ವಿವಾಹಿತ ಮಹಿಳೆಯೊಬ್ಬರು ಗುರುವಾರ ಝೀರೊ ಎಫ್‌ಐಆರ್ ದಾಖಲಿಸಿದ್ದಾರೆ. ಕೃತ್ಯವು ಮೇ 3ರಂದು ನಡೆದಿದೆ ಎಂದು ದೂರಿನಲ್ಲಿ ಅವರು ಹೇಳಿದ್ದಾರೆ.

ಕುಕಿ ಸಮುದಾಯವು ಪ್ರಬಲವಾಗಿರುವ ಚುರಚಾಂದ್‌ಪುರ ಜಿಲ್ಲೆಯಲ್ಲಿ ಕೋಮು ಹಿಂಸಾಚಾರ ಆರಂಭವಾದ ಬಳಿಕ ತಾವು ಮನೆಯಿಂದ ಪರಾರಿಯಾಗುವಾಗ ತಮ್ಮ ಮೇಲೆ ಅತ್ಯಾಚಾರ ಎಸಗಲಾಗಿದೆ ಎಂದಿದ್ದಾರೆ. ಮಹಿಳೆಯು ಈಗ ಮೈತೇಯಿ ಸಮುದಾಯವು ಪ್ರಬಲವಾಗಿರುವ ಬಿಷ್ಣುಪುರ ಜಿಲ್ಲೆಯ ಸಂತ್ರಸ್ತರ ಶಿಬಿರದಲ್ಲಿ ಆಶ್ರಯ ಪಡೆದಿದ್ದಾರೆ.

ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡಿದ್ದಾರೆ. ಬಳಿಕ ಅದನ್ನು ಕೃತ್ಯ ನಡೆದ ಚುರಚಾಂದ್‌ಪುರ ಮಹಿಳಾ ಪೊಲೀಸ್ ಠಾಣೆಗೆ ವರ್ಗಾಯಿಸಿದ್ದಾರೆ. 'ಝೀರೊ ಎಫ್‌ಐಆರ್' ಅನ್ನು ಯಾವುದೇ ಠಾಣೆಯಲ್ಲಿ ಬೇಕಿದ್ದರೂ ದಾಖಲಿಸಬಹುದು. ನಂತರ ಅದನ್ನು ಕೃತ್ಯ ನಡೆದ ಸ್ಥಳದ ಪೊಲೀಸ್ ಠಾಣೆಗೆ ವರ್ಗಾಯಿಸಲಾಗುತ್ತದೆ.

ಸಾಮೂಹಿಕ ಅತ್ಯಾಚಾರ, ಮಹಿಳೆಯ ಘನತೆಯನ್ನು ಕುಗ್ಗಿಸುವ ಉದ್ದೇಶದಿಂದ ಹಲ್ಲೆ ಮತ್ತು ಅಪರಾಧ ಒಳಸಂಚು ನಡೆಸಲಾಗಿದೆ ಎಂದು ಎಫ್‌ಐಆರ್‌ನಲ್ಲಿ ಹೇಳಲಾಗಿದೆ.

7ನೇ ಪುಟ ನೋಡಿ

ಅಂಗನವಾಡಿ ಕೇಂದ್ರಗಳಿಗೆ ಬಿಡುಗಡೆಯಾಗದ ಅನುದಾನ

ಬಾಡಿಗೆ ಕಟ್ಟಲು ಮಾಂಗಲ್ಯ ಅಡ!

• ಸಂತೋಷ ಈ. ಚಿನಗುಡಿ, ಸಂಧ್ಯಾ ಹೆಗಡೆ

ಬೆಳಗಾವಿ/ಮಂಗಳೂರು: ಅಂಗನವಾಡಿ ಕೇಂದ್ರಗಳಿಗೆ ಅನುದಾನ ಬಿಡುಗಡೆಯಾಗದ ಕಾರಣ ಬೆಳಗಾವಿಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಮಾಂಗಲ್ಯ ಅಡವಿಟ್ಟು ಬಾಡಿಗೆ ಕಟ್ಟಿದರೆ, ಮತ್ತೊಬ್ಬ ಕಾರ್ಯಕರ್ತೆ ಸಾಲ ಮಾಡಿ ಕಳೆದ 20 ತಿಂಗಳಿನಿಂದ ಬಾಡಿಗೆ ಕಟ್ಟುತ್ತಿದ್ದಾರೆ.

ಬೆಳಗಾವಿಯ ಮೆಣಸಿನಗಲ್ಲಿಯ ಅಂಗನವಾಡಿ ಕಾರ್ಯಕರ್ತೆಯೊಬ್ಬರು ಬಾಡಿಗೆ ಕಟ್ಟಲು ಅಡವಿಟ್ಟಿದ್ದ ಮಾಂಗಲ್ಯವನ್ನು ಅಧಿಕಾರಿಗಳು ಹಣ ಪಾವತಿಸಿ, ಬಿಡಿಸಿಕೊಟ್ಟಿದ್ದಾರೆ. ದರಬಾರಗಲ್ಲಿಯ ಅಂಗನವಾಡಿಗೆ 20 ತಿಂಗಳಿಂದ ಹಣ ಬಿಡುಗಡೆಯಾಗಿಲ್ಲ. ಕಾರ್ಯಕರ್ತೆ ಈಗಲೂ ಸಾಲ ಮಾಡಿ ಬಾಡಿಗೆ ಕಟ್ಟುತ್ತಿದ್ದಾರೆ.

ರಾಜ್ಯದ ಪ್ರತೀ ಜಿಲ್ಲೆಯಲ್ಲೂ ಇಂತಹ ಹಲವು ಉದಾಹರಣೆಗಳು ಸಿಗುತ್ತವೆ. ಕೇಂದ್ರವನ್ನು ಮುಚ್ಚುವ ಸ್ಥಿತಿ ಬರಬಾರದು ಎಂದು ಕಾರ್ಯಕರ್ತೆಯರೇ ಎಷ್ಟೋ ಕಡೆ ಬಾಡಿಗೆ ಹಣವನ್ನು ಹೊಂದಿಸುತ್ತಿದ್ದಾರೆ. 'ಅಂಗನವಾಡಿ ಕಟ್ಟಡದ ಬಾಡಿಗೆ ಮಾತ್ರವಲ್ಲ, ಮೊಟ್ಟೆ ಖರೀದಿ ಮಾಡಿದ ಹಣವನ್ನೂ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯು ಏಳು ತಿಂಗಳಗಳಿಂದ ಬಾಕಿ ಉಳಿಸಿಕೊಂಡಿದೆ. ಹಲವು ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಿಲ್ಲ' ಎಂದು ಬೆಳಗಾವಿಯ ಅಂಗನವಾಡಿ ಕಾರ್ಯಕರ್ತೆಯರು ದೂರಿದರು.

ಬಾಡಿಗೆ ಪಾವತಿಸದ ಕಾರಣ ಜಾಗ ಖಾಲಿ ಮಾಡುವಂತೆ ಕಟ್ಟಡ ಮಾಲೀಕರು ಒಂದೆಡೆ ಒತ್ತಡ ಹೇರುತ್ತಿದ್ದರೆ, ಇನ್ನೊಂದೆಡೆ ಅನುದಾನ ಬಿಡುಗಡೆ ನಿರೀಕ್ಷೆಯಲ್ಲಿ ಇಲಾಖೆಯ ಅಧಿಕಾರಿಗಳು ದಿನ ದೂಡುತ್ತಿದ್ದಾರೆ. ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಗೆ ಏಳು ತಿಂಗಳಿನಿಂದ ಅನುದಾನ ಬಿಡುಗಡೆ ಆಗಿಲ್ಲ. ಇದರ ಪರಿಣಾಮ ವಿದ್ಯುತ್, ಇಂಟರ್‌ನೆಟ್ ಬಿಲ್ ಪಾವತಿಸಲು, ವಾಹನಗಳಿಗೆ ಇಂಧನ ಹಾಕಿಸಲು ಅಲ್ಲದೇ ಅಂಗನವಾಡಿ ಕೇಂದ್ರಗಳ ಕಟ್ಟಡಕ್ಕೆ ಬಾಡಿಗೆ ಕಟ್ಟಲು ಸಾಧ್ಯವಾಗಿಲ್ಲ.

ರಾಜ್ಯದಲ್ಲಿ ಒಟ್ಟು 66,361 ಅಂಗನವಾಡಿ ಕೇಂದ್ರಗಳಿದ್ದು, 19,802 ಕೇಂದ್ರಗಳಿಗೆ ಸ್ವಂತ ಕಟ್ಟಡಗಳಿಲ್ಲ. ಸ್ವಂತ ಕಟ್ಟಡ ಇಲ್ಲದ ಅಂಗನವಾಡಿಗಳಿಗೆ ಗ್ರಾಮ ಪಂಚಾಯಿತಿ ಇಲ್ಲವೆ ಖಾಸಗಿ ಕಟ್ಟಡಗಳನ್ನು ಬಾಡಿಗೆ ಪಡೆದು ಒದಗಿಸಲಾಗಿದೆ.

7ನೇ ಪುಟ ನೋಡಿ



ಬೆಳಗಾವಿ ಜಿಲ್ಲೆಯ ಸವದತ್ತಿ ತಾಲ್ಲೂಕಿನ ಯಡಹಳ್ಳಿ ಅಂಗನವಾಡಿ ಕೇಂದ್ರದಲ್ಲಿ ಪೌಷ್ಟಿಕ ಆಹಾರ ಸೇವಿಸಿದ ಚಿಣ್ಣರು

ಈಗಾಗಲೇ ₹20 ಕೋಟಿ ಅನುದಾನ ಬಿಡುಗಡೆ ಆಗಿದ್ದು, ಕಳೆದ ವಾರ ಜಿಲ್ಲಾಧಿಕಾರಿಗಳ ಖಾತೆಗೆ ಹಣ ಸಂದಾಯವಾಗಿದೆ. ಅಂಗನವಾಡಿ ಕೇಂದ್ರಗಳ ಸಮಸ್ಯೆ ಶೀಘ್ರವೇ ನೀಗಲಿದೆ
ಲಕ್ಷ್ಮೀ ಹೆಬ್ಬಾಳಕರ, ಸಚಿವೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ

ಅಂಗನವಾಡಿಗಳು ಶಿಕ್ಷಣ ವ್ಯವಸ್ಥೆಯ ಅಡಿಪಾಯ. ಪೌಷ್ಟಿಕಾಂಶ ವಿತರಣೆಯ ಕೇಂದ್ರಗಳು ಕೂಡ. ಸ್ವಂತ ಕಟ್ಟಡದಲ್ಲಿ ಇಲ್ಲದ ಕಾರಣ ತಳಮಟ್ಟದಲ್ಲೇ ವ್ಯವಸ್ಥೆ ಸಡಿಲಗೊಂಡಿದೆ
ಮಹಾಂತೇಶ ಕಂಬಾರ, ಮಾಹಿತಿ ಹಕ್ಕು ಕಾರ್ಯಕರ್ತ, ಚನ್ನಮ್ಮನ ಕಿತ್ತೂರು

ಅನುದಾನ ವಿಳಂಬ ಆಗಿರುವುದನ್ನು ಹಿರಿಯ ಅಧಿಕಾರಿಗಳ ಗಮನಕ್ಕೆ ತರಲಾಗಿದೆ. ಶೀಘ್ರ ಅನುದಾನ ಮಂಜೂರು ಆಗುವ ನಿರೀಕ್ಷೆಯಲ್ಲಿದ್ದೇವೆ
ಪಾಪ ಬೋವಿ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪನಿರ್ದೇಶಕ, ಮಂಗಳೂರು

ಬಿಬಿಎಂಪಿ: ಏಕಬಳಕೆ ಪ್ಲಾಸ್ಟಿಕ್ ನಿಷೇಧ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿ ಕಚೇರಿಗಳಲ್ಲಿ ಏಕ ಬಳಕೆ ಪ್ಲಾಸ್ಟಿಕ್ ವಸ್ತುಗಳ ಬಳಕೆಯನ್ನು ಸಂಪೂರ್ಣವಾಗಿ ನಿಲ್ಲಿಸಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚಿಸಿದ್ದಾರೆ.

ಏಕ ಬಳಕೆ ಪ್ಲಾಸ್ಟಿಕ್ ಬಳಕೆಯನ್ನು ನಿಷೇಧಿಸಲಾಗಿದ್ದರೂ, ಕೆಲವು ಸಂದರ್ಭಗಳಲ್ಲಿ ಬಳಕೆಯಾಗುತ್ತಿರುವುದು ಕಂಡುಬಂದಿದೆ. ಇದನ್ನು ಕೂಡಲೇ ನಿಲ್ಲಿಸಬೇಕು. ಈ ನಿಟ್ಟಿನಲ್ಲಿ ಕೆಲವು ಕ್ರಮಗಳನ್ನು ಅನುಸರಿಸಬೇಕು ಎಂದು ಆ.9ರಂದು ಹೊರಡಿಸಿರುವ ಸುತ್ತೋಲೆಯಲ್ಲಿ ತಿಳಿಸಿದ್ದಾರೆ.

ಪಾಲಿಕೆ ಹಾಗೂ ಬಿಎಸ್‌ಡಬ್ಲ್ಯುಎಂಎಲ್‌ನ ಸಭೆಗಳಲ್ಲಿ ಪ್ಲಾಸ್ಟಿಕ್ ಬಾಟಲ್‌ನಲ್ಲಿ ನೀರು ಪೂರೈಸುವಂತಿಲ್ಲ. ಸ್ಟೀಲ್ ಅಥವಾ ಗಾಜಿನ ಲೋಟಗಳಲ್ಲಿ ನೀಡಬೇಕು.

ಪ್ಲಾಸ್ಟಿಕ್ ಬ್ಯಾಗ್, ಪ್ಲಾಸ್ಟಿಕ್‌ನಲ್ಲಿ ಪ್ಯಾಕ್ ಮಾಡಿದ ಊಟ, ಉಪಾಹಾರಗಳನ್ನು ಬಳಸುವಂತಿಲ್ಲ. ಊಟದ ಡಬ್ಬ, ಕ್ಯಾರಿಯರ್‌ಗಳನ್ನು ತರಿಸುವ ವ್ಯವಸ್ಥೆ ಮಾಡಿಕೊಳ್ಳಬೇಕು.

ಸಭೆ, ಸಮಾರಂಭಗಳಲ್ಲಿ ಪ್ಲಾಸ್ಟಿಕ್ ತಟ್ಟೆ, ಲೋಟ, ಚಮಚ ಹಾಗೂ ಇತರೆ ವಸ್ತುಗಳನ್ನು ಬಳಸುವಂತಿಲ್ಲ. 'ಸ್ಟೀಲ್ ಕಟ್‌ಲೆರಿ ಬ್ಯಾಂಕ್' ತೆರೆದು ಅವಶ್ಯ ಸ್ಟೀಲ್ ಸಾಮಗ್ರಿಗಳನ್ನು ಖರೀದಿಸಿ, ಬಳಸಬೇಕು.

ಪ್ಲಾಸ್ಟಿಕ್ ಸ್ಟಿಕ್‌ನ ಇಯರ್ ಬಡ್, ಬಲೂನ್‌ಗಳಿಗೆ ಪ್ಲಾಸ್ಟಿಕ್ ಸ್ಟಿಕ್, ಕ್ಯಾಂಡಿ ಸ್ಟಿಕ್, ಆಲಂಕಾರ ಕಾರ್ಯಗಳಿಗೆ ಥರ್ಮಾಕೋಲ್ ಉಪಯೋಗಿಸುವಂತಿಲ್ಲ.

ಸಭೆ, ಸಮಾರಂಭಗಳಲ್ಲಿ ಪ್ಯಾಕಿಂಗ್‌ಗೆ ಪ್ಲಾಸ್ಟಿಕ್ ಬಳಸುವಂತಿಲ್ಲ. ಸಿಹಿ ಬಾಕ್ಸ್, ಆಹ್ವಾನ ಪತ್ರಿಕೆಗಳ ಮೇಲೆ ಸಿಗರೇಟ್ ಪ್ಯಾಕ್‌ಗಳ ಮೇಲೆ ಬಳಸುವಂತಹ ಪ್ಲಾಸ್ಟಿಕ್ ಹೊದಿಕೆಯನ್ನೂ ಬಳಸುವಂತಿಲ್ಲ.

ಪ್ಲಾಸ್ಟಿಕ್ ಕ್ಯಾರಿಬ್ಯಾಗ್ ಮತ್ತು ಥರ್ಮಾಕೋಲ್‌ನಿಂದ ಉತ್ಪತ್ತಿಯಾಗುವ, ಪ್ಲಾಸ್ಟಿಕ್, ಪಿವಿಸಿ ಬ್ಯಾನರ್‌ಗಳನ್ನು ಬಳಸುವಂತಿಲ್ಲ. ಬಟ್ಟೆ ಚೀಲಗಳು ಹಾಗೂ ಬಟ್ಟೆ ಬ್ಯಾನರ್‌ಗಳನ್ನು ಬಳಸಲು ಸೂಚಿಸಲಾಗಿದೆ.

ತ್ಯಾಜ್ಯ ವಿಂಗಡಣೆ ವೈಫಲ್ಯ ₹15 ಸಾವಿರ ದಂಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ತ್ಯಾಜ್ಯ ವಿಂಗಡಿಸದ ಕಾರಣ ರಾಜರಾಜೇಶ್ವರಿ ನಗರದ ಬಿಎಚ್‌ಇಎಲ್ ಲೇಔಟ್‌ನ ನಂಜುಂಡೇಶ್ವರ ರೆಸಿಡೆನ್ಸಿಗೆ ಬಿಬಿಎಂಪಿ ₹15 ಸಾವಿರ ದಂಡ ವಿಧಿಸಿದ್ದು, ಅನುಚಿತವಾಗಿ ವರ್ತಿಸಿ ನಿಂದಿಸಿದ ನಿವಾಸಿ ಮೇಲೆ ಕ್ರಿಮಿನಲ್ ಪ್ರಕರಣ ದಾಖಲಿಸಲಾಗಿದೆ.

ರಾಮ್ಕೊ ಬಿಎಚ್‌ಇಎಲ್ ಲೇಔಟ್‌ನ 10ನೇ ಅಡ್ಡರಸ್ತೆಯಲ್ಲಿರುವ ನಂಜುಂಡೇಶ್ವರ ರೆಸಿಡೆನ್ಸಿಯಲ್ಲಿ ತ್ಯಾಜ್ಯವನ್ನು ವಿಂಗಡಿಸದೆ, ಮಿಶ್ರಿತವಾಗಿಡಲಾಗುತ್ತಿತ್ತು. ಡೈಪರ್, ನ್ಯಾಪ್‌ಕಿನ್ ಸೇರಿದಂತೆ ಎಲ್ಲ ರೀತಿಯ ತ್ಯಾಜ್ಯವನ್ನೂ ಒಂದೇ ಡಬ್ಬದಲ್ಲಿಡಲಾಗುತ್ತಿತ್ತು. ಈ ಬಗ್ಗೆ ವಿಚಾರಿಸಿದಾಗ ವಸತಿ ಸಮುಚ್ಚಯದ ನಿವಾಸಿ ಸತೀಶ್ ಅವರು ಮಾರ್ಷಲ್‌ಗಳನ್ನು ನಿಂದಿಸಿದ್ದಾರೆ.

'ತ್ಯಾಜ್ಯವನ್ನು ವಿಂಗಡಿಸಿ ನೀಡುವುದಿಲ್ಲ, ಹೀಗೆಯೇ ತೆಗೆದುಕೊಂಡು ಹೋಗಬೇಕು' ಎಂದು ಸಿಬ್ಬಂದಿ ಮೇಲೆ ಕೂಗಾಡಿದ್ದಾರೆ. ಅವಾಚ್ಯ ಪದಗಳನ್ನೂ ಬಳಸಿದಿದ್ದಾರೆ.



ರಾಜರಾಜೇಶ್ವರಿನಗರ ಬಿಎಚ್‌ಇಎಲ್‌ನಲ್ಲಿರುವ ನಂಜುಂಡೇಶ್ವರ ರೆಸಿಡೆನ್ಸಿ ನಿವಾಸಿಗಳಿಗೆ ನೋಟಿಸ್ ನೀಡಿದ ಬಿಬಿಎಂಪಿ ಸಿಬ್ಬಂದಿ

ಈ ಬಗ್ಗೆ ಸಹಾಯಕ ಕಾರ್ಯಪಾಲಕ ಎಂಜಿನಿಯರ್, ಆರೋಗ್ಯಾಧಿಕಾರಿಗಳು ವಿಚಾರಿಸಲು ಸ್ಥಳಕ್ಕೆ ಹೋದಾಗಲೂ ಕೂಗಾಡಿದ್ದಾರೆ.

ಘನತ್ಯಾಜ್ಯ ನಿರ್ವಹಣೆ ಉಪನಿಯಮಗಳಂತೆ ನೋಟಿಸ್ ಜಾರಿ ಮಾಡಿದ ಬಿಬಿಎಂಪಿ ಅಧಿಕಾರಿಗಳು, ನಂಜುಂಡೇಶ್ವರ ರೆಸಿಡೆನ್ಸಿಗೆ ₹15 ಸಾವಿರ ದಂಡವನ್ನು ವಿಧಿಸಿದ್ದಾರೆ. ಅಲ್ಲಿನ ಅಧ್ಯಕ್ಷರು ಈ ಮೊತ್ತವನ್ನು ಪಾವತಿಸಿದ್ದಾರೆ.

ಬಿಬಿಎಂಪಿ ಸಿಬ್ಬಂದಿಯನ್ನು ನಿಂದಿಸಿ, ಮಿಶ್ರ ತ್ಯಾಜ್ಯವನ್ನೇ ನೀಡುವುದಾಗಿ ಸತೀಶ್ ಕೂಗಾಡಿದ್ದಾರೆ. ಅಲ್ಲದೆ ಮಿಶ್ರಿತ ಕಸವನ್ನು ಬ್ಲ್ಯಾಕ್ ಸ್ಪಾಟ್‌ನಲ್ಲಿ ಎಸೆದಿದ್ದಾರೆ. ಸಿಬ್ಬಂದಿಯನ್ನು ಏಕವಚನದಲ್ಲಿ ನಿಂದಿಸುವ ಜೊತೆಗೆ, ಪರಿಸರ ಹಾನಿಗೂ ಕಾರಣರಾಗಿದ್ದಾರೆ ಎಂದು ಅವರ ಮೇಲೆ ಘನತ್ಯಾಜ್ಯ ನಿರ್ವಹಣೆ ವಿಭಾಗದ ಸಹಾಯಕ ಕಾರ್ಯಪಾಲಕ ಎಂಜಿನಿಯರ್ ಅವರು ರಾಜರಾಜೇಶ್ವರಿ ನಗರದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿದ್ದಾರೆ.

ಮಣಿಪಾಲ್ ಆಸ್ಪತ್ರೆಯಿಂದ ಡೇ-ಕೇರ್ ಸೆಂಟರ್ ಪ್ರಾರಂಭ

ಬೆಂಗಳೂರು: ಹಳೆ ವಿಮಾನ ನಿಲ್ದಾಣ ರಸ್ತೆಯಲ್ಲಿರುವ ಮಣಿಪಾಲ್ ಆಸ್ಪತ್ರೆಯು ಕಿಮೋಥೆರಪಿಗೆ ವಿಶೇಷ 'ಡೇ-ಕೇರ್ ಸೆಂಟರ್' ನಿರ್ಮಿಸಿದ್ದು, ಇದಕ್ಕೆ ನಗರದಲ್ಲಿ ಗುರುವಾರ ಚಾಲನೆ ನೀಡಲಾಯಿತು.

ಈ ಸೆಂಟರ್ ಏಕಕಾಲದಲ್ಲಿ 50-55 ಕೀಮೋಥೆರಪಿಗಳನ್ನು ನಿರ್ವಹಿಸುವ ಸಾಮರ್ಥ್ಯ ಹೊಂದಿದೆ. ಅತ್ಯಾಧುನಿಕ ಸೌಲಭ್ಯ ಹೊಂದಿರುವ ಕೇಂದ್ರದಲ್ಲಿ 'ಸೈಟೊಟಾಕ್ಸಿಕ್ ಡ್ರಗ್ ಮಿಕ್ಸಿಂಗ್ ರೂಮ್' ಸಹ ಇದೆ.

ಕಾರ್ಯಕ್ರಮದಲ್ಲಿ ಕೇಂದ್ರದ ಬಗ್ಗೆ ಮಾಹಿತಿ ನೀಡಿದ ವೈದ್ಯಕೀಯ ಗಂಥಿ ವಿಭಾಗದ ಸಲಹೆಗಾರ್ತಿ ಡಾ. ಪೂನಮ್ ಪಾಟೀಲ್, 'ಚಿಕಿತ್ಸಾ ಅವಧಿಯಲ್ಲಿ ರೋಗಿಗಳಿಗೆ ಉತ್ತಮ ಅನುಭವವನ್ನು ಒದಗಿಸುವ ಮತ್ತು ಅವರ ಆಸ್ಪತ್ರೆ ಅವಧಿಯನ್ನು ಕಡಿತ ಮಾಡುವ ಉದ್ದೇಶದಿಂದ ಡೇ-ಕೇರ್ ಸೆಂಟರ್ ವಿನ್ಯಾಸ ಮಾಡಲಾಗಿದೆ. ಈ ಸೆಂಟರ್ ಕೀಮೋಥೆರಪಿ ಸೇರಿ ಎಲ್ಲಾ ರೀತಿಯ ಕ್ಯಾನ್ಸರ್ ಆರೈಕೆ ಒದಗಿಸುತ್ತದೆ' ಎಂದು ಹೇಳಿದರು.

ಆಸ್ಪತ್ರೆಯ ವೈದ್ಯಕೀಯ ಆಂಕೊಲಾಜಿ ವಿಭಾಗದ ಮುಖ್ಯಸ್ಥ ಡಾ.ಅಮಿತ್ ರೌಥನ್ ಹಾಗೂ ಆಸ್ಪತ್ರೆಯ ವೈದ್ಯರು ಇದ್ದರು.

ಮಿಸೆಸ್ ಇಂಡಿಯಾ ಕರ್ನಾಟಕ ಪ್ರಶಸ್ತಿ ಸ್ನೇಹಾ ಮುಡಿಗೆ



ಬೆಂಗಳೂರು: ಕೋಣನಕುಂಟೆಯಲ್ಲಿ ನಡೆದ ಒವೈಎಲ್ ಬಾತ್ ಸೋಪ್ (ಪ್ಲಾಂಟ್ ಸೈನ್ಸ್) ಮಿಸೆಸ್ ಇಂಡಿಯಾ ಕರ್ನಾಟಕ 2023 ಗ್ರ್ಯಾಂಡ್ 7ನೇ ಆವೃತ್ತಿಯ ರಾಜ್ಯ ಫೈನಲ್‌ನಲ್ಲಿ ಸ್ನೇಹಾ ಶ್ರೀಧರ್ ಕಿರೀಟ ಮುಡಿಗೇರಿಸಿಕೊಂಡರು.

ಗೋಡಂಬಿ ಶ್ರೀಧರ್ ಅವರ ಮಗಳಾದ ಸ್ನೇಹಾ ಶ್ರೀಧರ್ ಬಿ.ಕಾಂ ಉತ್ತೀರ್ಣರಾದ ಮೇಲೆ ತಂದೆಯ ಎಸ್‌ಎಸ್‌ಎಸ್‌ಎಸ್ ಕೇಟರಿಂಗ್ ಸರ್ವೀಸ್ ಉದ್ಯಮದಲ್ಲಿ ತೊಡಗಿಸಿಕೊಂಡಿದ್ದರು. ಹೋಮಿಯೋಪಥಿ ವೈದ್ಯ ರೋಹಿತ್ ಶ್ರೀವತ್ಸನ್ ಜತೆಗೆ ಮದುವೆಯಾದ ಮೇಲೆ ಬದುಕಿನ ಚಿತ್ರಣ ಇನ್ನೊಂದು ರೀತಿ ಬದಲಾಯಿಸಿಕೊಂಡರು. ವಿಕ್ಟರಿ ಹೋಮಿಯೊಪಥಿ ಸ್ಪೆಷಾಲಿಟಿ ಕ್ಲಿನಿಕ್‌ನ ಆಡಳಿತ ವ್ಯವಹಾರಗಳನ್ನು ನೋಡಿಕೊಳ್ಳುವ ಜವಾಬ್ದಾರಿ ವಹಿಸಿಕೊಂಡರು. ಜೊತೆಗೆ ವೈದ್ಯಕೀಯ ಅಭ್ಯಾಸ ನಡೆಸಿದರು.

ಎರಡು ಮಕ್ಕಳ ತಾಯಿ ಆಗಿರುವ ಸ್ನೇಹಾ ಈಗ ಮಿಸೆಸ್ ಇಂಡಿಯಾ ಕರ್ನಾಟಕ 2023 ಪ್ರಶಸ್ತಿ ಪಡೆದು ಸಾಧನೆ ಮಾಡಿದ್ದಾರೆ.

ನಿಂದನೆ, ಹಿಂಸೆ ಸಂದರ್ಭದಲ್ಲಿ ವೈದ್ಯರು ಚಿಕಿತ್ಸೆ ನಿರಾಕರಿಸಬಹುದು: ಎನ್‌ಎಂಸಿ

ನವದೆಹಲಿ (ಪಿಟಿಐ): ರೋಗಿಗಳು ಅಥವಾ ಅವರ ಸಂಬಂಧಿಕರು ನಿಂದನೆ ಮತ್ತು ಹಿಂಸೆಗೆ ಮುಂದಾಗುವ ಪ್ರಕರಣಗಳಲ್ಲಿ ಚಿಕಿತ್ಸೆ ನೀಡುವುದನ್ನು ನಿರಾಕರಿಸುವ ಅಧಿಕಾರವನ್ನು ರಾಷ್ಟ್ರೀಯ ವೈದ್ಯಕೀಯ ಆಯೋಗ (ಎನ್‌ಎಂಸಿ) ವೃತ್ತಿಪರ ವೈದ್ಯರಿಗೆ ನೀಡಿದೆ.

ಆದರೆ, ರೋಗಿಯು ಇಂಥ ಪ್ರಕರಣಗಳಲ್ಲಿ ನಿರ್ಲಕ್ಷ್ಯಕ್ಕೆ ಒಳಗಾಗಿಲ್ಲ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು ಎಂದು ಎನ್‌ಎಂಸಿ ತಿಳಿಸಿದೆ. ವೈದ್ಯರ ಮೇಲಿನ ಹಲ್ಲೆ ಪ್ರಕರಣಗಳನ್ನು ತಡೆಯಲು ಈ ಕ್ರಮಕ್ಕೆ ಎನ್‌ಎಂಸಿ ಮುಂದಾಗಿದೆ.

ಅಲ್ಲದೆ, ವೈದ್ಯರು ಯಾವುದೇ ಕಂಪನಿ, ಬ್ರಾಂಡ್‌ನ ಔಷಧಗಳು ಅಥವಾ ಪರಿಕರಗಳನ್ನು ಶಿಫಾರಸು ಮಾಡುವುದು ಅಥವಾ ಅದರ ಪರ ಪ್ರಚಾರ ಕಾರ್ಯಗಳಲ್ಲಿ ತೊಡಗುವುದನ್ನು ಎನ್‌ಎಂಸಿಯು ನಿರ್ಬಂಧಿಸಿದೆ.

ವೃತ್ತಿ ನಡತೆ ನಿಯಂತ್ರಣ ನಿಯಮಗಳು ಕುರಿತ ಅಧಿಸೂಚನೆ ಪ್ರಕಾರ, ನೋಂದಾಯಿತ ವೈದ್ಯರು, ಅವರ ಕುಟುಂಬದ ಸದಸ್ಯರು ಉಡುಗೊರೆ, ಸಾರಿಗೆ ಸೌಲಭ್ಯ, ಆತಿಥ್ಯ, ನಗದು ಅಥವಾ ಅನುದಾನ, ಗೌರವಧನ ಪಡೆಯಬಾರದು. ಅಲ್ಲದೆ, ಔಷಧ ಕಂಪನಿಗಳು ನೀಡುವ ಯಾವುದೇ ಮನರಂಜನಾ ಸೌಲಭ್ಯನ್ನು ಸ್ವೀಕರಿಸಬಾರದು ಎಂದು ತಿಳಿಸಿದೆ.

ಆದರೆ, ಔಷಧ ಕಂಪನಿಗಳ ಉದ್ಯೋಗಿಗಳಾಗಿ ನೋಂದಾಯಿತ ವೈದ್ಯರು ಪಡೆಯುವ ವೇತನ ಮತ್ತು ಇತರೆ ಸೌಲಭ್ಯಗಳಿಗೆ ಈ ನಿಯಮವು ಅನ್ವಯವಾಗುವುದಿಲ್ಲ ಎಂದು ಅಧಿಸೂಚನೆಯಲ್ಲಿ ತಿಳಿಸಿದೆ.

ವಿಚಾರಗೋಷ್ಠಿ, ಕಾರ್ಯಾಗಾರ, ವಿಚಾರಸಂಕಿರಣ, ಸಮ್ಮೇಳನ ಸೇರಿದಂತೆ ಕಂಪನಿಗಳಿಂದ ಪ್ರತ್ಯಕ್ಷ, ಪರೋಕ್ಷವಾಗಿ ಪ್ರಾಯೋಜಿತಗೊಂಡಿರುವ ಕಾರ್ಯಕ್ರಮಗಳಲ್ಲಿ ನೋಂದಾಯಿತ ವೈದ್ಯರು ಭಾಗವಹಿಸಬಾರದು ಎಂದು ಸೂಚಿಸಿದೆ.

ಚಿಕಿತ್ಸೆಗೆ ಮೊದಲೇ ಸರ್ಜರಿ, ಚಿಕಿತ್ಸೆಗೆ ತಗುಲುವ ವೆಚ್ಚದ ಕುರಿತ ಮಾಹಿತಿಯನ್ನು ರೋಗಿಗಳಿಗೆ ನೀಡಬೇಕು. ಹಾಗೆಯೇ, ರೋಗಿಯ ಚಿಕಿತ್ಸೆಗೂ ಮೊದಲೇ ಶುಲ್ಕದ ವಿವರವನ್ನು ನೀಡಿರಬೇಕು ಎಂದು ತಿಳಿಸಿದೆ.

ರೋಗಿಗೆ ಚಿಕಿತ್ಸೆ ನೀಡುವ ನೋಂದಾಯಿತಿ ವೈದ್ಯರು, ತಾವು ನೀಡುವ ಚಿಕಿತ್ಸೆಗೆ ಪೂರ್ಣ ಹೊಣೆಗಾರರಾಗಿದ್ದು, ಅದರ ಶುಲ್ಕ ಪಡೆಯಲು ಅರ್ಹರಾಗಿರುತ್ತಾರೆ ಎಂದು ಅಧಿಸೂಚನೆಯಲ್ಲಿ ವಿವರಿಸಲಾಗಿದೆ.

ಸಂಕ್ಷಿಪ್ತ ಸುದ್ದಿ

ಜಾನಪದ ಸಂಭ್ರಮ ನಾಳೆ

ಬೆಂಗಳೂರು: ರಾಜ್ಯ ಒಕ್ಕಲಿಗರ ಒಕ್ಕೂಟ ಟ್ರಸ್ಟ್ ವತಿಯಿಂದ ಆ. 12ರಂದು ಜಾನಪದ ಸಂಭ್ರಮ ಕಾರ್ಯಕ್ರಮವು ಸರ್ ಪುಟ್ಟಣ್ಣ ಚೆಟ್ಟಿ ಪುರಭವನದಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಟ್ರಸ್ಟ್ ಅಧ್ಯಕ್ಷ ಸಿ.ವಿ. ದೇವರಾಜ್, 'ಎಸ್ಸೆಸ್ಸೆಲ್ಸಿ ಮತ್ತು ಪಿಯುಸಿ ಪರೀಕ್ಷೆಗಳಲ್ಲಿ ಹೆಚ್ಚು ಅಂಕಗಳಿಸಿದ 500ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಲಾಗುತ್ತದೆ. ಜತೆಗೆ, ಬಿಬಿಎಂಪಿ ವಿಶೇಷ ಆಯುಕ್ತ ಜಯರಾಂ ರಾಯಪುರ, ಬೆಂಗಳೂರು ನಗರ ವಿಭಾಗದ ಉಪಪೊಲೀಸ್ ಆಯುಕ್ತ ಆರ್. ಶ್ರೀನಿವಾಸಗೌಡ, ಈ ಸಂಜೆ ಪತ್ರಿಕೆಯ ಟಿ. ವೆಂಕಟೇಶ್ ಹಾಗೂ ಕಿಮ್ಸ್ ಪ್ರಾಂಶುಪಾಲರಾದ ಡಾ. ಭಗವಾನ್ ಬಿ.ಸಿ., ಅವರನ್ನು ಸನ್ಮಾನಿಸಲಾಗುವುದು' ಎಂದರು

ಆದಿಚುಂಚನಗಿರಿ ಮಠದ ಪೀಠಾಧ್ಯಕ್ಷರಾದ ನಿರ್ಮಲಾನಂದನಾಥ ಸ್ವಾಮೀಜಿ, ಕೂಡಲ ಸಂಗಮದ ಪಂಚಮಸಾಲಿ ಪೀಠಾಧ್ಯಕ್ಷರಾದ ಜಯಮೃತ್ಯುಂಜಯ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ.

ಕಾರ್ಯಾಗಾರ

ಬೆಂಗಳೂರು: ರಾಷ್ಟ್ರೀಯ ಕೈಮಗ್ಗ ದಿನ ಹಾಗೂ ಸ್ವಾತಂತ್ರ್ಯ ದಿನದ ಅಂಗವಾಗಿ ಆ. 12 ಮತ್ತು 13ರಂದು ಚರಕ ಕಾರ್ಯಾಗಾರವನ್ನು ಸ್ವಾಮಿ ವಿವೇಕಾನಂದ ಮೆಟ್ರೊ ನಿಲ್ದಾಣದಲ್ಲಿರುವ ತ್ವಮಿ ಕ್ರಾಫ್ಟ್ಸ್‌ನಲ್ಲಿ ಆಯೋಜಿಸಲಾಗಿದೆ.

ಚರಕದಲ್ಲಿ ಹತ್ತಿಯಿಂದ ನೂಲು ತೆಗೆಯುವುದನ್ನು ಕಲಿಯುವ ಆಸಕ್ತರು ಈ ಕಾರ್ಯಾಗಾರದಲ್ಲಿ ಭಾಗವಹಿಸ ಬಹುದು ಎಂದು ಪ್ರಕಟಣೆ ತಿಳಿಸಿದೆ. ಸಂಪರ್ಕಕ್ಕೆ: 93438 49268

ಚಲನಚಿತ್ರೋತ್ಸವ

ಬೆಂಗಳೂರು: ದಿ ಜಾಯ್ ಆಫ್ ಲಿವಿಂಗ್‌ನಿಂದ ಆ. 25 ರಿಂದ 27ರವರೆಗೆ ಇಂಡೋ–ಫ್ರೆಂಚ್ ಅಂತರ ರಾಷ್ಟ್ರೀಯ ಚಲನಚಿತ್ರೋತ್ಸವವನ್ನು ವಸಂತನಗರದಲ್ಲಿರುವ ಅಲಯನ್ಸ್ ಫ್ರಾಂಚೈಸ್‌ನಲ್ಲಿ ನಡೆಯಲಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ನಟ ಸುಂದರ್ ರಾಜ್, 'ಈ ಚಲನಚಿತ್ರೋತ್ಸವದಲ್ಲಿ ಭಾರತ ಮತ್ತು ಫ್ರಾನ್ಸ್‌ನ ಕಲೆ ಮತ್ತು ಸಂಸ್ಕೃತಿಯನ್ನು ಉತ್ತೇಜಿಸುವ ಉದ್ದೇಶ ಇದೆ. ಜತೆಗೆ 12 ಇಂಡೋ–ಫ್ರೆಂಚ್ ಚಲನಚಿತ್ರಗಳನ್ನು ಪ್ರದರ್ಶನ ಮಾಡಲಾಗುತ್ತದೆ' ಎಂದು ಹೇಳಿದರು.



ಸಂಸತ್ತಿನಲ್ಲಿ ವಿವಾದಕ್ಕೆ ಕಾರಣವಾದ ಫ್ಲೈಯಿಂಗ್ ಕಿಸ್!

ಸುದೀಪ್ ಹೇಳಿಕೆ ದಾಖಲು ಆದೇಶ ಕಾಯ್ದಿರಿಸಿದ ಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಿರ್ಮಾಪಕ ಎಂ.ಎನ್. ಕುಮಾರ್ ವಿರುದ್ಧ ದಾಖಲಿಸಿರುವ ಮಾನಹಾನಿ ಪ್ರಕರಣಕ್ಕೆ ಸಂಬಂಧಿಸಿದಂತೆ ಫಿರ್ಯಾದುದಾರರೂ ಆದ ಚಿತ್ರನಟ ಸುದೀಪ್ ಗುರುವಾರ ನಗರದ 13ನೇ ಎಸಿಎಂಎಂ ಕೋರ್ಟ್‌ಗೆ ಹಾಜರಾಗಿ ಸ್ವಯಂ ಹೇಳಿಕೆ ದಾಖಲಿಸಿದರು.

ನ್ಯಾಯಾಧೀಶ ವೆಂಕಣ್ಣ ಬಸಪ್ಪ ಹೊಸಮನಿ ಅವರು ಹೇಳಿಕೆ ದಾಖಲು ಮಾಡಿಕೊಂಡು ಆದೇಶವನ್ನು ಶುಕ್ರವಾರಕ್ಕೆ (ಆ.11) ಕಾಯ್ದಿರಿಸಿದರು.

ಕೋರ್ಟ್ ಕಟಕಟೆಯಲ್ಲಿ ನಿಂತು ಪ್ರಮಾಣಿತ ಹೇಳಿಕೆ ದಾಖಲಿಸಿದ ಸುದೀಪ್; 'ನಿರ್ಮಾಪಕ ಎಂ.ಎನ್. ಕುಮಾರ್ ಮಾಧ್ಯಮ ಗೋಷ್ಠಿಯಲ್ಲಿ ನನ್ನ ವಿರುದ್ಧ ಮಾಡಿರುವ ಆರೋಪಗಳೆಲ್ಲಾ ಸುಳ್ಳು. ರಾಜರಾಜೇಶ್ವರಿ ನಗರದಲ್ಲಿ ಮನೆ ಕಟ್ಟಲು ಹಣದ ನೆರವಿನ ಆರೋಪವೂ ಸುಳ್ಳು' ಎಂದು ಸ್ಪಷ್ಟನೆ ನೀಡಿದರು.

'ಕುಮಾರ್ ಹೇಳಿಕೆಯನ್ನು ಎಂ.ಎನ್. ಸುರೇಶ್ ಬೆಂಬಲಿಸಿದ್ದಾರೆ. ಈ ಕುರಿತಾಗಿ ಹಲವರು ನನ್ನನ್ನು ಪ್ರಶ್ನಿಸುತ್ತಿದ್ದಾರೆ. ಕುಮಾರ್ ಹೇಳಿಕೆಯಿಂದ ನಾನು ಇಷ್ಟು ವರ್ಷ ಕಷ್ಟಪಟ್ಟು ಗಳಿಸಿದ ವರ್ಚಸ್ಸಿಗೆ ಹಾನಿಯಾಗಿದೆ. ಇವರ ಮಾಧ್ಯಮ ಗೋಷ್ಠಿಯಿಂದ ನನ್ನ ಮಾನಹಾನಿಯಾಗಿದೆ' ಎಂದರು.

ತಮ್ಮ ಹೇಳಿಕೆಗೆ ಪೂರಕವಾಗಿ ಕೆಲವು ಫೋಟೊಗಳನ್ನೂ ನ್ಯಾಯಾಧೀಶರಿಗೆ ನೀಡಿದರು.

ಹೇಳಿಕೆ ದಾಖಲು ಮಾಡಿಕೊಂಡ ನ್ಯಾಯಾಧೀಶರು, 'ಒಂದು ವೇಳೆ ನಿರ್ಮಾಪಕರು ಕ್ಷಮಾಪಣೆ ಕೇಳಿದರೆ ನೀವು ಅವರನ್ನು ಕ್ಷಮಿಸುತ್ತೀರಾ? ರಾಜಿ ಸಂಧಾನ ಮಾಡಿಕೊಂಡು ಕಕ್ಷಿದಾರರಿಗೆ ಮಾದರಿಯಾಗುತ್ತೀರಾ' ಎಂದು ಪ್ರಶ್ನಿಸಿದರು.

ಇದಕ್ಕೆ ಸುದೀಪ್, 'ಒಬ್ಬ ಸುದೀಪ್‌ನನ್ನು ಬಗ್ಗಿಸಿದರೆ ಹಲವರನ್ನು ಬಗ್ಗಿಸಬಹುದು ಎಂದು ಅವರು ತಿಳಿದಂತಾಗುತ್ತದೆ' ಎಂದು ಪ್ರತಿಕ್ರಿಯಿಸಿದರು.

ಸುದೀಪ್ ಪರ ವಕೀಲ ಅಜಯ್ ಕಡಕೋಳ್ ಹಾಜರಾಗಿದ್ದರು.

'ಸುದೀಪ್ ಕಳೆದ 7-8 ವರ್ಷಗಳ ಹಿಂದೆ ನನ್ನ ಸಿನಿಮಾದಲ್ಲಿ ನಟಿಸುತ್ತೇನೆ ಎಂದು ಹೇಳಿ, ನನ್ನಿಂದ ಮುಂಗಡ ಹಣ ಪಡೆದಿದ್ದರು. ಆದರೆ, ಇದುವರೆಗೂ ಅವರು ಕಾಲ್‌ಶೀಟ್ ಕೊಟ್ಟಿಲ್ಲ. ನನ್ನ ಹಣವನ್ನೂ ವಾಪಸ್ ನೀಡುತ್ತಿಲ್ಲ' ಎಂದು ನಿರ್ಮಾಪಕ ಎಂ.ಎನ್.ಕುಮಾರ್ ಆರೋಪಿಸಿದ್ದರು. ಸಮಸ್ಯೆ ಬಗೆಹರಿಸುವಂತೆ ಕೋರಿ ಫಿಲ್ಮ್ ಛೇಂಬರ್ ಮೆಟ್ಟಿಲೇರಿದ್ದರು.

ಅಧಿಸೂಚನೆ ಎತ್ತಿಹಿಡಿದ ಹೈಕೋರ್ಟ್ • 2025– 26ನೇ ಸಾಲಿನಿಂದ ಜಾರಿ

1ನೇ ತರಗತಿ ಪ್ರವೇಶಕ್ಕೆ 6 ವರ್ಷ


ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರಿ, ಅನುದಾನಿತ ಮತ್ತು ಅನುದಾನರಹಿತ ಶಾಲೆಗಳಲ್ಲಿ 2025-26ನೇ ಸಾಲಿನಿಂದ ಒಂದನೇ ತರಗತಿಗೆ ಪ್ರವೇಶ ಪಡೆಯಲು ಮಗುವಿಗೆ ಆರು ವರ್ಷ ತುಂಬಿರಬೇಕು' ಎಂಬ ರಾಜ್ಯ ಸರ್ಕಾರದ ಅಧಿಸೂಚನೆಯನ್ನು ಹೈಕೋರ್ಟ್ ಎತ್ತಿ ಹಿಡಿದಿದೆ.

ಈ ಸಂಬಂಧ, ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಇಲಾಖೆ ನಿರ್ದೇಶಕರು ಹೊರಡಿಸಿರುವ ಅಧಿಸೂಚನೆ ರದ್ದುಪಡಿಸಬೇಕು ಎಂದು ಕೋರಿ ನಗರದ ಅನಿಕೇತ್ ಎಂಬ ಪೋಷಕರು ಸಲ್ಲಿಸಿದ್ದ ಅರ್ಜಿಯನ್ನು ನ್ಯಾಯಮೂರ್ತಿ ಸಚಿನ್ ಶಂಕರ್ ಮಗದುಮ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

'ಮಾರ್ಗಸೂಚಿಯ ಹಿಂದೆ ಮೇಲ್ನೋಟಕ್ಕೆ ವಿದ್ಯಾರ್ಥಿಗಳ ಸಮಗ್ರ ಅಭಿವೃದ್ಧಿ ಕೇಂದ್ರಿತ ಉದ್ದೇಶವಿದೆ. ಹೀಗಾಗಿ, ವಯೋಮಿತಿಯ ಆಧಾರದಡಿ ಒಬ್ಬ ವಿದ್ಯಾರ್ಥಿ ಅಥವಾ ವಿದ್ಯಾರ್ಥಿನಿ ಅದೇ ತರಗತಿಯಲ್ಲಿ ಉಳಿಯಬೇಕಾಗುತ್ತದೆ ಎಂಬ ಕಾರಣಕ್ಕೆ ಮಾರ್ಗಸೂಚಿಯಲ್ಲಿ ಹಸ್ತಕ್ಷೇಪ ಮಾಡಲಾಗದು. ಅದು ರಾಜ್ಯದ ವಿವೇಚನೆಗೆ ಬಿಟ್ಟ ವಿಚಾರ' ಎಂದು ಸ್ಪಷ್ಟಪಡಿಸಿದೆ.

'ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣ ಕಾಯ್ದೆ–2009ರ ನಿಯಮಗಳು



ಮತ್ತು ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಗಮನದಲ್ಲಿಟ್ಟುಕೊಂಡು ಒಂದನೇ ತರಗತಿ ಪ್ರವೇಶಕ್ಕೆ ಕನಿಷ್ಠ ವಯೋಮಿತಿ ನಿಗದಿಪಡಿಸಲಾಗಿದೆ' ಎಂಬ ರಾಜ್ಯ ಸರ್ಕಾರದ ಪರ ಹೆಚ್ಚುವರಿ ಅಡ್ವೊಕೇಟ್ ಜನರಲ್ ವಿಕ್ರಂ ಹುಯಿಲಗೋಳ ಅವರ ವಾದವನ್ನು ನ್ಯಾಯಪೀಠ ಮಾನ್ಯ ಮಾಡಿದೆ.

ಪ್ರಕರಣವೇನು?: ಥಣಿಸಂದ್ರದಲ್ಲಿರುವ ರಾಷ್ಟ್ರೋತ್ಥಾನ ವಿದ್ಯಾಕೇಂದ್ರದಲ್ಲಿ ತಿಷಿಕಾ ಎಂಬ ವಿದ್ಯಾರ್ಥಿನಿಯನ್ನು ಪ್ರಸಕ್ತ ವರ್ಷದ ಎಲ್‌ಕೆಜಿಗೆ ಸೇರ್ಪಡೆ ಮಾಡಿಕೊಳ್ಳುವಂತೆ ಪೋಷಕ ಅನಿಕೇತ್ ಕೋರಿದ್ದರು. ಇದನ್ನು ಮನ್ನಿಸಿದ್ದ ಶಾಲೆಯು ಪೋಷಕರಿಂದ ಶುಲ್ಕ ವಸೂಲಿ ಮಾಡಿತ್ತು. ಆದರೆ, ವಯೋಮಿತಿಯ ನಿರ್ಬಂಧದ ಕಾರಣ ಆಕೆಯನ್ನು ನರ್ಸರಿಯಲ್ಲೇ ಮುಂದುವರಿಸುವುದಾಗಿ ಶಾಲೆಯ ಆಡಳಿತ ಮಂಡಳಿ ಪೋಷಕರಿಗೆ ಇ–ಮೇಲ್ ಸಂದೇಶ ಕಳುಹಿಸಿತ್ತು. ಇದನ್ನು ಪ್ರಶ್ನಿಸಿದ್ದ ಪೋಷಕರು, ತಮ್ಮ ನಾಲ್ಕು ವರ್ಷದ ಪುತ್ರಿಗೆ ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ ಎಲ್‌ಕೆಜಿಗೆ ಪ್ರವೇಶ ನೀಡಲು ಅನುಮತಿಸಬೇಕು ಎಂದು ಕೋರಿ ಹೈಕೋರ್ಟ್ ಮೆಟ್ಟಿಲೇರಿದ್ದರು.

ಟ್ವಿಟರ್ ಮೇಲ್ಮನವಿ: ₹25 ಲಕ್ಷ ಠೇವಣಿಗೆ ನಿರ್ದೇಶನ

ಬೆಂಗಳೂರು: ಕೇಂದ್ರ ಸರ್ಕಾರ 2021-2022ರ ಅವಧಿಯಲ್ಲಿ ಆಯ್ದ ಟ್ವಿಟರ್ ಖಾತೆಗಳ ಮೇಲೆ ವಿಧಿಸಿದ್ದ ನಿರ್ಬಂಧ ಆದೇಶ ಪ್ರಶ್ನಿಸಿದ ಅರ್ಜಿಗೆ ಸಂಬಂಧಿಸಿದಂತೆ ಟ್ವಿಟರ್‌ಗೆ (ಈಗ ಎಕ್ಸ್ ಕಾರ್ಪ್) ರಾಜ್ಯ ಹೈಕೋರ್ಟ್‌ನ ಏಕಸದಸ್ಯ ನ್ಯಾಯಪೀಠ ವಿಧಿಸಿದ್ದ ₹ 50 ಲಕ್ಷ ದಂಡದ ಆದೇಶಕ್ಕೆ ವಿಭಾಗೀಯ ನ್ಯಾಯಪೀಠ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಎಕ್ಸ್ ಕಾರ್ಪ್ ಸಲ್ಲಿಸಿದ್ದ ಮೇಲ್ಮನವಿಯನ್ನು ಮುಖ್ಯ ನ್ಯಾಯಮೂರ್ತಿ ಪಿ. ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು.

'ಮೇಲ್ಮನವಿದಾರರು ಒಂದು ವಾರದಲ್ಲಿ ₹ 25 ಲಕ್ಷ ಮೊತ್ತವನ್ನು ನ್ಯಾಯಾಲಯದಲ್ಲಿ ಠೇವಣಿ ಇರಿಸಬೇಕು' ಎಂದು ಮುಂದಿನ ವಿಚಾರಣೆವರೆಗೆ ತಡೆ ನೀಡಿ ಆದೇಶಿಸಿತು.

'ಮೇಲ್ಮನವಿದಾರ ಟ್ವಿಟರ್‌ಗೆ ದಂಡದ ಮೊತ್ತದ ಪೈಕಿ ₹ 25 ಲಕ್ಷವನ್ನು ಠೇವಣಿ ಇಡುವಂತೆ ಆದೇಶ ಮಾಡಿರುವುದನ್ನು ಟ್ವಿಟರ್ ಪರವಾಗಿ ನ್ಯಾಯವಿದೆ ಎಂದು ಅರ್ಥೈಸಬಾರದು' ಎಂದು ನ್ಯಾಯಪೀಠ ಇದೇ ವೇಳೆ ಸ್ಪಷ್ಟಪಡಿಸಿದೆ.

ಕೇಂದ್ರ ಸರ್ಕಾರಕ್ಕೆ ನೋಟಿಸ್ ಜಾರಿ ಮಾಡಿದ ನ್ಯಾಯಪೀಠ ಆಕ್ಷೇಪಣೆ ಸಲ್ಲಿಸುವಂತೆ ನಿರ್ದೇಶಿಸಿ ಇದೇ 30ಕ್ಕೆ ವಿಚಾರಣೆ ಮುಂದೂಡಿದೆ.

ಏಕಸದಸ್ಯ ನ್ಯಾಯಪೀಠವು, ಇದೇ 14ರ ಒಳಗೆ ₹ 50 ಲಕ್ಷ ದಂಡದ ಮೊತ್ತವನ್ನು ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು. ತಪ್ಪಿದಲ್ಲಿ ಪ್ರತಿದಿನ ಹೆಚ್ಚುವರಿಯಾಗಿ ₹ 5,000 ಪಾವತಿಸಬೇಕು ಎಂದು ಆದೇಶಿಸಿತ್ತು. ಎಕ್ಸ್ ಕಾರ್ಪ್ ಪರ ವಕೀಲ ಮನು ಕುಲಕರ್ಣಿ ವಾದ ಮಂಡಿಸಿದರು

ಎಂಜಿನಿಯರ್‌ಗಳ ರಾಷ್ಟ್ರೀಯ ಸಮಾವೇಶ ಇಂದಿನಿಂದ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದಿ ಇನ್‌ಸ್ಟಿಟ್ಯೂಟ್ ಆಫ್ ಎಂಜಿನಿಯರ್ಸ್ ಆ. 11 ಮತ್ತು 12ರಂದು ರಾಷ್ಟ್ರೀಯ ಸಮಾವೇಶ, ಪ್ರಶಸ್ತಿ ಪ್ರದಾನ ಮತ್ತು ತಿದ್ದುಪಡಿ ಮಾಡಿದ ಗಣಿ ನಿಯಮಗಳು ಮತ್ತು ಗಣಿಗಾರಿಕೆ ಉದ್ಯಮದ ಮೇಲೆ ಅದರ ಪ್ರಭಾವದ ಕುರಿತು ವಿಚಾರಸಂಕಿಣ ಆಯೋಜಿಸಿದೆ.

ಗುರುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಇನ್‌ಸ್ಟಿಟ್ಯೂಟ್ ಅಧ್ಯಕ್ಷ ಎಂಟಿ ರಂಗಾರೆಡ್ಡಿ ಅವರು, 'ಎಮಿನೆಂಟ್ ಎಂಜಿನಿಯರ್ ಪ್ರಶಸ್ತಿ'ಗೆ ಗಣಿ ನಿಯಂತ್ರಣಾಧಿಕಾರಿ ವಿ. ಜಯಕೃಷ್ಣ ಬಾಬು, ಗಣಿ ಎಂಜಿನಿಯರ್ಸ್ ಸಂಘದ ಅಧ್ಯಕ್ಷ ಕೆ. ಮಧುಸೂದನ್ ಮತ್ತು ಬೆಂಗಳೂರು ಗಣಿ ಸುರಕ್ಷತಾ ನಿರ್ದೇಶಕ ಮುರಳೀಧರ ಬಿದರಿ ಅವರು ಆಯ್ಕೆಯಾಗಿದ್ದಾರೆ.

'ಜೀವಮಾನ ಸಾಧನೆ ಪ್ರಶಸ್ತಿ'ಗೆ ಎಫ್‌ಐಇ ಮಾಜಿ ನಿರ್ದೇಶಕ ಡಿ.ವಿ. ಪಿಚ್ಚಮುತ್ತು ಅವರಿಗೆ ನೀಡಲಾಗುವುದು. 'ಐಇಐ ಯಂಗ್ ಎಂಜಿನಿಯರ್ ಪ್ರಶಸ್ತಿ'ಗೆ ಧನ್‌ಬಾದ್ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ ಸಹಾಯಕ ಪ್ರಾಧ್ಯಾಪಕ ಅಶೋಕ್ ಕುಮಾರ್, ಹೇಮಂತ್ ಅಗರವಾಲ್, ಸತ್ಯ ಪ್ರಕಾಶ್ ಸಾಹು ಅವರನ್ನು ಆಯ್ಕೆ ಮಾಡಲಾಗಿದೆ' ಎಂದು ತಿಳಿಸಿದರು.

ಸಮಾವೇಶವನ್ನು ಗಣಿ ಮತ್ತು ಭೂವಿಜ್ಞಾನ ಹಾಗೂ ತೋಟಗಾರಿಕೆ ಸಚಿವ ಎಸ್.ಎಸ್. ಮಲ್ಲಿಕಾರ್ಜುನ್ ಅವರು ಉದ್ಘಾಟಿಸಲಿದ್ದಾರೆ. ಗಣಿ ಸುರಕ್ಷತೆ ಉಪನಿರ್ದೇಶಕ ದೇವು ಕುಮಾರ್ ಅವರು ಭಾಗ ವಹಿಸಲಿದ್ದಾರೆ.

16 ಸಾವಿರ ಬಿಡಿಎ ನಿವೇಶನಗಳು ಸಿದ್ಧ

ಶಿವರಾಮ ಕಾರಂತ ಬಡಾವಣೆ; ಮುಂದಿನ ತಿಂಗಳಿನಿಂದ ಹಂಚಿಕೆ ಪ್ರಕ್ರಿಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಡಾ.ಕೆ.ಶಿವರಾಮ ಕಾರಂತ ಬಡಾವಣೆಯಲ್ಲಿ 16,534 ನಿವೇಶನಗಳು ಹಂಚಿಕೆಗೆ ಸಿದ್ಧಗೊಂಡಿವೆ.

ಬೆಂಗಳೂರು ಅಭಿವೃದ್ಧಿ ಪ್ರಾಧಿಕಾರ (ಬಿಡಿಎ) ಈ ವರ್ಷದ ಫೆಬ್ರುವರಿಯಲ್ಲಿ ಸಿವಿಲ್ ಕಾಮಗಾರಿಯನ್ನು ಆರಂಭಿಸಿದ್ದು, 300 ಕಿ.ಮೀ ರಸ್ತೆ ಬದಿಯ ಚರಂಡಿ ಕಾಮಗಾರಿಯನ್ನು ಪೂರ್ಣಗೊಳಿಸಿದೆ. ರೈತರು ಹಾಗೂ ಅರ್ಜಿ ಸಲ್ಲಿಸಿರುವ ನಾಗರಿಕರಿಗೆ ಮುಂದಿನ ತಿಂಗಳಿನಿಂದ ನಿವೇಶನ ಹಂಚಿಕೆ ಮಾಡುವ ಪ್ರಕ್ರಿಯೆಯನ್ನು ಬಿಡಿಎ ಆರಂಭಿಸಲಿದೆ.




ಈ ಬಡಾವಣೆಯ ಪ್ರಕ್ರಿಯೆಯ ಮೇಲುಸ್ತುವಾರಿಗೆ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿ ಎ.ವಿ. ಚಂದ್ರಶೇಖರ್ ನೇತೃತ್ವದಲ್ಲಿ ನಿವೃತ್ತ ಐಎಎಸ್ ಅಧಿಕಾರಿ ಜಯಕರ್ ಜೆರೋಂ ಹಾಗೂ ನಿವೃತ್ತ ಡಿಜಿಪಿ ಎಸ್.ಟಿ. ರಮೇಶ್ ಅವರನ್ನು ಒಳಗೊಂಡ ಸಮಿತಿ ರಚಿಸಿದೆ. 2020ರ ಡಿಸೆಂಬರ್‌ನಲ್ಲಿ ಆರಂಭವಾದ ಬಡಾವಣೆ ಯೋಜನೆಯಲ್ಲಿ 5,171 ಕಟ್ಟಡಗಳನ್ನು ಸಕ್ರಮಗೊಳಿಸಲಾಗಿದೆ.

'2,500 ಎಕರೆಗೂ ಹೆಚ್ಚು ಭೂಮಿಯಲ್ಲಿ ಪೂರ್ಣ ಪ್ರಮಾಣದ ಕಾಮಗಾರಿ ನಡೆಯುತ್ತಿದೆ. ಯಾವುದೇ ರೀತಿಯ ಅನಧಿಕೃತ ಕಟ್ಟಡಗಳು ಇರದಂತೆ ನೋಡಿಕೊಳ್ಳುವುದು ನಮ್ಮ ಪ್ರಥಮ ಆದ್ಯತೆಯಾಗಿತ್ತು' ಎಂದು ಬಿಡಿಎ ಎಂಜಿನಿಯರೊಬ್ಬರು ಮಾಹಿತಿ ನೀಡಿದರು

ಬಿಡಿಎ ಬಡಾವಣೆಯನ್ನು ಒಂಬತ್ತು ಸೆಕ್ಟರ್‌ಗಳಾಗಿ ವಿಭಾಗಗೊಳಿಸಿದ್ದು, ಬೇರೆಬೇರೆ ಸಂಸ್ಥೆಗಳಿಗೆ ರಸ್ತೆ, ಚರಂಡಿ, ನೀರು ಪೂರೈಕೆ ಮಾರ್ಗ, ಒಳಚರಂಡಿ ಮಾರ್ಗ ಮತ್ತು ರಸ್ತೆ ಡಾಂಬರು ಕಾಮಗಾರಿಗಳನ್ನು ವಹಿಸಿದೆ. ಈ ಎಲ್ಲ ಕಾಮಗಾರಿಗಳನ್ನು ಮುಂದಿನ ವರ್ಷದ ಡಿಸೆಂಬರ್‌ಗೆ ಮುಗಿಸುವ ಗುರಿಯನ್ನು ಬಿಡಿಎ ಹೊಂದಿದೆ.

'ಭೂಸ್ವಾಧೀನದಲ್ಲಿ ಭೂಮಿ ಕಳೆದುಕೊಂಡವರಲ್ಲಿ 1,700ಕ್ಕೂ ಹೆಚ್ಚು ರೈತರು ಅಭಿವೃದ್ಧಿ ನಿವೇಶನದ ಆಯ್ಕೆ ಪಡೆದುಕೊಂಡಿದ್ದಾರೆ' ಎಂದು ಬಿಡಿಎ ಎಂಜಿನಿಯರ್ ತಿಳಿಸಿದರು



ಮುಖ್ಯಮಂತ್ರಿ ಪರಿಹಾರ ನಿಧಿಗೆ ದೇಣಿಗೆ

ಕರ್ನಾಟಕ ಕೈಗಾರಿಕಾ ಮೂಲಸೌಲಭ್ಯ ಅಭಿವೃದ್ಧಿ ನಿಗಮದ ವತಿಯಿಂದ ₹ 3 ಕೋಟಿ ಮತ್ತು ಕರ್ನಾಟಕ ರಾಜ್ಯ ಮಾರುಕಟ್ಟೆ ಸಂವಹನ ಹಾಗೂ ಜಾಹೀರಾತು ಸಂಸ್ಥೆ (ಎಂಸಿಎ) ವತಿಯಿಂದ ₹ 1 ಕೋಟಿ ಚೆಕ್ ಅನ್ನು 'ಮುಖ್ಯಮಂತ್ರಿಗಳ ಪರಿಹಾರ ನಿಧಿ'ಗೆ ಈ ಸಂಸ್ಥೆಗಳ ಅಧ್ಯಕ್ಷರೂ ಆದ ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ. ಪಾಟೀಲ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ನಗರದಲ್ಲಿ ಗುರುವಾರ ಹಸ್ತಾಂತರಿದರು. ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಗೌರವ ಗುಪ್ತ, ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಕೆಎಸ್‌ಐಐಡಿಸಿ ವ್ಯವಸ್ಥಾಪಕ ನಿರ್ದೇಶಕ ಎಂ.ಆರ್.ರವಿ, ಕಾರ್ಯನಿರ್ವಾಹಕ ನಿರ್ದೇಶಕ ಪ್ರಕಾಶ, ಎಂಸಿಎ ವ್ಯವಸ್ಥಾಪಕ ನಿರ್ದೇಶಕ ಸಿದ್ಧಲಿಂಗಪ್ಪ ಜಿ. ಪೂಜಾರ ಇದ್ದರು.



ರುಚಿತಾಗೆ 9.49 ಸಿಜಿಪಿಎ ಅಂಕ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಏಟ್ರಿಯಾ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿಯ ಕಂಪ್ಯೂಟರ್ ಸೈನ್ಸ್ ಮತ್ತು ಎಂಜಿನಿಯರಿಂಗ್ ವಿಭಾಗದ ವಿದ್ಯಾರ್ಥಿನಿ ರುಚಿತಾ ರವೀಂದ್ರನಾಥ್ ಅವರು 9.49 ಸಿಜಿಪಿಎ ಅಂಕಗಳನ್ನು ಪಡೆದಿದ್ದಾರೆ. ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ ಪ್ರಮಾಣಪತ್ರ ಪ್ರದಾನ ಮಾಡಲಾಯಿತು.

ಏಟ್ರಿಯಾ ಇನ್‌ಸ್ಟಿಟ್ಯೂಟ್‌ನ ಪ್ರಾಂಶುಪಾಲರಾದ ಐಶ್ವರ್ಯಾ ಪಿ, 'ರುಚಿತಾ ಅವರ ಸಾಧನೆಯು ನಮ್ಮ ಸಂಸ್ಥೆಯ ಶೈಕ್ಷಣಿಕ ಉತ್ಕೃಷ್ಟತೆಯ ಪ್ರತಿಬಿಂಬ. ನಾವು ಅವರ ಸಾಧನೆಯ ಬಗ್ಗೆ ಹೆಮ್ಮೆ ಪಡುತ್ತೇವೆ ಎಂದು ತಿಳಿಸಿದ್ದಾರೆ.

ಎಸ್‌ಟಿಪಿ ಕಡ್ಡಾಯಗೊಳಿಸಲು ತಜ್ಞರ ಸಲಹೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಪಾರ್ಟ್‌ಮೆಂಟ್‌ಗಳಲ್ಲಿ ತ್ಯಾಜ್ಯ ನೀರು ಸಂಸ್ಕರಣೆ ಘಟಕ (ಎಸ್‌ಟಿಪಿ) ನಿರ್ಮಾಣವನ್ನು ಕಡ್ಡಾಯಗೊಳಿಸಬೇಕು. ಕೊಳಚೆ ನೀರನ್ನು ಶುದ್ಧೀಕರಿಸಿ ಕೆರೆಗಳಿಗೆ ಹರಿಸಬೇಕು, ಅಂತರ್ಜಲ ಮಟ್ಟವನ್ನು ಹೆಚ್ಚಿಸಲು ಇಂಗು ಗುಂಡಿಗಳನ್ನು ನಿರ್ಮಿಸಬೇಕು.

ಬ್ರ್ಯಾಂಡ್ ಬೆಂಗಳೂರು ಯೋಜನೆಯಡಿ 'ಜಲಸುರಕ್ಷಾಬೆಂಗಳೂರು' ವಿಷಯಕ್ಕೆ ಸಂಬಂಧಿಸಿದಂತೆ ದಯಾನಂದ ಸಾಗರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಗುರುವಾರ ನಡೆದ ವಿಚಾರ ಸಂಕಿರಣದಲ್ಲಿ ತಜ್ಞರು ನೀಡಿದ ಸಲಹೆಗಳಿವು.

ಅಂತರ್ಜಲದ ಯಥೇಚ್ಛ ಬಳಕೆಯನ್ನು ನಿಯಂತ್ರಿಸಬೇಕು ಹಾಗೂ ನೀರಿನ ಮಿತ ಬಳಕೆಯ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಬೇಕು ಮತ್ತು ನೀರು ಪೂರೈಕೆಯ ಮೂಲವಾಗಿ ನಗರದ ಕೆರೆಗಳನ್ನು ಬಳಸಬೇಕು. ಅನಧಿಕೃತವಾಗಿ ಕೊಳವೆಬಾವಿ ಕೊರೆಯುವುದನ್ನು ತಡೆಯುವ ಜತೆಗೆ ಅಂತಹವರ ಮೇಲೆ ದುಪ್ಪಟ್ಟು ದಂಡ ವಿಧಿಸಬೇಕು ಎಂದು ತಜ್ಞರು ಅಭಿಪ್ರಾಯಪಟ್ಟರು.

ಈ ವಿಷಯದ ಬಗ್ಗೆ ವಿವರ ನೀಡಿದ ಜಲಮಂಡಳಿಯ ಯೋಜನಾ ವಿಭಾಗದ ಮುಖ್ಯ ಎಂಜಿನಿಯರ್ ಹಾಗೂ ಜಲಸುರಕ್ಷಾ ಬೆಂಗಳೂರಿನ ನೋಡಲ್ ಅಧಿಕಾರಿ ಕೆ.ಎನ್. ರಾಜೀವ್, 'ಬ್ರ್ಯಾಂಡ್ ಬೆಂಗಳೂರು ಯೋಜನೆ ಬಗ್ಗೆ ನೀಡಿರುವ ಸಲಹೆಗಳನ್ನು ಕ್ರೋಢೀಕರಿಸಿ ವರದಿಯನ್ನು ಸರ್ಕಾರಕ್ಕೆ ಸಲ್ಲಿಸಲಾಗುವುದು' ಎಂದು ಹೇಳಿದರು.


'ನಗರದಲ್ಲಿ ಅಂತರ್ಜಲ ಮಟ್ಟ ಹೆಚ್ಚಿಸುವ ಮೂಲಕ ನೀರಿನ ಸಮಸ್ಯೆ ಕಡಿಮೆ ಮಾಡಲು ಯೋಜನೆ ರೂಪಿಸಬೇಕಿದೆ' ಎಂದು ಹೇಳಿದರು.

'ಬೆಂಗಳೂರು ನಗರದಾದ್ಯಂತ ಜಲಮಂಡಳಿ ವತಿಯಿಂದ ನೀರಿನ ಸರಬರಾಜು ಮಾಡಲಾಗುತ್ತಿದೆ. ಅದರ ಸಾಮರ್ಥ್ಯವನ್ನು ಮತ್ತಷ್ಟು ಹೆಚ್ಚಿಸಲು ಜಲಮಂಡಳಿಯು ಹಲವಾರು ಕ್ರಮಗಳನ್ನು ಕೈಗೊಳ್ಳುತ್ತಿದೆ. ಬೆಂಗಳೂರು ಜನರಿಗೆ ನೀರಿನ ವ್ಯವಸ್ಥೆ ಮಾಡುವ ಸಲುವಾಗಿ ದಿನದ 24 ಗಂಟೆಯೂ ಜಲಮಂಡಳಿ ಅಧಿಕಾರಿಗಳು ಕಾರ್ಯನಿರ್ವಹಿಸುತ್ತಿದ್ದಾರೆ' ಎಂದು ತಿಳಿಸಿದರು.

'ನಗರದ ಜನತೆ ಹೆಚ್ಚಾಗಿ ಕಾವೇರಿ ನೀರಿನ ಮೇಲೆ ಅವಲಂಬಿತರಾಗಿದ್ದಾರೆ. ಪರ್ಯಾಯ ವ್ಯವಸ್ಥೆಗಳಿಗೆ ನಾವು ಮುಂದಾಗಬೇಕಿದೆ' ಎಂದು ಹೇಳಿದರು.

ದಯಾನಂದ ಸಾಗರ್ ತಾಂತ್ರಿಕ ಮಹಾವಿದ್ಯಾಲಯ ಸಿವಿಲ್ ಎಂಜಿನಿಯರಿಂಗ್ ವಿಭಾಗದ ಮುಖ್ಯಸ್ಥ ಡಾ. ರಾಮರಾಜು, ಜಲಮಂಡಳಿಯ ಮುಖ್ಯ ಎಂಜಿನಿಯರ್ ವೆಂಕಟೇಶ್, ಸುರೇಶ್ ಅವರು ಇದ್ದರು.

ವಿ.ಚಂದ್ರಶೇಖರ್ ಗ್ರಾ.ಪಂ. ಅಧ್ಯಕ್ಷ



ಹೆಸರಘಟ್ಟ: ಗೋಪಾಲಪುರ ಗ್ರಾಮ ಪಂಚಾಯಿತಿ ಅಧ್ಯಕ್ಷರಾಗಿ ವಿ.ಚಂದ್ರಶೇಖರ್ ಹಾಗೂ ಉಪಾಧ್ಯಕ್ಷರಾಗಿ ಭಾಗ್ಯಮ್ಮ ಅವಿರೋಧವಾಗಿ ಬುಧವಾರ ಆಯ್ಕೆಯಾಗಿದ್ದಾರೆ.

ಒತ್ತಡದಲ್ಲಿ 70ರಷ್ಟು ವಯಸ್ಕರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಯಸ್ಕರಲ್ಲಿ ಶೇ 70 ರಷ್ಟು ಮಂದಿ ಒತ್ತಡದಲ್ಲಿದ್ದರೆ, ಉದ್ಯೋಗಸ್ಥರಲ್ಲಿ ಶೇ 50 ರಷ್ಟು ಮಂದಿ ಕೆಲಸ ಹಾಗೂ ವೃತ್ತಿಗೆ ಹೊಂದಿಕೊಳ್ಳಲಾಗದೆ ಸಮಸ್ಯೆ ಎದುರಿಸುತ್ತಿದ್ದಾರೆ ಎನ್ನುವುದು ಮೈಂಡ್‌ಪೀರ್ಸ್ ವೇದಿಕೆ ನಡೆಸಿದ ಅಧ್ಯಯನದಿಂದ ದೃಢಪಟ್ಟಿದೆ.

ವೇದಿಕೆಯು ಮಾನಸಿಕ ಸಾಮರ್ಥ್ಯಕ್ಕೆ ಸಂಬಂಧಿಸಿದಂತೆ 72,500 ಮಂದಿಯನ್ನು ಅಧ್ಯಯನಕ್ಕೆ ಒಳಪಡಿಸಿತ್ತು.

'ಅಧ್ಯಯನಕ್ಕೆ ಒಳಪಟ್ಟವರಲ್ಲಿ ಶೇ 30 ರಷ್ಟು ಮಂದಿ ಸಂಬಂಧಿಗಳು ಮತ್ತು ಕುಟುಂಬದ ಸದಸ್ಯರಿಂದ ಒತ್ತಡ ಎದುರಿಸುತ್ತಿದ್ದಾರೆ. ಹೆಚ್ಚುತ್ತಿರುವ ಒಂಟಿತನದಿಂದ ಶೇ 25 ರಷ್ಟು ಜನರು ಮಾನಸಿಕ ಸಮಸ್ಯೆಗೆ ಒಳಗಾಗುತ್ತಿದ್ದಾರೆ. ಶೇ 20 ರಷ್ಟು ಜನರು ತಮ್ಮ ಪ್ರಸ್ತುತ ಅಥವಾ ಭವಿಷ್ಯದ ಆರ್ಥಿಕ ಪರಿಸ್ಥಿತಿಯಿಂದಾಗಿ ಒತ್ತಡ ಅನುಭವಿಸುತ್ತಿದ್ದಾರೆ. ಶೇ 89 ರಷ್ಟು ಜನರು ತಮ್ಮ ಬಳಿ ಎಷ್ಟು ಹಣವಿದೆ ಎಂದು ನಿರಂತರ ಯೋಚಿಸುತ್ತಿರುತ್ತಾರೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

'ಯುವಜನರಲ್ಲಿ ಹೆಚ್ಚಿನವರು ಒತ್ತಡದ ಜೀವನ ನಡೆಸುತ್ತಿದ್ದಾರೆ. ಇದರಿಂದ ಕೆಲವರು ಮಾನಸಿಕ ಸಮಸ್ಯೆಗಳಿಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಪೋಷಕರು, ಶಿಕ್ಷಣ ಸಂಸ್ಥೆಗಳು ಯುವಜನರ ಮಾನಸಿಕ ಶಕ್ತಿಯನ್ನು ಹೆಚ್ಚಿಸುವ ಕೆಲಸ ಮಾಡಬೇಕಾಗಿದೆ' ಎಂದು ವೇದಿಕೆಯ ಸಹ ಸಂಸ್ಥಾಪಕಿ ಕನ್ನಿಕಾ ಅಗರ್ವಾಲ್ ಹೇಳಿದ್ದಾರೆ.

ಮಾಜಿ ಕಾರ್ಪೊರೇಟರ್ ಮಗ ಆತ್ಮಹತ್ಯೆ

ಪ್ರಜಾವಾಣಿ ವಾರ್ತೆ


ಗೌತಮ್

ಬೆಂಗಳೂರು: ಅತ್ತಿಗುಪ್ಪೆ ಬಳಿಯ ಮನೆಯೊಂದರಲ್ಲಿ ಗೌತಮ್ (29) ಅವರು ನೇಣುಬಿಗಿದು ಆತ್ಮಹತ್ಯೆ ಮಾಡಿಕೊಂಡಿದ್ದು, ಚಂದ್ರಾ ಲೇಔಟ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ಮಾಜಿ ಕಾರ್ಪೋರೇಟರ್ ಕೆ. ದೊಡ್ಡಣ್ಣ ಅವರ ಕಿರಿಯ ಪುತ್ರ ಗೌತಮ್ ಅವಿವಾಹಿತರಾಗಿದ್ದರು. ಕುಟುಂಬದ ಜೊತೆ ನೆಲೆಸಿದ್ದರು. ಆತ್ಮಹತ್ಯೆಗೆ ಕಾರಣ ಗೊತ್ತಾಗಿಲ್ಲ. ದೊಡ್ಡಣ್ಣ ನೀಡಿರುವ ದೂರು ಆಧರಿಸಿ ಎಫ್‌ಐಆರ್ ದಾಖಲಿಸಿ, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ದೊಡ್ಡಣ್ಣ ಅವರ ಮೂವರು ಪುತ್ರರಲ್ಲಿ ಗೌತಮ್ ಕೊನೆಯವರು. ಬುಧವಾರ ಮಧ್ಯಾಹ್ನ ಊಟ ಮಾಡಿ, ತಮ್ಮ ಕೊಠಡಿಯೊಳಗೆ ಹೋಗಿದ್ದ ಗೌತಮ್, ರಾತ್ರಿಯಾದರೂ ಹೊರಗೆ ಬಂದಿರಲಿಲ್ಲ. ನಿದ್ದೆ ಮಾಡುತ್ತಿರಬಹುದೆಂದು ಮನೆಯವರು ಸುಮ್ಮನಾಗಿದ್ದರು. ಆದರೆ, ಗುರುವಾರ ಮಧ್ಯಾಹ್ನವಾದರೂ ಅವರು ಹೊರಗೆ ಬಂದಿರಲಿಲ್ಲ.’

‘ಅನುಮಾನಗೊಂಡ ಸಹೋದರ ಕೊಠಡಿ ಬಳಿ ಹೋದಾಗ, ಒಳಗಿನಿಂದ ಬಾಗಿಲು ಲಾಕ್ ಆಗಿತ್ತು. ಮೊಬೈಲ್ ಸಹ ಸ್ವಿಚ್ಡ್ ಆಫ್ ಆಗಿತ್ತು. ನಂತರ, ಸಹೋದರರೇ ಬಾಗಿಲು ಮುರಿದು ಒಳಗೆ ಹೋಗಿ ನೋಡಿದಾಗ, ಗೌತಮ್ ಫ್ಯಾನ್‌ಗೆ ನೇಣು ಹಾಕಿಕೊಂಡು ಮೃತಪಟ್ಟಿದ್ದು ಕಂಡಿತ್ತು. ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಒಂಟಿಯಾಗಿರುತ್ತಿದ್ದ ಮಗ: ‘ಸುಮಾರು ದಿನಗಳಿಂದ ಮಗ ಗೌತಮ್ ಯಾರ ಜೊತೆಗೂ ಹೆಚ್ಚು ಮಾತನಾಡುತ್ತಿರಲಿಲ್ಲ. ಒಂಟಿಯಾಗಿರುತ್ತಿದ್ದ. ಮಗ ಯಾವ ವಿಚಾರಕ್ಕೆ ಆತ್ಮಹತ್ಯೆ ಮಾಡಿಕೊಂಡಿದ್ದಾನೆ ಎಂಬುದು ಗೊತ್ತಿಲ್ಲ. ಮಗನ ಸಾವಿನಲ್ಲಿ ನಮಗೆ ಯಾವುದೇ ಅನುಮಾನವಿಲ್ಲ’ ಎಂದೂ ದೊಡ್ಡಣ್ಣ ಹೇಳಿದ್ದಾರೆ.

‘ಗೌತಮ್, ಸರ್ಕಾರಿ ಗುತ್ತಿಗೆ ಕೆಲಸಗಳನ್ನು ಮಾಡಿಸುತ್ತಿದ್ದರು. ಅದರ ಬಿಲ್ ಬರದಿದ್ದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾರೆ’ ಎಂಬ ಮಾತುಗಳಿವೆ. ಇದನ್ನು ತಳ್ಳಿಹಾಕಿರುವ ಸಂಬಂಧಿಕರು ‘ಗೌತಮ್ ಗುತ್ತಿಗೆದಾರನಲ್ಲ. ಅವರ ಹೆಸರಿನಲ್ಲಿ ಯಾವುದೇ ಪರವಾನಗಿಯೂ ಇಲ್ಲ’ ಎಂದಿದ್ದಾರೆ.

ಹೆಚ್ಚುವರಿ ಫೈಲ್ ಸೃಷ್ಟಿಸಿ ಅಪರಾಧ; ತನಿಖಾಧಿಕಾರಿ, ಇತರರ ವಿರುದ್ಧ ಎಫ್‌ಐಆರ್

ಸಿಸಿಬಿಯಿಂದ ಸಾಕ್ಷ್ಯ ನಾಶ !

• ಸಂತೋಷ ಜಿಗಳಿಕೊಪ್ಪ



ಬೆಂಗಳೂರು: ಬಿಟ್ ಕಾಯಿನ್ (ಬಿಟಸಿ) ಅಕ್ರಮ ಪ್ರಕರಣ ಹೊಸ ತಿರುವು ಪಡೆದುಕೊಂಡಿದ್ದು, ಹ್ಯಾಕರ್ ಶ್ರೀಕೃಷ್ಣ ಹಾಗೂ ಇತರರ ವಿರುದ್ಧ ಕೆಂಪೇಗೌಡನಗರ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ಸಿಸಿಬಿ ಅಧಿಕಾರಿಗಳ ವಿರುದ್ಧವೇ ಇದೀಗ ಎಫ್‌ಐಆರ್ ದಾಖಲಾಗಿದೆ.

‘ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಮೊಬೈಲ್, ಕಂಪ್ಯೂಟರ್, ಲ್ಯಾಪ್‌ಟಾಪ್, ಹಾರ್ಡ್‌ಡಿಸ್ಕ್, ಪೆನ್‌ಡ್ರೈವ್‌ಗಳಲ್ಲಿರುವ ಮಾಹಿತಿಯನ್ನು ತಿರುಚಿರುವ ಸಿಸಿಬಿ ಅಧಿಕಾರಿಗಳು ಹಾಗೂ ಇತರರು, ಸಾಕ್ಷ್ಯ ನಾಶಪಡಿಸಿ ಅಪರಾಧ ಎಸಗಿದ್ದಾರೆ’ ಎಂದು ಆರೋಪಿಸಿ ವಿಶೇಷ ತನಿಖಾ ತಂಡದ (ಎಸ್‌ಐಟಿ) ಡಿವೈಎಸ್ಪಿ ಕೆ. ರವಿಶಂಕರ್ ಅವರು ಕಾಟನ್‌ಪೇಟೆ ಠಾಣೆಗೆ ಆಗಸ್ಟ್ 9ರಂದು ದೂರು ನೀಡಿದ್ದಾರೆ.

‘ಕೆಂಪೇಗೌಡ ನಗರ ಠಾಣೆಯಲ್ಲಿ 2020ರಲ್ಲಿ ದಾಖಲಾಗಿದ್ದ ಪ್ರಕರಣದ ತನಿಖೆ ನಡೆಸಿದ್ದ ತನಿಖಾಧಿಕಾರಿ, ತಂಡದಲ್ಲಿದ್ದ ಸಿಸಿಬಿ ಅಧಿಕಾರಿಗಳು ಹಾಗೂ ಇತರೆ ಪೊಲೀಸ್ ಅಧಿಕಾರಿಗಳ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಈ ಪ್ರಕರಣದ ತನಿಖೆಯು ಎಸ್‌ಐಟಿ ಅಧಿಕಾರಿಗಳಿಗೆ ವರ್ಗಾವಣೆ ಆಗಲಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

ಸಿಸಿಬಿ ಕಚೇರಿಯಲ್ಲೇ ಅಕ್ರಮ: ಬಿಜೆಪಿ ಅಧಿಕಾರದಲ್ಲಿದ್ದ ಅವಧಿಯಲ್ಲಿ ರಾಷ್ಟ್ರಮಟ್ಟದ ಸುದ್ದಿಯಾಗಿದ್ದ ಬಿಟ್ ಕಾಯಿನ್ (ಬಿಟಿಸಿ) ಪ್ರಕರಣದ ಮರು ತನಿಖೆಗಾಗಿ ಎಸ್‌ಐಟಿ ರಚಿಸಲಾಗಿತ್ತು. ಆರೋಪಿಗಳಿಂದ ಜಪ್ತಿ ಮಾಡಲಾಗಿದ್ದ ಎಲ್ಲ ವಸ್ತುಗಳನ್ನು ಸುಪರ್ದಿಗೆ ಪಡೆದಿದ್ದ ಎಸ್‌ಐಟಿ ಅಧಿಕಾರಿಗಳು, ವಿಧಿವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿದ್ದರು. ಇದೀಗ ಅದರ ವರದಿ ಬಂದಿದ್ದು, ಅದನ್ನು ಉಲ್ಲೇಖಿಸಿಯೇ ಡಿವೈಎಸ್ಪಿ ರವಿಶಂಕರ್ ದೂರು ಸಲ್ಲಿಸಿದ್ದಾರೆ.

‘2 ಪೆನ್‌ಡ್ರೈವ್, ಹಾರ್ಡ್‌ಡಿಸ್ಕ್ ಹಾಗೂ ಆ್ಯಪ್ ಮ್ಯಾಕ್‌ಬುಕ್‌ನಲ್ಲಿ ಮೂಲ ಫೈಲ್‌ಗಳನ್ನು ಅಳಿಸಲಾಗಿದೆ. ಅದೇ ಸ್ಥಳದಲ್ಲಿ ಹೆಚ್ಚುವರಿಯಾಗಿ ಫೈಲ್‌ಗಳನ್ನು ಸೃಷ್ಟಿಸಲಾಗಿದೆ’ ಎಂಬ ಸಂಗತಿ ವಿಧಿವಿಜ್ಞಾನ ಪ್ರಯೋಗಾಲಯದ ವರದಿಯಲ್ಲಿದೆ.

‘ಪ್ರಕರಣದ ತನಿಖೆಯನ್ನು ಸಿಸಿಬಿ ಕೈಗೆತ್ತಿಕೊಂಡ ಬಳಿಕವೇ ಸಾಕ್ಷ್ಯಗಳನ್ನು ತಿರುಚಲಾಗಿದೆ. 2020ರ ಸೆಪ್ಟೆಂಬರ್ 9ರಿಂದ ಡಿಸೆಂಬರ್ 16ರವರೆಗಿನ ಅವಧಿಯಲ್ಲಿ ಸಿಸಿಬಿ ಕಚೇರಿ ಹಾಗೂ ಇತರೆಡೆ ಅಕ್ರಮ ನಡೆದಿದೆ’ ಎಂಬ ಮಾಹಿತಿ ವರದಿಯಲ್ಲಿದೆ.

ಸಂಘಟಿತ ಅಪರಾಧ: ‘ಸಿಸಿಬಿ ತನಿಖಾಧಿಕಾರಿಗಳು, ಇತರೆ ಪೊಲೀಸ್ ಅಧಿಕಾರಿಗಳು ಹಾಗೂ ಇತರರು ಒಳಸಂಚು ರೂಪಿಸಿ ಸಂಘಟಿತರಾಗಿ ಕೃತ್ಯ ಎಸಗಿದ್ದಾರೆ. ಅಧಿಕಾರ ದುರುಪಯೋಗಪಡಿಸಿಕೊಂಡು ಸಾಕ್ಷ್ಯಗಳ ಮೌಲ್ಯವನ್ನು ಅಪಮೌಲ್ಯಗೊಳಿಸಿ ಅಪರಾಧ ಎಸಗಿದ್ದಾರೆ’ ಎಂದು ಡಿವೈಎಸ್ಪಿ ರವಿಶಂಕರ್ ದೂರಿದ್ದಾರೆ.

‘ಕಾನೂನುಬದ್ಧವಾಗಿ ಜಪ್ತಿ ಮಾಡಲಾಗಿದ್ದ ಹಾಗೂ ತಮ್ಮ ಸುಪರ್ದಿಯಲ್ಲಿದ್ದ ಡಿಜಿಟಲ್ ಉಪಕರಣಗಳಲ್ಲಿ ಹೆಚ್ಚುವರಿಯಾಗಿ ಫೈಲ್‌ಗಳನ್ನು ಸೃಷ್ಟಿಸಲಾಗಿದೆ. ಜಪ್ತಿ ಮಾಡಲಾದ ದಿನಗಳ ನಂತರವೇ ಈ ಕೃತ್ಯ ಎಸಗಿರುವುದು ವರದಿಯಿಂದ ಗೊತ್ತಾಗಿದೆ’ ಎಂದು ತಿಳಿಸಿದ್ದಾರೆ.

‘ತನಿಖಾಧಿಕಾರಿ, ಇತರರಿಗೆ ನೋಟಿಸ್’

‘ಬಿಟ್ ಕಾಯಿನ್ ಅಕ್ರಮ ಪ್ರಕರಣದಲ್ಲಿ ಸಿಸಿಬಿ ಅಧಿಕಾರಿಗಳೇ ಸಾಕ್ಷ್ಯ ನಾಶ ಮಾಡಿರುವುದು ಗೊತ್ತಾಗಿದೆ. ಸದ್ಯ ಎಲ್ಲರ ವಿರುದ್ಧ ಎಫ್‌ಐಆರ್ ದಾಖಲಿಸಲಾಗಿದೆ. ಕೆಲವೇ ದಿನಗಳಲ್ಲಿ ಎಲ್ಲರಿಗೂ ನೋಟಿಸ್ ನೀಡಿ ವಿಚಾರಣೆ ನಡೆಸಲಾಗುವುದು. ಹೇಳಿಕೆ ಪಡೆದು, ಕಾನೂನು ಕ್ರಮ ಜರುಗಿಸಲಾಗುವುದು’ ಎಂದು ಎಸ್‌ಐಟಿ ಮೂಲಗಳು ಹೇಳಿವೆ.

₹25 ಲಕ್ಷ ಗೆದ್ದ ವ್ಯಾಪಾರಿ: ₹15 ಲಕ್ಷ ದೋಚಿದ ಸ್ನೇಹಿತರು

ಗೋವಾ ಕ್ಯಾಸಿನೊದಲ್ಲಿ ಹಣ ಗಳಿಕೆ • ಬೆಂಗಳೂರಿಗೆ ಬರುತ್ತಿದ್ದಂತೆ ಅಪಹರಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಗೋವಾದ ಕ್ಯಾಸಿನೊದಲ್ಲಿ ₹ 25 ಲಕ್ಷ ಗೆದ್ದುಕೊಂಡು ನಗರಕ್ಕೆ ಬಂದಿದ್ದ ಚಹಾ ವ್ಯಾಪಾರಿ ತಿಲಕ್ ಮಣಿಕಂಠ (32) ಅವರನ್ನು ಅಪಹರಿಸಿ ₹ 15 ಲಕ್ಷ ದೋಚಲಾಗಿದ್ದು, ಈ ಸಂಬಂಧ ಹನುಮಂತನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ತ್ಯಾಗರಾಜನಗರ ನಿವಾಸಿ ತಿಲಕ್ ಮಣಿಕಂಠ್ ಅವರು ಕೃತ್ಯದ ಬಗ್ಗೆ ದೂರು ನೀಡಿದ್ದಾರೆ. ಸ್ನೇಹಿತರೇ ಆಗಿರುವ ಆರೋಪಿಗಳಾದ ಕಾರ್ತಿಕ್, ಪಾಂಡು, ಈಶ್ವರ್, ನಿಶ್ಚಲ್ ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ. ಎಲ್ಲರೂ ತಲೆಮರೆಸಿಕೊಂಡಿದ್ದಾರೆ’ ಎಂದು ಪೊಲೀಸರು ಹೇಳಿದರು.

‘ದೂರುದಾರ ರಸ್ತೆಬದಿಯಲ್ಲಿ ಚಹಾ ಮಾರಿ ಜೀವನ ಸಾಗಿಸುತ್ತಿದ್ದರು. ಸ್ನೇಹಿತರ ಜೊತೆ ಜುಲೈ 30ರಂದು ಗೋವಾ ಪ್ರವಾಸಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಅವರ ಬಳಿ ₹4 ಲಕ್ಷ ಹಣವಿತ್ತು’ ಎಂದು ತಿಳಿಸಿದರು.

ಕ್ಯಾಸಿನೊದಲ್ಲಿ ಹಣ ಗಳಿಕೆ: ‘ಗೋವಾದ ಪಣಜಿಯಲ್ಲಿರುವ ಕ್ಯಾಸಿನೊವೊಂದಕ್ಕೆ ಹೋಗಿದ್ದ ದೂರುದಾರ, ₹ 4 ಲಕ್ಷ ಹಣವನ್ನು ಬಳಸಿಕೊಂಡು ಆಟವಾಡಿದ್ದರು. ಇದರಿಂದ ₹ 25 ಲಕ್ಷ ಗೆದ್ದಿದ್ದರು. ಸ್ನೇಹಿತರೂ ಜೊತೆಗಿದ್ದರು. ಹಣವನ್ನು ತಮ್ಮ ಬ್ಯಾಂಕ್ ಖಾತೆಗೆ ಜಮೆ ಮಾಡಿಸಿಕೊಂಡಿದ್ದ ದೂರುದಾರ, ಬೆಂಗಳೂರಿಗೆ ವಾಪಸು ಬಂದಿದ್ದರು’ ಎಂದು ಪೊಲೀಸರು ಹೇಳಿದರು.

ಮನೆಯಿಂದ ಅಪಹರಣ: ‘ಬೆಂಗಳೂರಿಗೆ ಬಂದಿದ್ದ ತಿಲಕ್ ಮಣಿಕಂಠ ಆಗಸ್ಟ್ 5ರಂದು ಮನೆಯಲ್ಲಿದ್ದರು. ಇದೇ ಸಂದರ್ಭದಲ್ಲಿ ಸ್ಥಳಕ್ಕೆ ಬಂದಿದ್ದ ಆರೋಪಿಗಳು, ದೂರುದಾರರನ್ನು ಮನೆಯಿಂದ ಹೊರಗೆ ಕರೆತಂದು ಕಾರಿನಲ್ಲಿ ಅಪಹರಿಸಿದ್ದರು’ ಎಂದು ಪೊಲೀಸರು ತಿಳಿಸಿದರು.

‘ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿರುವ ನಿರ್ಜನ ಪ್ರದೇಶಕ್ಕೆ ತಿಲಕ್ ಮಣಿಕಂಠ್ ಅವರನ್ನು ಕೊಂಡೊಯ್ದಿದ್ದ ಆರೋಪಿಗಳು, ಜೀವ ಬೆದರಿಕೆಯೊಡ್ಡಿದ್ದರು. ಹಣಕ್ಕಾಗಿ ಪೀಡಿಸಿದ್ದರು. ತಮ್ಮ ಖಾತೆಯಲ್ಲಿ ಹಣವಿಲ್ಲವೆಂದು ದೂರುದಾರ ಹೇಳಿದ್ದರು. ನಂತರ, ಆರೋಪಿಗಳು ಮೊಬೈಲ್ ಕಸಿದುಕೊಂಡಿದ್ದರು.’

‘ನೆಲಮಂಗಲದ ಗೊಲ್ಲಹಳ್ಳಿ ಸಮೀಪದ ರೆಸಾರ್ಟ್‌ಗೆ ದೂರುದಾರರನ್ನು ಕರೆದೊಯ್ದಿದ್ದ ಆರೋಪಿಗಳು, ಕೊಠಡಿಯಲ್ಲಿ ಅಕ್ರಮ ಬಂಧನದಲ್ಲಿಟ್ಟಿದ್ದರು. ಇದೇ ಸಂದರ್ಭದಲ್ಲಿ ಚಿತ್ರಹಿಂಸೆ ನೀಡಿದ್ದರು. ಇದಾದ ನಂತರ ಮೊಬೈಲ್ ವಾಪಸು ನೀಡಿ ದೂರುದಾರರನ್ನು ಬಿಟ್ಟು ಕಳುಹಿಸಿದ್ದರು. ಖಾತೆ ಪರಿಶೀಲನೆ ನಡೆಸಿದಾಗ, ₹ 15 ಲಕ್ಷ ಡ್ರಾ ಆಗಿರುವುದು ಗೊತ್ತಾಗಿತ್ತು. ಬಳಿಕವೇ ದೂರುದಾರ ಠಾಣೆಗೆ ಬಂದು ದೂರು ನೀಡಿದ್ದಾರೆ’ ಹೇಳಿದರು.

‘ಕ್ಯಾಸಿನೊದಿಂದ ₹ 25 ಲಕ್ಷ ಬಂದ ಕಾರಣಕ್ಕೆ ಆರೋಪಿಗಳು, ಸಂಚು ರೂಪಿಸಿ ಹಣ ಕಿತ್ತುಕೊಂಡಿದ್ದಾರೆ’ ಎಂದರು.

ಸಿಇಒ ಹುದ್ದೆಗೆ ಕೃಷ್ಣ ರೆಡ್ಡಿ: ರಾಜ್ಯಪಾಲರಿಗೆ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಲೋಕೋಪಯೋಗಿ ಇಲಾಖೆಯಲ್ಲಿ ಮೂರು ವರ್ಷ ಕಾರ್ಯದರ್ಶಿಯಾಗಿ ಕೆಲಸ ಮಾಡಿ ಇತ್ತೀಚೆಗೆ ನಿವೃತ್ತರಾಗಿರುವ ಕೆ.ಎಸ್. ಕೃಷ್ಣ ರೆಡ್ಡಿ ಅವರನ್ನು ಕರ್ನಾಟಕ ರಾಜ್ಯ ರಸ್ತೆ ನಿಯಂತ್ರಣ ಮತ್ತು ಅಭಿವೃದ್ಧಿ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಹಣಾಧಿಕಾರಿ (ಸಿಇಒ) ಹುದ್ದೆಗೆ ನೇಮಕಾತಿ ಮಾಡಿರುವುದನ್ನು ರದ್ದು ಮಾಡಬೇಕು’ ಎಂದು ಆಗ್ರಹಿಸಿ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರಿಗೆ ಸಾಮಾಜಿಕ ಹೋರಾಟಗಾರ ಮರಿಲಿಂಗಗೌಡ ಮಾಲಿಪಾಟೀಲ್ ದೂರು ನೀಡಿದ್ದಾರೆ.

‘ತಮ್ಮ ಅವಧಿಯಲ್ಲಿ ಕೃಷ್ಣ ರೆಡ್ಡಿಯವರು ಅಧಿಕಾರ ದುರುಪಯೋಗಪಡಿಸಿಕೊಂಡು ಉದ್ದೇಶಪೂರ್ವಕವಾಗಿ ಕೆಟಿಪಿಪಿ ಕಾಯ್ದೆ ಉಲ್ಲಂಘಿಸಿ, ಯಾವುದೇ ಟೆಂಡರ್ ಕರೆಯದೆ ₹ 250 ಕೋಟಿಗೂ ಹೆಚ್ಚು ಮೊತ್ತದ ಕಾಮಗಾರಿಗೆ ಅನುಮೋದನೆ ನೀಡಿರುವುದು ಮಾಧ್ಯಮಗಳಲ್ಲಿ ವರದಿಯಾಗಿತ್ತು. ಈ ಪ್ರಾಧಿಕಾರಕ್ಕೆ ಜುಲೈ 26ರಂದು ನಡೆದ ಸಚಿವ ಸಂಪುಟದಲ್ಲಿ ಅನುಮೋದನೆ ಪಡೆದು, ಸಿಇಒ ಹುದ್ದೆ ಸೃಷ್ಟಿಸಿ ಇದೇ 7ರಂದು ಕೃಷ್ಣ ರೆಡ್ಡಿ ಅವರನ್ನು ನೇಮಿಸಿರುವುದು ಪೂರ್ವಯೋಜಿತ ಎನಿಸುತ್ತಿದೆ’ ಎಂದೂ ದೂರಿನಲ್ಲಿ ಆರೋಪಿಸಿದ್ದಾರೆ.

‘ಸಿಇಒ ಹುದ್ದೆಗೆ ನೇಮಕಾತಿ ಮಾಡುವ ಮೊದಲು ಸರ್ಕಾರ ಯಾವುದೇ ಜಾಹೀರಾತು ನೀಡಿಲ್ಲ. ನೇಮಕಾತಿ ಬಗ್ಗೆ ಅಧಿಸೂಚನೆಯನ್ನೂ ಹೊರಡಿಸಿಲ್ಲ. ನೇರವಾಗಿ ಕೃಷ್ಣ ರೆಡ್ಡಿ ಅವರನ್ನು ನೇಮಿಸಿರುವುದು ಏಕಪಕ್ಷೀಯ ಆಯ್ಕೆ. ಈ ರೀತಿಯ ನೇಮಕಾತಿಯು ಸಾರ್ವಜನಿಕ ಹಿತದೃಷ್ಟಿಯಿಂದ ಸರಿಯಲ್ಲ ಎನ್ನುವುದು ಮೇಲ್ನೋಟಕ್ಕೆ ಕಾಣಿಸುತ್ತಿದೆ. ನಿವೃತ್ತಿ ಹೊಂದಿದ ಅಧಿಕಾರಿಗೆ ಪಿಂಚಣಿ ಸೌಲಭ್ಯದ ಜೊತೆಗೆ ಹೊಸ ಹುದ್ದೆ ಸೃಷ್ಟಿಸಿ ಸಂಬಳ, ಸರ್ಕಾರಿ ಕಚೇರಿ, ವಾಹನ, ಭತ್ಯೆ, ನೌಕರರು ಮತ್ತು ಇತರ ಸೌಲಭ್ಯಗಳನ್ನು ನೀಡಿರುವುದು ಜನರ ತೆರಿಗೆ ಹಣದ ದುರುಪಯೋಗವಾಗಿದೆ. ಈ ಎಲ್ಲ ಅಂಶಗಳನ್ನು ತಾವು ಗಮನಿಸಿ, ಕೃಷ್ಣ ರೆಡ್ಡಿ ಅವರ ನೇಮಕಾತಿಯನ್ನು ರದ್ದುಪಡಿಸುವಂತೆ ಸರ್ಕಾರಕ್ಕೆ ನಿರ್ದೇಶನ ನೀಡಬೇಕು’ ಎಂದೂ ದೂರಿನಲ್ಲಿ ಅವರು ಆಗ್ರಹಿಸಿದ್ದಾರೆ.

ಕಂಪನಿ ಹೆಸರಿನಲ್ಲಿ ವಂಚನೆ: ದೂರು ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಾಡುಬಿಸನಹಳ್ಳಿಯಲ್ಲಿರುವ [24]7.ಎಐ ಕಂಪನಿಯಲ್ಲಿ ಉದ್ಯೋಗ ಕೊಡಿಸುವ ಆಮಿಷವೊಡ್ಡಿ ಹಲವರನ್ನು ವಂಚಿಸುತ್ತಿರುವ ದೂರುಗಳು ಬರುತ್ತಿದ್ದು, ಈ ಸಂಬಂಧ ಮಾರತ್ತಹಳ್ಳಿ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

ಈ ಬಗ್ಗೆ ಪತ್ರಿಕಾ ಪ್ರಕಟಣೆ ನೀಡಿರುವ ಕಂಪನಿ ಪ್ರತಿನಿಧಿಗಳು, ‘ಕಂಪನಿ ಹೆಸರಿನಲ್ಲಿ ವಂಚನೆ ಆಗುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆ ಠಾಣೆಗೆ ದೂರು ನೀಡಲಾಗಿದೆ. ಇಂಥ ವಂಚನೆಗಳ ಬಗ್ಗೆ ಸಾರ್ವಜನಿಕರು ಜಾಗೃತಿ ವಹಿಸಬೇಕು’ ಎಂದು ಕೋರಿದ್ದಾರೆ.

‘ಲ್ಯಾಪ್‌ಟಾಪ್ ನೀಡುವ ನೆಪದಲ್ಲೂ ಜನರಿಂದ ಹಣ ಪಡೆದು ವಂಚಿಸುತ್ತಿರುವ ಮಾಹಿತಿ ಇದೆ. ಕಂಪನಿ ಹೆಸರು ಹೇಳಿಕೊಂಡು ಯಾರಾದರೂ ವಂಚನೆ ಮಾಡಿದರೆ ತಕ್ಷಣ ದೂರು ನೀಡಿ’ ಎಂದು ತಿಳಿಸಿದ್ದಾರೆ.



ವಿವಿಧ ಸೌಲಭ್ಯಕ್ಕೆ ಒತ್ತಾಯ

ಪಿಂಚಣಿದಾರರ ಅಹವಾಲು ಮಂಡಿಸಲು ಕೇಂದ್ರ ಸಚಿವರ ಕಚೇರಿಗೆ ತೆರಳಿದ್ದ ರಾಷ್ಟ್ರೀಯ ಸಂಘರ್ಷ ಸಮಿತಿ ಅಧ್ಯಕ್ಷ ಕಮಾಂಡರ್ ಅಶೋಕ್ ರಾವತ್ ಮೇಲೆ ನಡೆಸಿರುವ ಹಲ್ಲೆ ಖಂಡಿಸಿ ಮತ್ತು ನಿವೃತ್ತರಿಗೆ ಕನಿಷ್ಠ ಪಿಂಚಣಿ ₹ 7,500 ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡಬೇಕು ಎಂದು ಆಗ್ರಹಿಸಿ ಪ್ರಾದೇಶಿಕ ಭವಿಷ್ಯ ನಿಧಿ ಆಯುಕ್ತರ ಕಚೇರಿಯ ಆವರಣದಲ್ಲಿ ‘ಇಪಿಎಸ್–95, ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆ’ ಮತ್ತು ರಾಷ್ಟ್ರೀಯ ಸಂಘರ್ಷ ಸಮಿತಿ ಸದಸ್ಯರು ಜಂಟಿಯಾಗಿ ಪ್ರತಿಭಟನೆ ನಡೆಸಿದರು. ಸಂಘಟನೆ ಕಾರ್ಯಾಧ್ಯಕ್ಷ ನಂಜುಂಡೇಗೌಡ ಹಾಗೂ ಜಿ.ಎಸ್.ಎಂ. ಸ್ವಾಮಿ, ವಿ.ಕೆ. ಗಡಾದ, ಎಸ್.ಎನ್. ಕುಲಕರ್ಣಿ, ಸಿ.ಎಸ್. ಮಂಜುನಾಥ್, ರಮಾಕಾಂತ ನರಗುಂದ, ಅನಿಲ್, ಶಂಕರ್, ಆರ್. ಸುಬ್ಬಣ್ಣ, ಡೋಲಪ್ಪ, ಮನೋಹರ್ ಇದ್ದರು. ಪ್ರಜಾವಾಣಿ ಚಿತ್ರ

ಮಗನನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗುತ್ತಿದ್ದ ಸಂತ್ರಸ್ತೆ

ಮಹಿಳೆ ಮೇಲೆ ಹಲ್ಲೆ: ಕ್ಯಾಬ್ ಚಾಲಕ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕ್ಯಾಬ್‌ನಲ್ಲಿ ಪ್ರಯಾಣಿಸುತ್ತಿದ್ದ ಮಹಿಳೆ ಮೇಲೆ ಹಲ್ಲೆ ಮಾಡಿ ಜೀವ ಬೆದರಿಕೆಯೊಡ್ಡಿದ್ದ ಆರೋಪದಡಿ ಚಾಲಕ ಬಸವರಾಜುನನ್ನು (25) ಬೆಳ್ಳಂದೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಗದಗ ಜಿಲ್ಲೆಯ ಗಜೇಂದ್ರಗಡ ತಾಲ್ಲೂಕಿನ ಶಾಂತಿಗೆರೆಯ ಬಸವರಾಜು, ಕೆಲಸ ಹುಡುಕಿಕೊಂಡು ನಗರಕ್ಕೆ ಬಂದಿದ್ದ. ಮಲ್ಲೇಶ್ವರದಲ್ಲಿ ನೆಲೆಸಿದ್ದ. ಉಬರ್ ಕಂಪನಿಗೆ ಜೋಡಿಸಿದ್ದ ಕ್ಯಾಬ್ ಚಾಲಕನಾಗಿ ಕೆಲಸ ಮಾಡುತ್ತಿದ್ದ’ ಎಂದು ಪೊಲೀಸರು ಹೇಳಿದರು.

‘ಭೋಗನಹಳ್ಳಿಯ ಅಪಾರ್ಟ್‌ಮೆಂಟ್ ಸಮುಚ್ಚಯವೊಂದರ ನಿವಾಸಿಯಾಗಿರುವ 48 ವರ್ಷದ ಮಹಿಳೆ ಕೃತ್ಯದ ಬಗ್ಗೆ ದೂರು ನೀಡಿದ್ದರು. ವಿಶೇಷ ತಂಡ ರಚಿಸಿ ಆರೋಪಿಯನ್ನು ಬಂಧಿಸಲಾಗಿದೆ’ ಎಂದು ತಿಳಿಸಿದರು.

ಘಟನೆ ವಿವರ: ‘ಸಂತ್ರಸ್ತ ಮಹಿಳೆಯು ತಮ್ಮ ಮಗನನ್ನು ಮಣಿಪಾಲ್ ಆಸ್ಪತ್ರೆಗೆ ಕರೆದೊಯ್ಯಲು ಉಬರ್ ಕ್ಯಾಬ್ ಕಾಯ್ದಿರಿಸಿದ್ದರು. ಅದೇ ಸಂದರ್ಭ ಮತ್ತೊಬ್ಬ ಮಹಿಳೆ ಸಹ ಕ್ಯಾಬ್ ಬುಕ್ ಮಾಡಿದ್ದರು’ ಎಂದು ಪೊಲೀಸರು ಹೇಳಿದರು.

‘ಅಪಾರ್ಟ್‌ಮೆಂಟ್ ಸಮುಚ್ಚಯದಿಂದ ಮಗನ ಸಮೇತ ಹೊರಬಂದಿದ್ದ ಮಹಿಳೆ, ರಸ್ತೆಯಲ್ಲಿ ನಿಂತಿದ್ದ ಬಸವರಾಜು ಕ್ಯಾಬ್ ಹತ್ತಿದ್ದರು. ಆದರೆ, ಮತ್ತೊಬ್ಬ ಮಹಿಳೆ ಕಾಯ್ದಿರಿಸಿದ್ದ ಕ್ಯಾಬ್ ಅದಾಗಿತ್ತು. ಈ ಮಾಹಿತಿ ಬಸವರಾಜುಗೆ ಗೊತ್ತಿರಲಿಲ್ಲ. ಸಂತ್ರಸ್ತೆಯೇ ಕಾಯ್ದಿರಿಸಿರಬಹುದೆಂದು ಮುಂದಕ್ಕೆ ಹೊರಟಿದ್ದ.’

‘ತಾವು ಕಾಯ್ದಿರಿಸಿದ್ದ ಕ್ಯಾಬ್ ಅಲ್ಲವೆಂಬುದು ಮಹಿಳೆಗೆ ಗೊತ್ತಾಗಿತ್ತು. ಅಷ್ಟರಲ್ಲೇ ಕ್ಯಾಬ್ ನೂರು ಮೀಟರ್ ದೂರಕ್ಕೆ ಹೋಗಿತ್ತು. ಇದೇ ಸಂದರ್ಭದಲ್ಲಿ ಕ್ಯಾಬ್ ಚಾಲಕ ಒಟಿಪಿ ಕೇಳಿದ್ದ. ಆವಾಗಲೇ ಕ್ಯಾಬ್ ನಿಲ್ಲಿಸುವಂತೆ ಮಹಿಳೆ ಹೇಳಿದ್ದರು. ಕ್ಯಾಬ್ ನಿಲ್ಲಿಸುತ್ತಿದ್ದಂತೆ ಮಹಿಳೆ, ಮಗನ ಸಮೇತ ಇಳಿದಿದ್ದರು’ ಎಂದು ಪೊಲೀಸರು ತಿಳಿಸಿದರು.

‘ನಿಮ್ಮಿಂದ ನನಗೆ ನಷ್ಟವಾಯಿತು’ ಎಂದು ಕೂಗಾಡಿದ್ದ ಚಾಲಕ, ಮಹಿಳೆ ಮುಖಕ್ಕೆ ಗುದ್ದಿದ್ದ. ಸ್ಥಳೀಯರು ಸೇರುತ್ತಿದ್ದಂತೆ ಕ್ಯಾಬ್ ಸಮೇತ ಪರಾರಿಯಾಗಿದ್ದ. ಹಲ್ಲೆಯ ದೃಶ್ಯ ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆಯಾಗಿತ್ತು’ ಎಂದರು.

ಬಾಡಿಗೆ ವಿಚಾರ: ಮಹಿಳೆ ಮೇಲೆ ಹಲ್ಲೆ

ಬೆಂಗಳೂರು: ಬಾಡಿಗೆ ವಿಚಾರವಾಗಿ ಶ್ರೀದೇವಿ (40) ಎನ್ನುವವರ ಮೇಲೆ ಹಲ್ಲೆ ಮಾಡಿರುವ ಆರೋಪದಡಿ ಬಾಡಿಗೆದಾರರಾದ ನಜೀರ್ ಹಾಗೂ ಸದ್ದಾಂ ಅವರನ್ನು ಬಂಡೆಪಾಳ್ಯ ಠಾಣೆ ಪೊಲೀಸರು ಬಂಧಿಸಿದ್ದು, ಅವರಿಬ್ಬರು ಜಾಮಿನು ಮೇಲೆ ಬಿಡುಗಡೆಗೊಂಡಿದ್ದಾರೆ.

‘ಜುಲೈ 6ರಂದು ನಡೆದಿರುವ ಘಟನೆ ಸಂಬಂಧ ಶ್ರೀದೇವಿ ದೂರು ನೀಡಿದ್ದರು. ಆರೋಪಿಗಳನ್ನು ಬಂಧಿಸಲಾಗಿತ್ತು. ಅವರಿಬ್ಬರಿಗೂ ಜಾಮೀನು ಸಿಕ್ಕಿದೆ’ ಎಂದು ಪೊಲೀಸರು ಹೇಳಿದರು.

‘ವಿದೇಶದಲ್ಲಿರುವ ಫಯಾಜ್ ಹೆಸರಿನಲ್ಲಿ ಮಂಗಮ್ಮನಪಾಳ್ಯ ಮುನೇಶ್ವರನಗರದಲ್ಲಿ ಕಟ್ಟಡವಿದೆ. ಕಟ್ಟಡದ ನಿರ್ವಹಣೆ ಹಾಗೂ ಬಾಡಿಗೆದಾರರಿಂದ ಬಾಡಿಗೆ ಸಂಗ್ರಹ ಕೆಲಸವನ್ನು ಶ್ರೀದೇವಿ ನೋಡಿಕೊಳ್ಳುತ್ತಿದ್ದಾರೆ. ಅದೇ ಕಟ್ಟಡದ ಮನೆಯಲ್ಲಿ ಆರೋಪಿ ನಜೀರ್ ಹಾಗೂ ಮಗ ಸದ್ದಾಂ ವಾಸವಿದ್ದರು’ ಎಂದು ತಿಳಿಸಿದರು.

‘ಮೂರು ತಿಂಗಳಿನಿಂದ ನಜೀರ್ ಬಾಡಿಗೆ ನೀಡಿರಲಿಲ್ಲ. ಅದನ್ನು ಕೇಳಲು ಶ್ರೀದೇವಿ ಅವರು ಮನೆಗೆ ಹೋಗಿದ್ದರು. ಆಗ, ನಜೀರ್ ಹಾಗೂ ಸದ್ದಾಂ, ಶ್ರೀದೇವಿ ಮೇಲೆ ಹಲ್ಲೆ ಮಾಡಿದ್ದರು. ಎಡ ಕೈಗೆ ಚಾಕುವಿನಿಂದ ಇರಿದಿದ್ದರು.’ ‘ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆದಿದ್ದ ಶ್ರೀದೇವಿ ಠಾಣೆಗೆ ದೂರು ನೀಡಿದ್ದರು. ಪ್ರಕರಣ ದಾಖಲಾಗುತ್ತಿದ್ದಂತೆ ಆರೋಪಿಗಳನ್ನು ಬಂಧಿಸಿ ನ್ಯಾಯಾಲಯಕ್ಕೆ ಹಾಜರುಪಡಿಸಲಾಗಿತ್ತು’ ಎಂದು ಪೊಲೀಸರು ಹೇಳಿದರು.

ನ್ಯಾಯಕ್ಕೆ ಆಗ್ರಹ: ‘ಹಲ್ಲೆ ಆರೋಪಿಗಳು ಕೆಲವೇ ದಿನಗಳಲ್ಲಿ ಬಿಡುಗಡೆ ಆಗಿದ್ದಾರೆ. ಸಾಕ್ಷ್ಯ ನಾಶದ ಭಯವಿದೆ. ನಮಗೆ ನ್ಯಾಯ ಬೇಕು. ಆರೋಪಿಗಳಿಗೆ ತಕ್ಕ ಶಿಕ್ಷೆ ಆಗಬೇಕು’ ಎಂದು ಶ್ರೀದೇವಿ ಕುಟುಂಬಸ್ಥರು ಆಗ್ರಹಿಸಿದ್ದಾರೆ.

ಸೇವೆ ಕಾಯಂಗೆ ಕೆಪಿಟಿಸಿಎಲ್, ಎಸ್ಕಾಂನ ಗುತ್ತಿಗೆ ನೌಕರರ ಆಗ್ರಹ

ಹೊರಗುತ್ತಿಗೆ ನೌಕರರ ಧರಣಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಪಿಟಿಸಿಎಲ್ ಮತ್ತು ಎಸ್ಕಾಂ ಹೊರಗುತ್ತಿಗೆ ನೌಕರರ ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಆಗ್ರಹಿಸಿ ಕರ್ನಾಟಕ ರಾಜ್ಯ ಕೆಪಿಟಿಸಿಎಲ್ ಮತ್ತು ಎಸ್ಕಾಂ ಹೊರಗುತ್ತಿಗೆ ನೌಕರರ ಹಿತರಕ್ಷಣಾ ವೇದಿಕೆ ಹಾಗೂ ಕರ್ನಾಟಕ ರಾಜ್ಯ ಕೆಪಿಟಿಸಿಎಲ್ ಕಾಯಂಯೇತರ ನೌಕರರ ಸಂಘದ ಸದಸ್ಯರು ಗುರುವಾರ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಪ್ರತಿಭಟನೆ ನಡೆಸಿದರು.

ಎಲ್ಲ ಹೊರಗುತ್ತಿಗೆ ನೌಕರರ ಸೇವೆಯನ್ನು ಕಾಯಂಗೊಳಿಸಬೇಕು. ಕಾಯಂ ಆಗುವವರೆಗೆ ಸಮಾನ ಕೆಲಸಕ್ಕೆ ಸಮಾನ ವೇತನ ನೀಡಬೇಕು. ವಿದ್ಯುತ್ ಅಪಘಾತದಿಂದ ಮೃತಪಟ್ಟರೆ ಅವರ ಕುಟುಂಬಕ್ಕೆ ₹ 50 ಲಕ್ಷ ಪರಿಹಾರ ನೀಡಬೇಕು. ಅಂಗವಿಕಲರಾದರೆ ₹ 25 ಲಕ್ಷ ಪರಿಹಾರ ನೀಡಬೇಕು. ಈಗಾಗಲೇ ಮೃತಪಟ್ಟವರಿಗೆ, ತೊಂದರೆಗೊಳಗಾದವರಿಗೆ ಪರಿಹಾರ ಘೋಷಿಸಬೇಕು ಎಂದು ಪ್ರತಿಭಟನಕಾರರು ಆಗ್ರಹಿಸಿದರು.

ಗುತ್ತಿಗೆ ಪದ್ಧತಿ ಎಂಬ ಜೀತ ಪದ್ಧತಿಯಿಂದ ಮುಕ್ತಿಗೊಳಿಸಬೇಕು. ವೇತನ ನೇರ ಪಾವತಿ ಮಾಡಬೇಕು. ಒಂದೆರಡು ವರ್ಷಗಳಿಂದ ವಿವಿಧ ಕಾರಣಗಳಿಗಾಗಿ ವಜಾಗೊಂಡಿರುವ ನೌಕರರನ್ನು ತಕ್ಷಣ ಮರುನೇಮಕ ಮಾಡಬೇಕು ಎಂದು ಒತ್ತಾಯಿಸಿದರು.

ಹಿತರಕ್ಷಣಾ ವೇದಿಕೆಯ ಪದಾಧಿಕಾರಿಗಳಾದ ಲೀಲಾಸಾಗರ್ ಎಂ.ಎಸ್., ಮಹೇಶ್ ಎಲ್.ಪಿ. ಸಹಿತ ಅನೇಕರು ಭಾಗವಹಿಸಿದ್ದರು.



ಕರ್ನಾಟಕ ರಾಜ್ಯ ಕೆಪಿಟಿಸಿಎಲ್ ಮತ್ತು ಎಸ್ಕಾಂ ಹೊರಗುತ್ತಿಗೆ ನೌಕರರ ಹಿತರಕ್ಷಣಾ ವೇದಿಕೆ ಹಾಗೂ ಕರ್ನಾಟಕ ರಾಜ್ಯ ಕೆಪಿಟಿಸಿಎಲ್ ಕಾಯಂಯೇತರ ನೌಕರರ ಸಂಘದ ಸದಸ್ಯರು ವಿವಿಧ ಬೇಡಿಕೆಗಳನ್ನು ಈಡೇರಿಸಬೇಕು ಎಂದು ಒತ್ತಾಯಿಸಿ ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಗುರುವಾರ ಪ್ರತಿಭಟನೆ ಮಾಡಿದರು –ಪ್ರಜಾವಾಣಿ ಚಿತ್ರ

ಬೆಂಗಳೂರು ವಿ.ವಿ ಸ್ಟುಡಿಯೊ ಉದ್ಘಾಟನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ವಿದ್ಯುನ್ಮಾನ ಮಾಧ್ಯಮ ವಿಭಾಗದಲ್ಲಿ ₹ 60 ಲಕ್ಷ ವೆಚ್ಚದಲ್ಲಿ 1,324 ಚದರ ಅಡಿ ವಿಸ್ತೀರ್ಣದಲ್ಲಿ ನೂತನವಾಗಿ ನಿರ್ಮಿಸಿರುವ ಟಿವಿ ಸ್ಟುಡಿಯೊವನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, 'ಮಾಧ್ಯಮ ಸಂಸ್ಥೆಗಳಿಗೆ ಅಗತ್ಯವಿರುವ ತಾಂತ್ರಿಕ ಪರಿಣತಿಯನ್ನು ವಿದ್ಯಾರ್ಥಿಗಳು ಪಡೆದುಕೊಳ್ಳಬೇಕು. ಅದಕ್ಕೆ ಬೇಕಾದ ಎಲ್ಲ ಸೌಕರ್ಯಗಳು ಈ ನೂತನ ಸ್ಟುಡಿಯೊದಲ್ಲಿದ್ದು, ವಿದ್ಯಾರ್ಥಿಗಳು ಸದುಪಯೋಗ ಪಡೆದುಕೊಳ್ಳಬೇಕು' ಎಂದು ಸಲಹೆ ನೀಡಿದರು.

ವಿಶ್ವವಿದ್ಯಾಲಯದಲ್ಲಿ ಸಂಶೋಧನೆ ಮಾಡುತ್ತಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ವಿದ್ಯಾರ್ಥಿಗಳಿಗೆ ಡಾ.ಎಂ.ಸಿ. ಸುಧಾಕರ್ ಲ್ಯಾಪ್‌ಟಾಪ್ ವಿತರಣೆ ಮಾಡಿದರು.

ವಿಶ್ವವಿದ್ಯಾಲಯದ ಕುಲಪತಿ ಜಯಕರ ಎಸ್.ಎಂ., ಕುಲಸಚಿವರಾದ ಶೇಕ್ ಲತೀಫ್, ಮೌಲ್ಯಮಾಪನ ವಿಭಾಗದ ಕುಲಸಚಿವ ಸಿ. ಶ್ರೀನಿವಾಸ್, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗ್ಡೆ, ವಿದ್ಯುನ್ಮಾನ ವಿಭಾಗದ ಸಂಯೋಜಕಿ ರಾಜೇಶ್ವರಿ, ಸಹ ಪ್ರಾಧ್ಯಾಪಕರಾದ ವಾಹಿನಿ, ಟಿ.ಶ್ರೀಪತಿ ಹಾಗೂ ವಿಶ್ವವಿದ್ಯಾಲಯದ ಇತರೆ ಅಧಿಕಾರಿಗಳು ಈ ಸಂದರ್ಭದಲ್ಲಿ ಹಾಜರಿದ್ದರು.



ಸ್ಟುಡಿಯೊವನ್ನು ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಉದ್ಘಾಟಿಸಿದರು. ಕುಲಪತಿ ಜಯಕರ ಎಸ್.ಎಂ., ಕುಲಸಚಿವ ಶೇಕ್ ಲತೀಫ್, ಸಿ. ಶ್ರೀನಿವಾಸ್, ಹಣಕಾಸು ಅಧಿಕಾರಿ ಅಜಿತ್ ಕುಮಾರ್ ಹೆಗ್ಡೆ, ಕುಲಸಚಿವ ಸಿ. ಶ್ರೀನಿವಾಸ್, ವಿದ್ಯುನ್ಮಾನ ವಿಭಾಗದ ಸಂಯೋಜಕಿ ರಾಜೇಶ್ವರಿ, ಟಿ.ಶ್ರೀಪತಿ ಇದ್ದರು

₹2,595 ಕೋಟಿ ಬಾಕಿ ಪಾವತಿಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ವಾರ್ಡ್ ಮಟ್ಟದಲ್ಲಿ ಕೈಗೊಂಡ ಅಭಿವೃದ್ಧಿ ಕಾಮಗಾರಿಗಳ 4,440ಕ್ಕೂ ಹೆಚ್ಚು ಬಿಲ್‌ಗಳ ₹ 2,595.42 ಕೋಟಿಗೂ ಹೆಚ್ಚು ಬಾಕಿ ಮೊತ್ತವನ್ನು ಕೂಡಲೇ ಪಾವತಿಸುವಂತೆ 'ಕರ್ನಾಟಕ ರಾಜ್ಯ ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರ ಸಂಘ ಹಾಗೂ ಬಿಬಿಎಂಪಿ ಗುತ್ತಿಗೆದಾರರ ಸಂಘ' ಗುರುವಾರ ಆಗ್ರಹಿಸಿದೆ.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಸಂಘದ ಅಧ್ಯಕ್ಷ ಬಿ.ಕೆ. ನಾಗೇಂದ್ರ, 'ಸಣ್ಣ ಮತ್ತು ಮಧ್ಯಮ ಗುತ್ತಿಗೆದಾರರು ಬಿಬಿಎಂಪಿ ವ್ಯಾಪ್ತಿಯಲ್ಲಿ 2021ರ ಏಪ್ರಿಲ್‌ನಿಂದ 2023ರ ಜೂನ್‌ವರೆಗೆ ವಿವಿಧ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಂಡಿದ್ದಾರೆ. ಈವರೆಗೂ ಹಣ ಬಿಡುಗಡೆಯಾಗಿಲ್ಲ. ಇದರಿಂದ, ಗುತ್ತಿಗೆದಾರರು ಆರ್ಥಿಕ ಸಂಕಷ್ಟಕ್ಕೆ ಸಿಲುಕಿಕೊಂಡಿದ್ದಾರೆ. ಕಳೆದ 28 ತಿಂಗಳಿಂದ ಬಿಬಿಎಂಪಿ ಕಚೇರಿಗೆ ಅಲೆದಾಡುತ್ತಿದ್ದಾರೆ. ಬಿಬಿಎಂಪಿ ಮುಖ್ಯ ಆಯುಕ್ತರು ಸ್ಪಂದಿಸುತ್ತಿಲ್ಲ' ಎಂದು ದೂರಿದರು.

'ಹೊಸ ಸರ್ಕಾರ ಬಂದಾಗ ಕಾಮಗಾರಿಗಳ ಬಿಲ್‌ಗಳ ಹಣ ಪಾವತಿಗೆ ತಡವಾಗುತ್ತದೆ. ಈ ವಿಷಯದ ಬಗ್ಗೆ ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರನ್ನು ಭೇಟಿಯಾಗಿದ್ದು, ಕಾಮಗಾರಿಗಳ ನೈಜತೆ ಪರಿಶೀಲಿಸಿ ಬಿಲ್ ಮೊತ್ತವನ್ನು ಪಾವತಿಸುವ ಭರವಸೆ ನೀಡಿದ್ದಾರೆ' ಎಂದು ವಿವರಿಸಿದರು.

'ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರ ಮೇಲೆ ಮಾಡಿರುವ ಆರೋಪಗಳು ಸತ್ಯಕ್ಕೆ ದೂರವಾಗಿವೆ. ಇದುವರೆಗೂ ನಮಗೆ ಯಾರೂ ಕಮಿಷನ್ ಕೇಳಿಲ್ಲ. ಕಮಿಷನ್ ಕೇಳಲಾಗಿದೆ ಎಂಬ ಆರೋಪ ಮಾಡಿದವರೂ ದೊಡ್ಡ ಗುತ್ತಿಗೆದಾರರು' ಎಂದು ಹೇಳಿದರು.

ಸಂಘದ ಪ್ರಧಾನ ಕಾರ್ಯದರ್ಶಿ ಮಂಜುನಾಥ್ ಸ್ವಾಮಿ ಇದ್ದರು.

ಬಿಲ್ ಬಾಕಿ: ರಾಹುಲ್ ಮಧ್ಯ ಪ್ರವೇಶಿಸಲಿ –ಬೊಮ್ಮಾಯಿ

ಬೆಂಗಳೂರು: 'ಕಾಮಗಾರಿಗಳ ಬಾಕಿ ಹಣ ನೀಡಲು ರಾಜ್ಯ ಸರ್ಕಾರ ಶೇ 65ರಷ್ಟು ಕಮಿಷನ್ ಕೇಳುತ್ತಿದೆ ಎಂದು ಬಿಬಿಎಂಪಿ ಗುತ್ತಿಗೆದಾರರ ಸಂಘ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಅವರಿಗೆ ಟ್ವೀಟ್ ಮಾಡಿದೆ. 'ರಾಹುಲ್ ಮಧ್ಯ ಪ್ರವೇಶಿಸಿ, 24 ಗಂಟೆಯ ಒಳಗೆ ನ್ಯಾಯ ಕೊಡಿಸಬೇಕು' ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಗುರುವಾರ ಆಗ್ರಹಿಸಿದರು.

ನಗರದಲ್ಲಿ ತಮ್ಮನ್ನು ಭೇಟಿಯಾದ ಬಿಬಿಎಂಪಿ ಗುತ್ತಿಗೆದಾರರಿಂದ ಮನವಿ ಸ್ವೀಕರಿಸಿ ಅವರು ಮಾತನಾಡಿದರು.

'ಭ್ರಷ್ಟಾಚಾರವನ್ನು ರಾಹುಲ್ ಗಾಂಧಿ ಸಹಿಸದೇ ಇದ್ದರೆ ತಕ್ಷಣ ಮಧ್ಯ ಪ್ರವೇಶ ಮಾಡಬೇಕು. ಬಾಕಿ ಇರುವ ಗುತ್ತಿಗೆದಾರರ ಬಿಲ್ ಬಿಡುಗಡೆಗೆ ಸೂಚಿಸಬೇಕು. ಕಳಪೆ ಕಾಮಗಾರಿ ಕುರಿತು ತನಿಖೆ ನಡೆಸಲಿ, ಪ್ರಾಮಾಣಿಕವಾಗಿ ಕೆಲಸ ಮಾಡಿದವರ ಹಣ ಬಿಡುಗಡೆ ಮಾಡಲಿ. ಇಲ್ಲದಿದ್ದರೆ ಕಾಂಗ್ರೆಸ್ ಹೈಕಮಾಂಡ್‌ನ ಎಟಿಎಂ ಕರ್ನಾಟಕ ಎನ್ನುವುದು ದೃಢವಾಗುತ್ತದೆ' ಎಂದರು.

'ನಾನು ಸಿ.ಎಂ ಆಗಿದ್ದಾಗ ಆನ್‌ಲೈನ್ ಮೂಲಕ ಬಿಲ್ ಪಾವತಿ ವ್ಯವಸ್ಥೆ ರೂಪಿಸಿದ್ದೆ. ಮೊದಲು ಕಾಮಗಾರಿ ಮುಗಿಸಿದ ಆಧಾರದ ಮೇಲೆ ಹಣ ಬಿಡುಗಡೆ ಮಾಡಲಾಗುತ್ತಿತ್ತು. ಹಾಗಾಗಿ, ಗುತ್ತಿಗೆದಾರರ ಬಾಕಿ ಕೂಡ ಕಡಿಮೆ ಇತ್ತು. ಕಾಮಗಾರಿಗಳಲ್ಲಿ ಪಾರದರ್ಶಕತೆ ತರಲು ಮೂವರ ಸಮಿತಿ ರಚನೆ ಮಾಡಿದ್ದೆವು. ಆ ಆದೇಶಗಳನ್ನು ಈಗ ಪಾಲನೆ ಮಾಡುತ್ತಿಲ್ಲ' ಎಂದು ದೂರಿದರು.

'ಗುತ್ತಿಗೆದಾರರು ಕೆಲಸ ನಿಲ್ಲಿಸಿದರೆ ಬ್ರ್ಯಾಂಡ್ ಬೆಂಗಳೂರು ಸ್ಥಗಿತವಾಗುತ್ತದೆ. ಕಮಿಷನ್ ಎಷ್ಟು ಪಡೆಯಬೇಕು ಎನ್ನುವ ಕುರಿತು ಶಾಂಗ್ರಿಲಾ ಹೋಟೆಲ್‌ನಲ್ಲಿ ಚರ್ಚೆ ನಡೆಯುತ್ತಿದೆಂತೆ. ನಮ್ಮ ಸರ್ಕಾರದ ಮೇಲೆ ಶೇ 40 ಕಮಿಷನ್ ಆರೋಪ ಎಲ್ಲಿ ರೂಪಿಸಲಾಗಿತ್ತು ಎನ್ನುವುದೂ ಗೊತ್ತಿದೆ. ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಸೂಪರ್ ಸಿ.ಎಂ ರೀತಿ ವರ್ತಿಸುತ್ತಿದ್ದಾರೆ. ಪತ್ರಗಳನ್ನು ನಕಲಿ ಎನ್ನುವ ಈ ಸರ್ಕಾರವೇ ನಕಲಿ' ಎಂದರು.

ಬೆಂಗಳೂರು-ಕಲಬುರಗಿ ನಡುವೆ ಆ. 11, 14ರಂದು ವಿಶೇಷ ರೈಲು

ಬೆಂಗಳೂರು: ಪ್ರಯಾಣಿಕರ ದಟ್ಟಣೆಯನ್ನು ಕಡಿಮೆ ಮಾಡಲು ಇಲ್ಲಿನ ಬೈಯಪ್ಪನಹಳ್ಳಿಯ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ಮತ್ತು ಕಲಬುರಗಿ ನಿಲ್ದಾಣಗಳ ನಡುವೆ 2 ಟ್ರಿಪ್ ವಿಶೇಷ ರೈಲುಗಳನ್ನು ಓಡಿಸಲು ನಿರ್ಧರಿಸಲಾಗಿದೆ.

ಆಗಸ್ಟ್ 11 ಮತ್ತು 14ರಂದು ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್‌ನಿಂದ ರಾತ್ರಿ 10.25ಕ್ಕೆ ಹೊರಟು, ಮರುದಿನ ಬೆಳಿಗ್ಗೆ 9ಕ್ಕೆ ಕಲಬುರಗಿ ನಿಲ್ದಾಣವನ್ನು ತಲುಪಲಿದೆ. ಈ ರೈಲು ಗುಂತಕಲ್‌ಗೆ ರಾತ್ರಿ 3:55, ಮಂತ್ರಾಲಯ ರಸ್ತೆ ಬೆಳಿಗ್ಗೆ 5.29, ರಾಯಚೂರು ಬೆಳಿಗ್ಗೆ 5.53 ಹಾಗೂ ವಾಡಿ ನಿಲ್ದಾಣಕ್ಕೆ ಬೆಳಿಗ್ಗೆ 8.25ಕ್ಕೆ ಬಂದು ಕಲಬುರಗಿಗೆ ತಲುಪಲಿದೆ.

ಇದೇ ರೈಲು ಹಿಂದಿರುಗುವ ದಿಕ್ಕಿನಲ್ಲಿ ಆ. 12 ಮತ್ತು 15ರಂದು ಬೆಳಿಗ್ಗೆ 10ಕ್ಕೆ ಕಲಬುರಗಿ ನಿಲ್ದಾಣದಿಂದ ಹೊರಟು, ಅದೇ ದಿನ ರಾತ್ರಿ 9.15ಕ್ಕೆ ಸರ್ ಎಂ. ವಿಶ್ವೇಶ್ವರಯ್ಯ ಟರ್ಮಿನಲ್ ತಲುಪಲಿದೆ. ಮಧ್ಯೆ ವಾಡಿಗೆ ಬೆಳಿಗ್ಗೆ 10.25, ರಾಯಚೂರು 12.28ಕ್ಕೆ, ಮಂತ್ರಾಲಯ ರೋಡ್ ಮಧ್ಯಾಹ್ನ 12.58ಕ್ಕೆ ತಲುಪ ಲಿದೆ ಎಂದು ರೈಲ್ವೆ ಅಧಿಕಾರಿಗಳು ತಿಳಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

'ಫ್ರೀಡಂ ರನ್' 13ಕ್ಕೆ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ನಿಮಿತ್ತ ಜಿಯೋಮಾರ್ಟ್, ಅಡಿದಾಸ್ ಸಹಯೋಗದಲ್ಲಿ ಆ. 13ರಂದು 'ಜಿಯೋಮಾರ್ಟ್ ಫ್ರೀಡಂ ರನ್' ಸೌತ್ ಯುನೈಟೆಡ್ ಫುಟ್‌ಬಾಲ್ ಕ್ಲಬ್‌ನಲ್ಲಿ ಆಯೋಜಿಲಾಗಿದೆ. 10ಕೆ, 5ಕೆ ಓಟ ವಿಭಾಗದಲ್ಲಿ 'ಫ್ರೀಡಂ ಓಟ' ನಡೆಯಲಿದೆ.ಆಸಕ್ತರು https://bit.ly/440hYGP ಮೂಲಕ ನೋಂದಣಿ ಮಾಡಿಕೊಳ್ಳಬೇಕು ಎಂದು ಪ್ರಕಟಣೆ ತಿಳಿಸಿದೆ.

ಬೈಗುಳ ಸಾಹಿತ್ಯೋತ್ಸವಕ್ಕೆ ಬರಹ ಆಹ್ವಾನ

ಬೆಂಗಳೂರು: ಅಲ್ಲಾರಂಡ ರಂಗಚಾವಡಿ ಹಾಗೂ ಸಿರಿಗನ್ನಡ ವೇದಿಕೆ ಸಹಯೋಗದಲ್ಲಿ 'ಬೈಗುಳ ಸಾಹಿತ್ಯೋತ್ಸವ'ವನ್ನು ನವೆಂಬರ್‌ನಲ್ಲಿ ಆಯೋಜಿಸಲಾಗುತ್ತಿದೆ. ಆಸಕ್ತರು ಆ. 31ರೊಳಗೆ kudekalsanthu@gmail.com ವಿಳಾಸಕ್ಕೆ ಬರಹಗಳನ್ನು ಕಳಿಸಬಹುದು. ಮಾಹಿತಿಗೆ: 94483 12310/9972538584 ಸಂಪರ್ಕಿಸಿ.

ನಗರದಲ್ಲಿ ಇಂದು

ಯು.ಆರ್. ಅನಂತಮೂರ್ತಿ ರಾಷ್ಟ್ರೀಯ ಕಲಾ ಪ್ರತಿಭೋತ್ಸವ: ಸಾನ್ನಿಧ್ಯ: ಗುರುಬಸವ ಸ್ವಾಮೀಜಿ, ಬಸವ ರಮಾನಂದ ಸ್ವಾಮೀಜಿ, ಉದ್ಘಾಟನೆ: ಕೆ. ವಿರೂಪಾಕ್ಷಪ್ಪ, ಸಮ್ಮೇಳನಾಧ್ಯಕ್ಷ: ಪುಸ್ತಕಮನೆ ಹರಿಹರಪ್ರಿಯ, ಪ್ರಶಸ್ತಿ ಪ್ರದಾನ: ಶಶಿಕಾಂತ ಅಕ್ಕಪ್ಪನಾಯಕ್, ನೆ.ಲ. ನರೇಂದ್ರಬಾಬು, ಎಂ.ಎ. ಪೊನ್ನಪ್ಪ, ಆಯೋಜನೆ: ಸುರ್ವೆ ಕಲ್ಚರಲ್ ಅಕಾಡೆಮಿ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ಬೆಳಿಗ್ಗೆ 10ರಿಂದ

ಆರೋಗ್ಯ ಮತ್ತು ಸ್ಮಾರ್ಟ್ ಟೆಕ್ನಾಲಜಿ ಕೇಂದ್ರದ ಉದ್ಘಾಟನೆ: ಡಾ.ಸಿ.ಎನ್. ಮಂಜುನಾಥ್, ಅಧ್ಯಕ್ಷತೆ: ನಾರಾಯಣ ರಾವ್ ಆರ್. ಮಾನಯ್, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10.15



ಡಾ.ಸಿ.ಎನ್. ಮಂಜುನಾಥ್

ಎಲ್ಲರಿಗೂ ಆರೋಗ್ಯ: ಆಯೋಜನೆ ಮತ್ತು ಸ್ಥಳ: ಕುವೆಂಪು ಕಲಾಕ್ಷೇತ್ರ, ಕಿಮ್ಸ್ ಆಸ್ಪತ್ರೆ ಆವರಣ, ವಿ.ವಿ. ಪುರ, ಬೆಳಿಗ್ಗೆ 10.30

ಚೈತನ್ಯ ಸಂಜೆ 'ಶಿವಶರಣೆ ಅಕ್ಕನಾಗಮ್ಮ ಜಯಂತಿ' ಕುರಿತು ಉಪನ್ಯಾಸ: ಶಿವಾನಂದ, ಅಧ್ಯಕ್ಷತೆ: ಪಿ. ವಿಜಯಕುಮಾರ್, ಉಪಸ್ಥಿತಿ: ಕೆ.ವಿ. ನಾಗರಾಜಮೂರ್ತಿ, ಕೇಶವಮೂರ್ತಿ, ಆಯೋಜನೆ: ಬೆಂಗಳೂರು ನಗರ ಜಿಲ್ಲಾ ಶರಣ ಸಾಹಿತ್ಯ ಪರಿಷತ್ತು, ಸ್ಥಳ: ಜೆ.ಎಸ್.ಎಸ್. ಕಾಲೇಜು ಸಭಾಂಗಣ, ಜಯನಗರ, ಸಂಜೆ 5.30

ಪ್ರವಚನ ವಾಹಿನಿ: 'ಶ್ರೀರಾಮ ಕೃಷ್ಣ ವಚನ ವೇದ' ಕುರಿತ ಉಪನ್ಯಾಸ: ಸ್ವಾಮಿ ಯೋಗೇಶ್ವರಾನಂದ, ಆಯೋಜನೆ ಮತ್ತು ಸ್ಥಳ: ರಾಗಿಗುಡ್ಡದ ಪ್ರಸನ್ನ ಆಂಜನೇಯಸ್ವಾಮಿ ಭಕ್ತಮಂಡಳಿ ಟ್ರಸ್ಟ್, ಜಯನಗರ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ಅನಘಾ ಎಚ್.ಜೆ., ಹಾರ್ಮೋನಿಯಂ: ಚಿನ್ಮಯಿ ಭಾರಧ್ವಾಜ್, ತಬಲಾ: ಸುದರ್ಶನ್, ಆಯೋಜನೆ ಮತ್ತು ಸ್ಥಳ: ಅಭಯ ಲಕ್ಷ್ಮೀ ನರಸಿಂಹಸ್ವಾಮಿ ದೇವಸ್ಥಾನ, ತ್ಯಾಗರಾಜನಗರ, ಸಂಜೆ 6.30

'ಕಲಿಯುಗ ದೈವ ಕೊರಗಜ್ಜ' ಯಕ್ಷಗಾನ ಪ್ರದರ್ಶನ: ಆಯೋಜನೆ: ಸಾಲಿಗ್ರಾಮ ಮೇಳ, ಸ್ಥಳ: ರವೀಂದ್ರ ಕಲಾಕ್ಷೇತ್ರ, ಜೆ.ಸಿ. ರಸ್ತೆ, ರಾತ್ರಿ 10ರಿಂದ

ಅಂಚಿನ ಲೋಕದ ಮಿಂಚು ಗದ್ದರ್ ನೆನಪು: ಆಯೋಜನೆ: ತಮಟೆ ಕರ್ನಾಟಕ, ಸ್ಥಳ: ಈದಿನ.ಕಾಂ ಕಚೇರಿ, ಸಂಜೆ:5.30

ಸಾಹಿತ್ಯ, ಸಾಂಸ್ಕೃತಿಕ ಸೇರಿ ವಿವಿಧ ಪ್ರಕಾರಗಳ ಕಾರ್ಯಕ್ರಮ ಗಳ ಆಮಂತ್ರಣ ಪತ್ರಿಕೆಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ ಕಳುಹಿಸಿ: nagaradalli_indu@prajavani.co.in

3M INDIA LIMITED

CIN: L31300KA1987PLC013543, Regd Office: 48-51, Electronics City, Hosur Road, Bengaluru - 560100 Website: www.3m.com/in

Extract of the Standalone and Consolidated Financial Results for the quarter ended 30 June 2023

(Rs. in Lakhs, except per share data, unless otherwise stated)

Particulars	Standalone			Consolidated		
	3 months ended 30 June 2023 (Unaudited)	3 months ended 30 June 2022 (Unaudited)	12 months ended 31 March 2023 (Audited)	3 months ended 30 June 2023 (Unaudited)	3 months ended 30 June 2022 (Unaudited)	12 months ended 31 March 2023 (Audited)
Total income from operations (including other income)	98,969.02	90,073.92	3,79,766.33	1,06,482.47	95,505.16	4,02,746.36
Net Profit for the period (before tax, Exceptional and / or Extraordinary items)	15,654.16	10,772.29	56,079.61	17,326.12	11,310.00	60,743.81
Net Profit for the period before tax (after Exceptional and / or Extraordinary items)	15,654.16	10,772.29	56,079.61	17,326.12	11,310.00	60,743.81
Net Profit for the period after tax	11,666.94	8,024.55	41,614.39	12,921.18	8,425.93	45,101.92
Total comprehensive income for the period [Comprising Profit / (Loss) for the period (after tax) and other comprehensive income (after tax)]	11,678.05	8,052.02	41,658.80	12,931.42	8,457.75	45,142.87
Equity share capital	1,126.51	1,126.51	1,126.51	1,126.51	1,126.51	1,126.51
Reserves (excluding revaluation reserves as per Ind AS)			1,93,657.31			1,66,620.54
Earnings per share (in Rs.) (of Rs. 10/- each)						
a) Basic (in Rs.)	103.57	71.23	369.41	114.70	74.80	400.37
b) Diluted (in Rs.)	103.57	71.23	369.41	114.70	74.80	400.37

Notes:

1. The above unaudited standalone and consolidated financial results of 3M India Limited and its subsidiary, 3M Electro & Communication India Private Limited (hereafter refer to as the 'Group') have been reviewed by the Audit Committee and thereafter approved by the Board of Directors at their meeting held on 10 August 2023.
2. The above is an extract of the detailed format for the unaudited financial results for the quarter ended 30 June 2023 filed with the Stock Exchanges under Regulation 33 of the SEBI (Listing and Other Disclosure Requirements) Regulations, 2015. The full format for the unaudited financial results for the quarter ended 30 June 2023 are available on the BSE Limited website (www.bseindia.com), the National Stock Exchange of India Limited website (www.nseindia.com) and on the Company's website (https://www.3mindia.in/3M/en_IN/company-in/about-3m/financial-facts-local/).
3. The financial results of the Company have been prepared in accordance with Indian Accounting Standards (Ind AS) as notified by the Ministry of Corporate Affairs pursuant to Section 133 of the Companies Act, 2013 read with Rule 3 of the Companies (Indian Accounting Standard) Rules 2015, as amended and in terms of Regulation 33 of the SEBI (Listing Obligations and Disclosure Requirements) Regulations, 2015.

By Order of the Board
For 3M India Limited

Place: Bengaluru
Date: 10 August 2023


Ramesh Ramadurai
Managing Director

ಇಬ್ಬರು ಮಕ್ಕಳೊಂದಿಗೆ ತಾಯಿ ಆತ್ಮಹತ್ಯೆ

ಮುದಗಲ್ (ರಾಯಚೂರು ಜಿಲ್ಲೆ): ಮಹಿಳೆಯೊಬ್ಬರು ತಮ್ಮ ಇಬ್ಬರು ಮಕ್ಕಳೊಂದಿಗೆ ಬಾವಿಗೆ ಹಾರಿ ಆತ್ಮಹತ್ಯೆ ಮಾಡಿಕೊಂಡ ಘಟನೆ ಪಟ್ಟಣದ ಮೇಗಳಪೇಟೆಯಲ್ಲಿ ಗುರುವಾರ ನಡೆದಿದೆ.

ಚೌಡಮ್ಮ ಹುಲಗಪ್ಪ ತಲೆಕಟ್ಟು (25), ಮಕ್ಕಳಾದ ಪ್ರೀತಂ (4), ರಾಮಣ್ಣ (3) ಮೃತರು.

ಚೌಡಮ್ಮ ಅವರು ತಮ್ಮ ಇಬ್ಬರು ಮಕ್ಕಳೊಂದಿಗೆ ಅಂಕಲಿಮಠದ ರಸ್ತೆಯಲ್ಲಿ ಇರುವ ಬಾವಿಗೆ ಹಾರಿದ್ದಾರೆ. ಕಾರಣ ತಿಳಿದು ಬಂದಿಲ್ಲ. ಸ್ಥಳೀಯ ಪೊಲೀಸ್ ಠಾಣೆ ಪಿಎಸ್ಐ ವೆಂಕಟೇಶ್ ಸ್ಥಳಕ್ಕೆ ಬಂದು ಪರಿಶೀಲಿಸಿದ್ದಾರೆ.




ಕಾರವಾರದ ಕದಂಬ ನೌಕಾನೆಲೆಯಲ್ಲಿರುವ ತೇಜ್ ಟಗ್‌ಬೋಟ್‌ನಲ್ಲಿ ಕಾಣಿಸಿಕೊಂಡ ಬೆಂಕಿಯನ್ನು ಅಗ್ನಿಶಾಮಕ ದಳದ ಸಿಬ್ಬಂದಿ ನಂದಿಸಿದರು (ಎಡಚಿತ್ರ) ಟಗ್‌ಬೋಟ್‌ನ ಬೆಂಕಿ ಆರಿಸಲು ನೀರು ಹಾಯಿಸಲಾಯಿತು

ನೌಕಾದಳದ ಬೋಟ್‌ನಲ್ಲಿ ಅಗ್ನಿ ಅವಘಡ

ಪ್ರಜಾವಾಣಿ ವಾರ್ತೆ

ಕಾರವಾರ: ಇಲ್ಲಿನ ಅರ್ಗಾದ ಕದಂಬ ನೌಕಾನೆಲೆಯ ಡಾಕ್ ಯಾರ್ಡ್‌ನಲ್ಲಿದ್ದ 'ತೇಜ್' ಹೆಸರಿನ ಟಗ್ ಬೋಟ್‌ನಲ್ಲಿ ಗುರುವಾರ ಬೆಂಕಿ ಅವಘಡ ಸಂಭವಿಸಿದೆ.

ಟಗ್ ಬೋಟ್‌ನಲ್ಲಿ ಏಕಾಏಕಿ ದಟ್ಟ ಹೊಗೆ ಕಾಣಿಸಿಕೊಂಡ ಕೂಡಲೇ ನೌಕಾದಳದ ಅಗ್ನಿಶಾಮಕ ಸಿಬ್ಬಂದಿ ಕಾರ್ಯಾಚರಣೆ ನಡೆಸಿದರು. ಜಿಲ್ಲಾ ಅಗ್ನಿಶಾಮಕ ದಳದ ವಾಹನವನ್ನೂ ಬಳಸಲಾಯಿತು.

'ಬೋಟ್‌ನ ಬ್ಯಾಟರಿ ಶಾರ್ಟ್ ಸರ್ಕಿಟ್ ಆಗಿದ್ದರಿಂದ ಹೊತ್ತಿಕೊಂಡ ಬೆಂಕಿಯು ಎಂಜಿನ್ ಮತ್ತು ಡೀಸೆಲ್ ಟ್ಯಾಂಕ್‌ಗೆ ವ್ಯಾಪಿಸಿತು. ಲಕ್ಷಾಂತರ ರೂಪಾಯಿ ಮೌಲ್ಯದ ವಸ್ತುಗಳಿಗೆ ಹಾನಿಯಾಗಿದೆ. ತ್ವರಿತ ಕಾರ್ಯಾಚರಣೆಯಿಂದ ಹೆಚ್ಚಿನ ಅನಾಹುತ ತಪ್ಪಿದೆ' ಎಂದು ನೌಕಾದಳದ ಮೂಲಗಳು ತಿಳಿಸಿವೆ.

ಬಿಜೆಪಿ ಸದಸ್ಯರ ಬೆಂಬಲ: ಎಸ್‌ಡಿಪಿಐಗೆ ಅಧ್ಯಕ್ಷ ಸ್ಥಾನ

ಉಳ್ಳಾಲ (ದಕ್ಷಿಣ ಕನ್ನಡ): ತಲಪಾಡಿ ಗ್ರಾಮ ಪಂಚಾಯಿತಿಯ ಎರಡನೇ ಅವಧಿಗೆ ಎಸ್‌ಡಿಪಿಐ ಬೆಂಬಲಿತ ಟಿ.ಇಸ್ಮಾಯಿಲ್ ಅಧ್ಯಕ್ಷರಾಗಿ ಚುನಾಯಿತರಾದರು. ಬಿಜೆಪಿ ಬೆಂಬಲಿತ ಪುಷ್ಪಾವತಿ ಶೆಟ್ಟಿ ಉಪಾಧ್ಯಕ್ಷೆಯಾಗಿ ಅವಿರೋಧವಾಗಿ ಆಯ್ಕೆಯಾದರು.

ಪಂಚಾಯಿತಿಯಲ್ಲಿ ಒಟ್ಟು 24 ಸದಸ್ಯರ ಪೈಕಿ 13 ಬಿಜೆಪಿ ಬೆಂಬಲಿತ ಸದಸ್ಯರಿದ್ದರೆ, ಒಬ್ಬರು ಕಾಂಗ್ರೆಸ್ ಹಾಗೂ 10 ಎಸ್‌ಡಿಪಿಐ ಬೆಂಬಲಿತರು ಇದ್ದಾರೆ. ಗುರುವಾರ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಬೆಂಬಲಿತ ವೈಭವ್ ವೈ. ಶೆಟ್ಟಿ ಮತ್ತು ಎಸ್‌ಡಿಪಿಐ ಬೆಂಬಲಿತ ಹಬೀಬಾ ಡಿ.ಬಿ ಗೈರಾಗಿದ್ದರು.

ಬಿಜೆಪಿ ಬೆಂಬಲದಿಂದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸಿದ್ದ ಸತ್ಯರಾಜ್ ಹಾಗೂ ಟಿ.ಇಸ್ಮಾಯಿಲ್ ಇಬ್ಬರೂ ಸಮಾನ ಮತ ಪಡೆದರು. ನಂತರ ಚುನಾವಣಾಧಿಕಾರಿ ಆದೇಶದಂತೆ ಚೀಟಿ ಎತ್ತುವ ಪ್ರಕ್ರಿಯೆಯಲ್ಲಿ ಟಿ.ಇಸ್ಮಾಯಿಲ್ ಗೆಲುವು ಸಾಧಿಸಿದರು.

₹80 ಸಾವಿರ ಮರಳಿಸಲು ಸತಾಯಿಸಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ದೇವನಹಳ್ಳಿ (ಬೆಂಗಳೂರು ಗ್ರಾಮಾಂತರ): ಕೆಂಪೇಗೌಡ ವಿಮಾನ ನಿಲ್ದಾಣದಲ್ಲಿ ಹಣವಿದ್ದ ಬ್ಯಾಗ್ ಬಿಟ್ಟು ಹೋದ ಪ್ರಯಾಣಿಕರಿಗೆ ಹಣ ಹಿಂದಿರುಗಿಸಲು ವಿಮಾನ ನಿಲ್ದಾಣದ ಅಧಿಕಾರಿಗಳು ಸತಾಯಿಸಿದ ಘಟನೆ ನಡೆದಿದೆ.

ಕಳೆದ ವಾರ ಕೆಲಸದ ಮೇಲೆ ಬೆಂಗಳೂರಿಗೆ ಬಂದಿದ್ದ ದೆಹಲಿಯ ಆಟೊಮೊಬೈಲ್ ವಿಭಾಗದ ಡೀಲರ್ ರಾಜಿಂದರ್ ಸಚದೇವ್ (60) ಜುಲೈ 29ರಂದು ಸಂಜೆ 6ಕ್ಕೆ 2406 ಇಂಡಿಗೊ ವಿಮಾನದಲ್ಲಿ ದೆಹಲಿಗೆ ಪ್ರಯಾಣಿಸಿದ್ದರು.

ಕೇಂದ್ರೀಯ ಕೈಗಾರಿಕಾ ಭದ್ರತಾ ಪಡೆ (ಸಿಐಎಸ್ಎಫ್) ಸಿಬ್ಬಂದಿಯ ಭದ್ರತಾ ತಪಾಸಣೆ ವೇಳೆ ಸಚದೇವ್ ಗಡಿಬಿಡಿಯಲ್ಲಿ ಎರಡು ಚೆಕ್ ಬ್ಯಾಗ್‌ಗಳ ಪೈಕಿ ಹಣವಿದ್ದ ಒಂದು ಬ್ಯಾಗ್ ಮರೆತು ಹೋಗಿದ್ದರು.

ವಿಮಾನ ಏರಿದ ನಂತರ ಅವರಿಗೆ ಭದ್ರತಾ ತಪಾಸಣೆ ಕೌಂಟರ್‌ನಲ್ಲಿ ಹಣವಿದ್ದ ಬ್ಯಾಗ್ ಬಿಟ್ಟು ಬಂದಿರುವುದು ನೆನಪಾಯಿತು. ಆ ಬ್ಯಾಗ್‌ನಲ್ಲಿ ₹80 ಸಾವಿರ ನಗದು, ಐ.ಡಿ ಕಾರ್ಡ್ ಸೇರಿದಂತೆ ಇನ್ನಿತರ ದಾಖಲೆಗಳಿದ್ದವು.

ದೆಹಲಿ ತಲುಪುತ್ತಲೇ ಮಗಳು ಕೋಕಿಲ್ ಸಚದೇವ್ ಮೂಲಕ ವಿಮಾನ ನಿಲ್ದಾಣದ 'ಲಾಸ್ಟ್ ಅಂಡ್ ಫೌಂಡ್' ವಿಭಾಗಕ್ಕೆ ದೂರು ಸಲ್ಲಿಸಿದ್ದರು. ಕಳೆದ ಶುಕ್ರವಾರ ಬೆಂಗಳೂರು ವಿಮಾನ ನಿಲ್ದಾಣ ಅಧಿಕಾರಿಗಳು, ಸಚದೇವ್ ಅವರಿಗೆ ಇ–ಮೇಲ್ ಕಳಿಸಿ 'ನಿಮ್ಮ ಬ್ಯಾಗ್ ಸಿಕ್ಕಿದೆ. ಅದರಲ್ಲಿ ನಿಮ್ಮ ಎಲ್ಲ ದಾಖಲೆ ಇವೆ. ಆದರೆ, ₹80 ಸಾವಿರ ಹಣ 'ಇಲ್ಲ' ಎಂದು ತಿಳಿಸಿದ್ದರು.

ವಿಮಾನ ನಿಲ್ದಾಣ ಪೊಲೀಸ್ ಠಾಣೆಯಲ್ಲಿ ದೂರು ಸಲ್ಲಿಸುವಂತೆ ರಾಜಿಂದರ್ ಸಚದೇವ್ ಬೆಂಗಳೂರಿನಲ್ಲಿರುವ ತಮ್ಮ ಸ್ನೇಹಿತರಿಗೆ ಕೇಳಿಕೊಂಡಿದ್ದರು. ಪೊಲೀಸರು ಸಿಸಿಟಿವಿ ಕ್ಯಾಮೆರಾ ದೃಶ್ಯ ಪರಿಶೀಲಿಸಿ ಬಳಿಕ ₹80 ಸಾವಿರ ಹಣ ಪತ್ತೆ ಹಚ್ಚಿದ್ದಾರೆ. ಆದಾದ ಬಳಿಕ ವಿಮಾನ ನಿಲ್ದಾಣದ ಅಧಿಕಾರಿಗಳು ಹಣ ಪಡೆಯುವಂತೆ ಸಚದೇವ್ ಅವರಿಗೆ ಮೇಲ್ ಕಳಿಸಿದ್ದಾರೆ.

ಸಚದೇವ್ ಅವರ ಸ್ನೇಹಿತ ಭಾನುವಾರ ವಿಮಾನ ನಿಲ್ದಾಣದಿಂದ ಬ್ಯಾಗ್, ₹80 ಸಾವಿರ ನಗದು ಮತ್ತು ದಾಖಲೆಗಳನ್ನು ಸಂಗ್ರಹಿಸಿದ್ದಾರೆ. ಮುಂದಿನ ವಾರ ಬೆಂಗಳೂರಿಗೆ ಹೋಗಿ ಹಣ ಮತ್ತು ಬ್ಯಾಗ್ ತೆಗೆದುಕೊಂಡು ಬರುವುದಾಗಿ ಕೋಕಿಲ್ ಸಚದೇವ್ ಗುರುವಾರ ದೆಹಲಿಯಲ್ಲಿ ಸುದ್ದಿಸಂಸ್ಥೆಯೊಂದಕ್ಕೆ ತಿಳಿಸಿದ್ದಾರೆ.



ಚೈತ್ರಾ ಜೆ.ಆಚಾರ್

ಚಂದನವನದಲ್ಲೀಗ 'ಚೈತ್ರ' ಕಾಲ

'ಗಿಲ್ಕಿ' ಸಿನಿಮಾ ಮೂಲಕ ಸ್ಯಾಂಡಲ್‌ವುಡ್‌ನಲ್ಲಿ ಗುರುತಿಸಿಕೊಂಡ ನಟಿ ಚೈತ್ರಾ ಜೆ.ಆಚಾರ್ ತಮ್ಮ ಸಿನಿ ಟ್ರ್ಯಾಕ್‌ನಲ್ಲಿ ಹೊಸ ಅಧ್ಯಾಯ ಬರೆದಿದ್ದಾರೆ. ಎರಡು ತಿಂಗಳ ಅಂತರದಲ್ಲಿ ಅವರ ನಟನೆಯ 'ಟೋಬಿ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ರಿಲೀಸ್ ಆಗುತ್ತಿದ್ದು, ಇವುಗಳ ಬಗ್ಗೆ ಸಾಕಷ್ಟು ನಿರೀಕ್ಷೆಗಳನ್ನು ಚೈತ್ರಾ ಇಟ್ಟುಕೊಂಡಿದ್ದಾರೆ. ಅವರು 'ಸಿನಿಮಾ ಪುರವಣಿ' ಜೊತೆ ಮಾತಿಗೆ ಸಿಕ್ಕಾಗ...

ಅಭಿಲಾಷ್ ಪಿ.ಎಸ್.

- **ನಿಮ್ಮ ಸಿನಿ ಟ್ರ್ಯಾಕ್‌ಗೆ ವೇಗ ಸಿಕ್ಕಿದ್ದಕ್ಕೆ ಕಾರಣವೇನು ಎಂದು ಅವಲೋಕಿಸಿದ್ದೀರಾ?**

ಈ ಬದಲಾವಣೆಯನ್ನು ನಾನು ಸೂಕ್ಷ್ಮವಾಗಿ ಡಿಕೋಡ್ ಮಾಡಿಲ್ಲ. ಸಿನಿಮಾ ಕ್ಷೇತ್ರದಲ್ಲಿನ ನನ್ನ ಮೊದಲ ಹೆಜ್ಜೆಯಿಂದಲೇ ನಾನು ಚಿತ್ರಗಳ ಆಯ್ಕೆಯಲ್ಲಿ ಬಹಳ ಸೂಕ್ಷ್ಮತೆಯನ್ನು ಕಾಪಿಟ್ಟುಕೊಂಡಿದ್ದೇನೆ. ಯಾವುದೋ ಒಂದು ಸಿನಿಮಾ ಸಿಕ್ಕಿತು ಅಥವಾ ಸಿಕ್ಕಿದ ಎಲ್ಲ ಅವಕಾಶಗಳನ್ನು ಬಳಸಿಕೊಳ್ಳುತ್ತೇನೆ ಎಂದು ತಲೆಯಲ್ಲಿ ಇರಲಿಲ್ಲ. ನಾನು ಚಿತ್ರದ ಕಥೆ ಹಾಗೂ ಪಾತ್ರದ ಆಯ್ಕೆ ವಿಚಾರದಲ್ಲಿ ಬಹಳ ಕಠಿಣ ನಿಯಮಗಳನ್ನು ಹಾಕಿಕೊಂಡಿದ್ದೇನೆ. ನಾನು ಇಲ್ಲಿಯವರೆಗೆ ಮಾಡಿರುವ ಸಿನಿಮಾಗಳು, ನನ್ನೊಳಗಿನ ಸಾಮರ್ಥ್ಯವನ್ನು ಇನ್ನಷ್ಟು ಅನ್ವೇಷಿಸಬೇಕು ಎನ್ನುವ ಕುತೂಹಲದಿಂದ ಆಯ್ಕೆ ಮಾಡಿದಂತಹವು.

'ಮಹಿರ' ಸಿನಿಮಾದಲ್ಲಿ 'ಆದ್ಯ' ಎಂಬ 16 ವರ್ಷದ ಹುಡುಗಿಯ ಪಾತ್ರ ಮಾಡಿದೆ. ನನ್ನ ವಯಸ್ಸು ಅದಕ್ಕಿಂತ ಹೆಚ್ಚಿತ್ತು. ಆ ಪಾತ್ರವನ್ನು ನಿರ್ವಹಿಸುವುದು ಮಾನಸಿಕವಾಗಿ, ದೈಹಿಕವಾಗಿ ಸವಾಲುಗಳನ್ನು ಹೊಂದಿತ್ತು. 'ಗಿಲ್ಕಿ'ಯಲ್ಲಿ ಸೆರಬ್ರಲ್ ಪಾಲ್ಸಿಗೆ ಒಳಗಾಗಿರುವ ಹುಡುಗಿಯ ಪಾತ್ರ ಮಾಡಿದೆ. ಇದಕ್ಕೆ ನನ್ನದೇ ಹೋಂವರ್ಕ್ ಮಾಡಿಕೊಂಡೆ. ಇದನ್ನು ಹೆಚ್ಚಿನ ಪ್ರೇಕ್ಷಕರು ನೋಡದೇ ಇದ್ದರೂ, ಸಿನಿಮಾ ವಲಯದಲ್ಲಿನ ವಿಮರ್ಶಕರು ಹಾಗೂ ಕಲಾವಿದರು ಮೆಚ್ಚಿದರು. ಅಲ್ಲಿಂದ ಚೈತ್ರಾ ಜೆ.ಆಚಾರ್ ಎಂದರೆ ಯಾರು ಎಂದು ತಿಳಿಯಿತು. 'ತಲೆದಂಡ' ಸಿನಿಮಾ ರಾಷ್ಟ್ರ ಪ್ರಶಸ್ತಿ ಪಡೆಯಿತು. ನಾನು ನಿರ್ವಹಿಸಿದ ಪಾತ್ರಗಳನ್ನು ನೋಡಿದವರಿಂದಲೇ ನನಗೆ ಅವಕಾಶಗಳು ಬರುತ್ತಿವೆ. ನಟನೆಯ ವಿಚಾರಕ್ಕೆ ಬಂದಾಗ ನಿರ್ದೇಶಕರು ನನ್ನನ್ನು ಬಹಳ ಗಂಭೀರವಾಗಿ ತೆಗೆದುಕೊಂಡಿದ್ದಾರೆ ಎನ್ನುವ ಖುಷಿ ಇದೆ. ರಾಜ್ ಬಿ.ಶೆಟ್ಟಿ ಅವರು ನನಗೆ ಬಹಳ ವರ್ಷಗಳಿಂದ ಪರಿಚಿತರಾಗಿದ್ದರೂ, ಯಾವತ್ತೂ ನಾನು ಅವರ ಬಳಿ ಅವಕಾಶ ಕೇಳಿಲ್ಲ. 'ಟೋಬಿ'ಯಲ್ಲಿನ ಪ್ರಮುಖ ಪಾತ್ರಕ್ಕೆ ನೀನು ಸೂಕ್ತ ಎಂದು ಅವರು ಅವಕಾಶ ನೀಡಿದ್ದರ ಹಿಂದೆ, ನಾನು ಮಾಡಿರುವ ಸಿನಿಮಾಗಳ ಆಯ್ಕೆಗಳೇ ಕಾರಣವಾಗಿರಬಹುದು. ನನ್ನ ಈ ಸಿನಿ ಟ್ರ್ಯಾಕ್‌ನ ಏರಿಕೆಗೆ ಆಯ್ಕೆಗಳೇ ಕಾರಣ ಎಂದುಕೊಳ್ಳುತ್ತೇನೆ.

- **'ಟೋಬಿ' ಹಾಗೂ 'ಸಪ್ತ ಸಾಗರದಾಚೆ ಎಲ್ಲೋ' ತೆಕ್ಕೆಗೆ ಬಂದಿದ್ದು ಹೇಗೆ?**

'ಗಿಲ್ಕಿ' ಸಿನಿಮಾ ಆಗಷ್ಟೇ ರಿಲೀಸ್ ಆಗಿತ್ತು. ನಂತರ ನಾನು 'ಬ್ಲಿಂಕ್' ಸಿನಿಮಾ ಶೂಟಿಂಗ್ ನಡೆಸುತ್ತಿದ್ದೆ. ಆ ಸಂದರ್ಭದಲ್ಲಿ ಪರಂವಃದಿಂದ ಕರೆ ಬಂದಿತ್ತು. ನಿರ್ದೇಶಕ ಹೇಮಂತ್ ರಾವ್ ಅವರು ಭೇಟಿಯಾಗಲು ಇಚ್ಛಿಸಿದ್ದರು. 'ಸಪ್ತ ಸಾಗರದಾಚೆ ಎಲ್ಲೋ' ಸಿನಿಮಾದಲ್ಲಿ ಸೆಕೆಂಡ್ ಲೀಡ್ ಇರುತ್ತದೆ ಎನ್ನುವ ಯಾವ ಸುಳಿವೂ ಆ ಸಂದರ್ಭದಲ್ಲಿ ಇರಲಿಲ್ಲ. ಹೀಗಾಗಿ ಬೇರೆ ಯಾವುದೋ ಸಿನಿಮಾ ಕಥೆ ಹೇಳಲು ಕರೆಯುತ್ತಿದ್ದಾರೆ ಎಂದುಕೊಂಡೆ. ಭೇಟಿಯಾಗಿ ಮಾತುಕತೆ ನಡೆಸಿದಾಗಲೇ ನಿಜ ವಿಷಯ ತಿಳಿದದ್ದು. ರಕ್ಷಿತ್ ಜೊತೆ ಲೀಡ್ ಆಗಿ ಮಾಡುವ ಅವಕಾಶ ಸಿಕ್ಕಿದ್ದಕ್ಕೆ ಖುಷಿಯಾಯಿತು. ಅವರ ಪಾತ್ರದಷ್ಟೇ ನನ್ನ ಪಾತ್ರಕ್ಕೂ ಪ್ರಾಮುಖ್ಯವಿದೆ. 'ಮನು' ಮತ್ತು 'ಸುರಭಿ' ಪ್ರೇಕ್ಷಕರನ್ನು ಕಾಡುವ ಪಾತ್ರಗಳು.

'ಸಪ್ತ ಸಾಗರದಾಚೆ ಎಲ್ಲೋ' ಶೂಟಿಂಗ್ ಪೂರ್ಣಗೊಂಡ ಬಳಿಕ 'ಟೋಬಿ' ಪ್ರಾಜೆಕ್ಟ್ ಸಿಕ್ಕಿತು. ಪಾತ್ರಗಳನ್ನು ಬರೆಯುತ್ತಾ ಕಲಾವಿದರನ್ನು ಅದೇ ಸಂದರ್ಭದಲ್ಲಿ ರಾಜ್ ಆಯ್ಕೆ ಮಾಡಿಕೊಳ್ಳುತ್ತಿದ್ದರು. ಈ ಪಾತ್ರದ ಹೆಸರು ಇನ್ನೂ ರಿವೀಲ್ ಮಾಡಿಲ್ಲ. 'ಟೋಬಿ' ಶೂಟಿಂಗ್‌ಗೆ ಇನ್ನೇನು ಒಂದು ವಾರ ಇದೆ ಎನ್ನುವಾಗ ನಾನು ಆ ಕಥೆ ಓದಿದ್ದೆ. ರಾಜ್ ಹಾಗೂ ಅವರ ಬರವಣಿಗೆಯ ಮೇಲೆ ನಂಬಿಕೆ ಇಟ್ಟುಕೊಂಡೇ ನಾನು ಆ ಸಿನಿಮಾ ಒಪ್ಪಿದೆ.

- **ಎರಡು ತಿಂಗಳ ಅಂತರದಲ್ಲಿ ಎರಡು ಸಿನಿಮಾ!**

ಹೌದು... ಇಬ್ಬರೂ ಒಂದಿಷ್ಟು ಸಮಯ ಇಟ್ಟುಕೊಂಡು ಬರುತ್ತಾರೆ ಎಂದುಕೊಂಡೆ. ಆದರೆ ಸ್ನೇಹಿತರಿಬ್ಬರೂ ಮಾತನಾಡಿಕೊಂಡು ಜೊತೆಗೇ ಬಂದಿದ್ದಾರೆ. ಎರಡೂ ಬೇರೆ ಬೇರೆ ಜಾನರ್‌ನ ಅದ್ಭುತ ಸಿನಿಮಾಗಳು. 'ಟೋಬಿ'ಯಲ್ಲಿನ ಚೈತ್ರಳಿಗೂ 'ಸಪ್ತ..'ದಲ್ಲಿನ ಚೈತ್ರಳಿಗೂ ಅಜಗಜಾಂತರ ವ್ಯತ್ಯಾಸವಿದೆ. ಒಂದರ ಬೆನ್ನಿಗಿನ್ನೊಂದು ಸಿನಿಮಾಗಳು ರಿಲೀಸ್ ಆಗುತ್ತಿರುವುದು ನಟಿಯಾಗಿ ನನಗೆ ಖುಷಿ ತಂದಿದೆ. 'ಸಪ್ತ..' ಮೊದಲ ಭಾಗದಲ್ಲಿ ನಾನು ಇಲ್ಲವೇ ಇಲ್ಲ. ಎರಡನೇ ಭಾಗದಲ್ಲಿ 'ಸುರಭಿ'ಯ ಪ್ರವೇಶವಾಗುತ್ತದೆ.

- **'ಟೋಬಿ'ಯಲ್ಲಿನ ನಿಮ್ಮ ಪಾತ್ರದ ಬಗ್ಗೆ ಹೇಳಿ**

ಈಗ ಬಂದಿರುವ 'ಟ್ರೈಲರ್'ಗೂ ಸಿನಿಮಾಗೂ ಸಂಬಂಧವೇ ಇಲ್ಲ. ಸಿನಿಮಾದಲ್ಲಿರುವ ದೃಶ್ಯಗಳನ್ನು ತೆಗೆದುಕೊಂಡು ಟ್ರೈಲರ್‌ನಲ್ಲಿ ಒಂದು ಕಥೆ ಹೆಣೆಯಲಾಗಿದೆ. ಹೀಗಾಗಿ ಒಬ್ಬೊಬ್ಬರೂ ಒಂದೊಂದು ರೀತಿ ಅದನ್ನು ಡಿಕೋಡ್ ಮಾಡುತ್ತಿದ್ದಾರೆ. ನಿಜವಾಗಿ ಹೇಳಬೇಕಾದರೆ ಅದು ಕಥೆಯೇ ಅಲ್ಲ. ಟ್ರೈಲರ್‌ನಲ್ಲಿ ನೋಡಿರುವ ದೃಶ್ಯಗಳು ಸಿನಿಮಾದಲ್ಲಿ ಬೇರೆ ಬೇರೆ ಕಡೆ ಪ್ಲೇಸ್ ಆಗಿವೆ. ಕಥೆಯಲ್ಲಿ ಸಾಕಷ್ಟು ಡ್ರಾಮಾ ಇದೆ. ನನ್ನ ಪಾತ್ರವನ್ನು ಸಿನಿಮಾದಲ್ಲೇ ನೋಡಿ ಅರಿತುಕೊಂಡರೆ ಸೂಕ್ತ ಎನಿಸುತ್ತದೆ. ನನಗೂ ರಾಜ್‌ಗೂ ಸ್ಕ್ರೀನ್ ಸ್ಪೇಸ್ ಸಮಾನ ವಾಗಿದೆ. ರಾಜ್ ತಮ್ಮ ಪಾತ್ರದ ತೂಕದಷ್ಟೇ ನನ್ನ ಪಾತ್ರವನ್ನೂ ಬರೆದಿದ್ದಾರೆ.

- **ರಾಜ್ ಹಾಗೂ ಹೇಮಂತ್ ರಾವ್ ನಿರ್ದೇಶನದ ಬಗ್ಗೆ...**

ಸಿನಿಮಾದ ಸಂಕಲನವನ್ನು ತಲೆಯಲ್ಲಿಟ್ಟುಕೊಂಡೇ ರಾಜ್ ವೇಗವಾಗಿ ಶೂಟ್ ಮುಗಿಸುತ್ತಾರೆ. ಹೇಮಂತ್, ಎಷ್ಟೇ ಟೇಕ್ ಆದರೂ ಪರವಾಗಿಲ್ಲ ಕಲಾವಿದರು ದೃಶ್ಯವೊಂದನ್ನು ಮತ್ತಷ್ಟು ಉತ್ಕೃಷ್ಟಗೊಳಿಸಲು ಪ್ರಯತ್ನಿಸಿದರೆ ಅವಕಾಶ ನೀಡುವ ನಿರ್ದೇಶಕ. ಇಬ್ಬರ way of film making ವಿಭಿನ್ನವಾಗಿದೆ. ರಾಜ್ ಜೊತೆ ನಟನೆ ಮಾಡುವಾಗ ನಾವು ತುಂಬಾ ಎಚ್ಚರಿಕೆಯಿಂದ ಇರಬೇಕು. ಅವರು ಬಹಳ ಸರಳವಾಗಿ ನಟನೆ ಮಾಡಿ ಮುಗಿಸುತ್ತಾರೆ. 'ಟೋಬಿ' ಎನ್ನುವ ಪಾತ್ರದೊಳಗೆ ಯಾವುದೇ ಕಷ್ಟವಿಲ್ಲದೆ ಒಳಹೊಕ್ಕು ಹೊರಬರುತ್ತಾರೆ. It's a treat to work with him.

- **ಮುಂದಿನ ಪ್ರಾಜೆಕ್ಟ್ಸ್?**

'ಬ್ಲಿಂಕ್' ಎಂಬ ಸಿನಿಮಾದಲ್ಲಿ 'ದೇವಕಿ ಅರಸ್' ಎಂಬ ಪಾತ್ರದಲ್ಲಿ ಕಾಣಿಸಿಕೊಳ್ಳುತ್ತಿದ್ದೇನೆ. ಶ್ರೀನಿಧಿ ಬೆಂಗಳೂರು ಇದರ ನಿರ್ದೇಶಕ. ಶ್ರುತಿ ಹರಿಹರನ್ ನಟನೆಯ 'ಸ್ಟ್ರಾಬೆರಿ'ಯಲ್ಲೂ ಬಣ್ಣಹಚ್ಚಿದ್ದೇನೆ. ಒಂದೆರಡು ಸಿನಿಮಾಗಳು ಮಾತುಕತೆ ಹಂತದಲ್ಲಿವೆ. 'ಟೋಬಿ' ಹಾಗೂ 'ಸಪ್ತ..' ಪ್ರಚಾರ ಹಾಗೂ ರಿಲೀಸ್ ಕಾರಣದಿಂದ ಇವುಗಳ ಶೂಟಿಂಗ್ ದಿನಾಂಕಗಳು ನಿಗದಿಯಾಗಿಲ್ಲ.

ಪ್ರಜಾವಾಣಿ ನೋಡಿಯೊ
ಸಿನಿಮಾತು
ನೋಡಲು ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ



ಅನಿರುದ್ಧ ಹೊಸ ಅವತಾರ!

ಸಿಲ್ವರ್‌ಸ್ಕ್ರೀನ್‌ನಿಂದ ಕೊಂಚ ದೂರ ಉಳಿದಿದ್ದ ನಟ ಅನಿರುದ್ಧ ಮತ್ತೆ ಬೆಳ್ಳಿಪರದೆಯಲ್ಲಿ ಅದೃಷ್ಟಪರೀಕ್ಷೆಗೆ ಸಜ್ಜಾಗಿದ್ದಾರೆ. ಇದೀಗ ಶೆಫ್ ವೇಷದಲ್ಲಿ ಅನಿರುದ್ಧ ಡಾರ್ಕ್ ಕಾಮಿಡಿ ಜಾನರ್‌ನ 'ಶೆಫ್ ಚಿಂದಬರ'ನಾಗಿ ಮರಳಿದ್ದಾರೆ. ಚಿತ್ರದ ಶೀರ್ಷಿಕೆಯನ್ನು ಇತ್ತೀಚೆಗಷ್ಟೇ ನಟ ಕಿಚ್ಚ ಸುದೀಪ್ ರಿವೀಲ್ ಮಾಡಿದ್ದಾರೆ.

ಚಿತ್ರದ ಮುಹೂರ್ತ ಗುರುವಾರ(ಆ.10) ನಡೆದಿದ್ದು, ಚಿತ್ರೀಕರಣವೂ ಆರಂಭವಾಗಿದೆ. ಒಂದೇ ಹಂತದಲ್ಲಿ ಚಿತ್ರೀಕರಣವನ್ನು ಪೂರ್ಣಗೊಳಿಸಲು ನಿರ್ದೇಶಕ ಎಂ.ಆನಂದರಾಜ್ ನಿರ್ಧರಿಸಿದ್ದು, ಸೆ.15ಕ್ಕೆ ಶೂಟಿಂಗ್ ಪೂರ್ಣಗೊಳಿಸುವ ಗಡುವು ಹಾಕಿಕೊಂಡಿದ್ದಾರೆ. ಬೆಂಗಳೂರು, ದಾಬಸ್‌ಪೇಟೆ, ತುಮಕೂರು, ಮಂಗಳೂರಿನಲ್ಲಿ ಚಿತ್ರದ ಚಿತ್ರೀಕರಣ ನಡೆಯಲಿದೆ.

'ಇಡೀ ಸಿನಿಮಾದ ಕಥೆಯನ್ನು ನಾನು ಕ್ಯಾರೆಕ್ಟರ್ ಪೋಸ್ಟರ್‌ನಲ್ಲಿ ಹೇಳಿದ್ದೇನೆ. ನಾಯಕನ ವೃತ್ತಿ ಮತ್ತು ಮತ್ತೊಂದು ಮುಖ ಅದರಲ್ಲಿ ಅನಾವರಣಗೊಂಡಿದೆ. ಕಥೆಯಲ್ಲಿ ಹಲವು ತಿರುವುಗಳಿದ್ದು, ಅನನುಕ್ರಮಣಿಕೆಯ ಸ್ಕ್ರೀನ್‌ಪ್ಲೇ ಹೊಂದಿದೆ. ಇದಕ್ಕಾಗಿಯೇ 'ಟೇಸ್ಟಿ ಟ್ವಿಸ್ಟ್' ಎಂಬ ಟ್ಯಾಗ್‌ಲೈನ್ ಅನ್ನು ಸಿನಿಮಾಗೆ ನೀಡಿದ್ದೇನೆ. ಇದು ಎಂಟರ್‌ಟೇನ್ಮೆಂಟ್ ಪ್ಯಾಕೇಜ್' ಎನ್ನುತ್ತಾರೆ ಆನಂದರಾಜ್.



ಎಂ.ಆನಂದರಾಜ್

'ಅನಿರುದ್ಧ ಅವರನ್ನು 'ರಾಘು' ಸಿನಿಮಾ ಬಳಿಕ ಭೇಟಿಯಾಗಿ ಒನ್ ಲೈನ್ ಕಥೆ ಹೇಳಿದ್ದೆ. ಅವರು ಒಪ್ಪಿಗೆ ಸೂಚಿಸಿದ ಬಳಿಕ ಇಡೀ ಚಿತ್ರಕಥೆ ಸಿದ್ಧವಾಗಿದೆ. ಅವರು ಕಿರುತೆರೆಯಲ್ಲೇ ತೊಡಗಿಸಿಕೊಂಡಿದ್ದರೂ, ಸಿನಿಮಾಗಾಗಿ ಅವರಾಗಿಯೇ ಸಿದ್ಧರಾಗಿದ್ದಾರೆ. ಸಾಕಷ್ಟು ಹೋಂವರ್ಕ್ ಮಾಡಿಕೊಂಡಿದ್ದಾರೆ' ಎಂದರು ಆನಂದರಾಜ್.

ದಮ್ಮಿ ಪಿಕ್ಚರ್ಸ್ ಲಾಂಛನದಲ್ಲಿ ರೂಪ ಡಿ.ಎನ್ ನಿರ್ಮಿಸುತ್ತಿರುವ ಈ ಚಿತ್ರಕ್ಕೆ ಗಣೇಶ್ ಪರಶುರಾಮ್ ಚಿತ್ರಕಥೆ ಹಾಗೂ ಸಂಭಾಷಣೆ ಬರೆದಿದ್ದಾರೆ. ಉದಯಲೀಲ ಛಾಯಾಚಿತ್ರಗ್ರಹಣ, ರಿತ್ವಿಕ್ ಮುರಳಿಧರ್ ಸಂಗೀತ ನಿರ್ದೇಶನ, ವಿಜೇತ್ ಚಂದ್ರ ಸಂಕಲನ, ಆಶಿಕ್ ಕುಸುಗೊಳ್ಳಿ ಡಿ.ಐ, ನರಸಿಂಹಮೂರ್ತಿ ಸಾಹಸ ನಿರ್ದೇಶನ ಹಾಗೂ ಮಾಧುರಿ ಪರಶುರಾಮ್ ಅವರ ನೃತ್ಯ ನಿರ್ದೇಶನ ಈ ಚಿತ್ರಕ್ಕಿದೆ. ಅನಿರುದ್ಧ ಅವರಿಗೆ ನಾಯಕಿಯರಾಗಿ ನಿಧಿ ಸುಬ್ಬಯ್ಯ ಹಾಗೂ 'ಲವ್ ಮಾಕ್ಟೇಲ್-2' ಖ್ಯಾತಿಯ ರೇಚಲ್ ಡೇವಿಡ್ ಅಭಿನಯಿಸುತ್ತಿದ್ದಾರೆ.

15 ಜಿಲ್ಲಾ ಆಸ್ಪತ್ರೆಗಳಿಗೆ ಎಂಆರ್‌ಐ, 5 ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್: ಸಚಿವ ಸಂಪುಟದಲ್ಲಿ ತೀರ್ಮಾನ

ಕೆಎಸ್‌ಆರ್‌ಟಿಸಿ ಬಸ್‌ಗೆ ಟ್ರ್ಯಾಕಿಂಗ್ ವ್ಯವಸ್ಥೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೆಎಸ್‌ಆರ್‌ಟಿಸಿ ಬಸ್ಸುಗಳ ಸಂಚಾರ ನಿಗಾ ವ್ಯವಸ್ಥೆ ಮತ್ತು ಪ್ಯಾನಿಕ್ ಬಟನ್ ವ್ಯವಸ್ಥೆಯೊಂದಿಗೆ ಕೇಂದ್ರೀಕೃತ ನಿಯಂತ್ರಣ ಕೊಠಡಿ ಸ್ಥಾಪಿಸುವ ₹30.74 ಕೋಟಿ ಯೋಜನೆಗೆ ಸಚಿವ ಸಂಪುಟ ಸಭೆ ಆಡಳಿತಾತ್ಮಕ ಅನುಮೋದನೆ ನೀಡಿದೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ತಿಳಿಸಿದರು.

ಈ ಯೋಜನೆ ಜಾರಿಯಿಂದ ನೈಜ ಸಮಯದಲ್ಲಿ ಪ್ರಯಾಣಿಕರ ಮಾಹಿತಿ ವ್ಯವಸ್ಥೆ, ಸುಧಾರಿತ ನಿರ್ವಹಣಾ ಮಾಹಿತಿ ವ್ಯವಸ್ಥೆ, ಬಸ್‌ಗಾಗಿ ಕಾಯುವ ಅನಿಶ್ಚಿತತೆ ಕಡಿಮೆ ಮಾಡಬಹುದು ಎಂದು ಅವರು ಸುದ್ದಿಗೋಷ್ಠಿಯಲ್ಲಿ ಹೇಳಿದರು.



ಅಲ್ಲದೇ, ಬಸ್ ಪ್ರಯಾಣದ ಸಮಯವೂ ಕಡಿಮೆ ಆಗಲಿದೆ. ಸರ್ಕಾರಿ ಬಸ್ ವ್ಯವಸ್ಥೆಯ ವಿಶ್ವಾಸಾರ್ಹತೆ, ಆರ್ಥಿಕ ಸ್ಥಿತಿ ಉತ್ತಮಗೊಳ್ಳಲಿದೆ, ಅಪಘಾತ ಮತ್ತು ಅವಘಡಗಳ ನಿಯಂತ್ರಣ ಸಾಧ್ಯ ಎಂದು ಪಾಟೀಲ ವಿವರಿಸಿದರು.

ಅಲ್ಲದೇ, ಬಸ್ ಸೇವೆಯ ಗುಣಮಟ್ಟ ವೃದ್ಧಿಗೊಳಿಸುವುದು, ಬೇಡಿಕೆಯ ಮೌಲ್ಯಮಾಪನಕ್ಕಾಗಿ ದತ್ತಾಂಶ ಲಭ್ಯತೆ, ಬಸ್ ಕಾರ್ಯಾಚರಣೆ ಸನ್ನಿವೇಶಗಳ ವಿಶ್ಲೇಷಣೆ, ಹೆಚ್ಚಿದ ಪ್ರಯಾಣಿಕರು ಮತ್ತು ಉತ್ತಮ ಆದಾಯ, ಇಂಧನ ವೆಚ್ಚದಲ್ಲಿ ಉಳಿತಾಯವೂ ಆಗುತ್ತದೆ ಎಂದರು.

15 ಜಿಲ್ಲಾ ಆಸ್ಪತ್ರೆಗಳಿಗೆ ಎಂಆರ್‌ಐ: ರಾಜ್ಯದ 15 ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಎಂಆರ್‌ಐ ಸ್ಕ್ಯಾನ್ ಮತ್ತು 5 ಜಿಲ್ಲಾ ಸಾರ್ವಜನಿಕ ಆಸ್ಪತ್ರೆಗಳಲ್ಲಿ ಸಿಟಿ ಸ್ಕ್ಯಾನ್ ಸೇವೆಗಳನ್ನು ಖಾಸಗಿ ಸಹಭಾಗಿತ್ವದಲ್ಲಿ ಆರಂಭಿಸಲು ಸಂಪುಟ ಸಭೆ ಒಪ್ಪಿಗೆ ನೀಡಿದೆ. ಇದರ ಅನುಷ್ಠಾನಕ್ಕೆ ₹47.41 ಕೋಟಿ ವೆಚ್ಚವಾಗಲಿದೆ.

ಎಲ್ಲೆಲ್ಲಿ ಎಂಆರ್‌ಐ ಸ್ಕ್ಯಾನ್: ಸಿ.ವಿ. ರಾಮನ್‌ನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ.ಜನರಲ್ ಆಸ್ಪತ್ರೆ, ಜಯನಗರ ಸಾರ್ವಜನಿಕ ಆಸ್ಪತ್ರೆ (ಬೆಂಗಳೂರು), ಚಿಕ್ಕಮಗಳೂರು, ದಾವಣಗೆರೆ, ಬಾಗಲಕೋಟೆ, ಧಾರವಾಡ, ಹಾವೇರಿ, ರಾಮನಗರ, ಯಾದಗಿರಿ, ಮೈಸೂರು, ವೆನ್‌ಲಾಕ್ ಆಸ್ಪತ್ರೆ(ಮಂಗಳೂರು,) ವಿಜಯನಗರ, ಉಡುಪಿ, ಚಿಕ್ಕೋಡಿ, ಅರಸೀಕೆರೆ.

ಸಿಟಿಸ್ಕ್ಯಾನ್: ಮೈಸೂರು, ಚಿತ್ರದುರ್ಗ, ಮಂಗಳೂರಿನ ವೆನ್‌ಲಾಕ್ ಆಸ್ಪತ್ರೆ, ಬೆಂಗಳೂರಿನ ಸಿ.ವಿ.ರಾಮನ್‌ನಗರ ಸಾರ್ವಜನಿಕ ಆಸ್ಪತ್ರೆ, ಕೆ.ಸಿ.ಜನರಲ್ ಆಸ್ಪತ್ರೆ.

ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿ ರಚನೆ

ಕರಾವಳಿ ಅಭಿವೃದ್ಧಿ ಪ್ರಾಧಿಕಾರವನ್ನು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿ ಎಂದು ಬದಲಿಸಲು ಸಚಿವ ಸಂಪುಟ ಒಪ್ಪಿಗೆ ನೀಡಿದೆ.

ಉಡುಪಿ, ಉತ್ತರ ಕನ್ನಡ ಮತ್ತು ಚಿಕ್ಕಮಗಳೂರು ಜಿಲ್ಲೆಗಳ 23 ತಾಲ್ಲೂಕುಗಳನ್ನು ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಯಿಂದ ಕೈಬಿಟ್ಟು ಕರಾವಳಿ ಪ್ರದೇಶಾಭಿವೃದ್ಧಿ ಮಂಡಳಿಗೆ ಸೇರಿಸಲಾಗುವುದು. ಈ ಸಂಬಂಧ ಮುಂಬರುವ ವಿಧಾನಮಂಡಲ ಅಧಿವೇಶನದಲ್ಲಿ ಮಸೂದೆ ಮಂಡಿಸಲಾಗುವುದು ಎಂದು ಎಚ್.ಕೆ.ಪಾಟೀಲ ತಿಳಿಸಿದರು.

ಪ್ರಮುಖ ಅಂಶಗಳು

- ಬೆಳಗಾವಿ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯ ಆವರಣದಲ್ಲಿ ನಿರ್ಮಿಸುತ್ತಿರುವ ಸೂಪರ್ ಸ್ಪೆಷಾಲಿಟಿ ಆಸ್ಪತ್ರೆಯ ಪರಿಷ್ಕೃತ ಅಂದಾಜು ಮೊತ್ತ ₹187 ಕೋಟಿಗೆ ಒಪ್ಪಿಗೆ.
- ಏರೋಸ್ಪೇಸ್ ಹಾಗೂ ರಕ್ಷಣಾ ಶ್ರೇಷ್ಠತಾ ಕೇಂದ್ರದ ಪರಿಷ್ಕೃತ ಅಂದಾಜು ವೆಚ್ಚ ₹288.68 ಕೋಟಿಯಿಂದ ₹391.61 ಕೋಟಿಗೆ ಹೆಚ್ಚಿಸಲು ಅನುಮೋದನೆ.

ಸಿದ್ದರಾಮಯ್ಯ, ಡಿಕೆಶಿ ವಿರುದ್ಧದ ಕೇಸ್ ವಾಪಸ್

ಬೆಂಗಳೂರು: ಕಾಂಗ್ರೆಸ್ ಪಕ್ಷವು ಮೇಕೆದಾಟು ಪಾದಯಾತ್ರೆ ಸಂದರ್ಭದಲ್ಲಿ ಕೋವಿಡ್–19 ನಿಯಮ ಉಲ್ಲಂಘಿಸಿದ ಕಾರಣಕ್ಕಾಗಿ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ಸಿದ್ದರಾಮಯ್ಯ, ಡಿ.ಕೆ.ಶಿವಕುಮಾರ್ ಸೇರಿ ಹಲವು ನಾಯಕರ ವಿರುದ್ಧ ದಾಖಲಾಗಿದ್ದ ಮೊಕದ್ದಮೆಗಳನ್ನು ಹಿಂದಕ್ಕೆ ಪಡೆಯಲು ಗುರುವಾರ ನಡೆದ ಸಚಿವ ಸಂಪುಟ ಸಭೆ ತೀರ್ಮಾನಿಸಿದೆ.

ಕಾನೂನು ಮತ್ತು ಸಂಸದೀಯ ಸಚಿವ ಎಚ್.ಕೆ.ಪಾಟೀಲ ಅವರು ಸಂಪುಟ ಸಭೆಯ ಬಳಿಕ ಸುದ್ದಿಗಾರರಿಗೆ ಈ ವಿಷಯ ತಿಳಿಸಿದರು.

ಪ್ರಕರಣ ಹಿಂದಕ್ಕೆ ಪಡೆಯುವ ಸಂಬಂಧ ಸರ್ಕಾರದ ಮುಖ್ಯಸಚೇತಕ ಅಶೋಕ ಪಟ್ಟಣ ಪ್ರಸ್ತಾವನೆ ಸಲ್ಲಿಸಿದ್ದರು. ಬುಧವಾರ ನಡೆದ ಸಚಿವ ಸಂಪುಟದ ಉಪಸಮಿತಿಯ ಶಿಫಾರಸಿನಂತೆ 9 ಪ್ರಕರಣಗಳನ್ನು ಅಭಿಯೋಜನೆಯಿಂದ ಹಿಂದಕ್ಕೆ ಪಡೆಯುವುದಕ್ಕಾಗಿ, ಹೈಕೋರ್ಟ್‌ನ ಅನುಮತಿ ಪಡೆಯಲು ಅಗತ್ಯ ಕ್ರಮ ಕೈಗೊಳ್ಳಲು ಸಭೆ ಅನುಮೋದಿಸಿದೆ ಎಂದರು.

ಅಲ್ಲದೇ, ರಾಜ್ಯದ ಜನಪ್ರತಿನಿಧಿಗಳಿಂದ ಮತ್ತು ಸಾರ್ವಜನಿಕರಿಂದ ರಾಜ್ಯದ ವಿವಿಧ ಪೊಲೀಸ್ ಠಾಣೆಗಳಲ್ಲಿ ದಾಖಲಾಗಿರುವ ಹಾಗೂ ವಿವಿಧ ನ್ಯಾಯಾಲಯಗಳಲ್ಲಿ ವಿಚಾರಣೆಗೆ ಬಾಕಿ ಇರುವ ಕ್ರಿಮಿನಲ್ ಮೊಕದ್ದಮೆಗಳನ್ನು ಹಿಂಪಡೆಯಲು ಸ್ವೀಕೃತವಾಗುವ ಪ್ರಸ್ತಾವನೆಗಳಿಗೆ ಒಳಾಡಳಿತ ಇಲಾಖೆಯಿಂದ ಸಚಿವ ಸಂಪುಟದ ನಿರ್ಣಯದಂತೆ ಪರಿಗಣಿಸಲಾಗುತ್ತದೆ ಎಂದು ಹೇಳಿದರು.

ಕೋಮು ಗಲಭೆಗಳಿಗೆ ಸಂಬಂಧಿಸಿದಂತೆ ಯಾವುದೇ ಪ್ರಕರಣಗಳನ್ನು ಹಿಂದಕ್ಕೆ ಪಡೆದಿಲ್ಲ ಎಂದೂ ಅವರು ಸ್ಪಷ್ಟಪಡಿಸಿದರು.

ಸುದ್ದಿ 2 ನಿಮಿಷ

‘ಗೃಹಲಕ್ಷ್ಮಿ’: 27ರಂದು ಚಾಲನೆ

ಬೆಂಗಳೂರು: ‘ಗೃಹಲಕ್ಷ್ಮಿ’ ಯೋಜನೆಗೆ ಇದೇ 27ರಂದು ಬೆಳಗಾವಿಯಲ್ಲಿ ಚಾಲನೆ ನೀಡಲಾಗುವುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಲಕ್ಷ್ಮಿ ಹೆಬ್ಬಾಳ್ಕರ ತಿಳಿಸಿದರು.

ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ನೇತೃತ್ವದಲ್ಲಿ ಎಲ್ಲ ಜಿಲ್ಲಾಧಿಕಾರಿಗಳು ಮತ್ತು ಜಿಲ್ಲಾ ಪಂಚಾಯಿತಿ ಕಾರ್ಯನಿರ್ವಹಣಾಧಿಕಾರಿಗಳ ಜೊತೆ ವಿಕಾಸಸೌಧದಲ್ಲಿ ಗುರುವಾರ ವಿಡಿಯೊ ಸಂವಾದ ನಡೆಸಿದ ಬಳಿಕ ಮಾತನಾಡಿದ ಅವರು, ‘ಕಾರ್ಯಕ್ರಮದಲ್ಲಿ ಭಾಗವಹಿಸಲು ಕಾಂಗ್ರೆಸ್ ವರಿಷ್ಠರಾದ ಸೋನಿಯಾ ಗಾಂಧಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ, ರಾಹುಲ್ ಗಾಂಧಿ ಅವರಿಗೆ ಆಹ್ವಾನ ನೀಡಲಾಗುವುದು’ ಎಂದರು.

‘ಎಲ್ಲ ಗ್ರಾಮ ಪಂಚಾಯಿತಿ, ನಗರಸಭೆ, ಪುರಸಭೆ ಸೇರಿ ರಾಜ್ಯದ 11 ಸಾವಿರ ಕಡೆ ಏಕಕಾಲಕ್ಕೆ ಯೋಜನೆಗೆ ಚಾಲನೆ ನೀಡಲು ಉದ್ದೇಶಿಸಲಾಗಿದೆ. ಪ್ರತಿ ಪಂಚಾಯಿತಿಗೆ ಒಬ್ಬರಂತೆ ನೋಡೆಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದ್ದು, ಪಕ್ಷಾತೀತವಾಗಿ ಕಾರ್ಯಕ್ರಮ ಆಯೋಜಿಸಲಾಗುವುದು’ ಎಂದು ಸಚಿವರು ವಿವರಿಸಿದರು.

ಚಿಕನ್ ತಿಂದು 29 ವಿದ್ಯಾರ್ಥಿನಿಯರು ಅಸ್ವಸ್ಥ



ಹೊಸಪೇಟೆ (ವಿಜಯನಗರ): ಇಲ್ಲಿನ ಜಂಬುನಾಥ ರಸ್ತೆಯ ಪರಿಶಿಷ್ಟ ಪಂಗಡದವರ ಮೆಟ್ರಿಕ್ ನಂತರದ ವಿದ್ಯಾರ್ಥಿನಿಯರ ಹಾಸ್ಟೆಲ್‌ನಲ್ಲಿ ಬುಧವಾರ ರಾತ್ರಿ ಚಿಕನ್ ತಿಂದ 29 ವಿದ್ಯಾರ್ಥಿನಿಯರು ಅಸ್ವಸ್ಥರಾಗಿದ್ದು, ಇಲ್ಲಿನ ಸರ್ಕಾರಿ ಆಸ್ಪತ್ರೆಯಲ್ಲಿ ದಾಖಲಾಗಿದ್ದಾರೆ. ಎಲ್ಲರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ.

‘ಹಾಸ್ಟೆಲ್‌ನಲ್ಲಿ ಎಂದಿನಂತೆ ಸಸ್ಯಾಹಾರಿ ಮತ್ತು ಮಾಂಸಾಹಾರಿ ಊಟ ಬಡಿಸಲಾಗಿತ್ತು. ಚಿಕನ್ ತಿಂದ 28 ವಿದ್ಯಾರ್ಥಿನಿಯರು ಮಧ್ಯರಾತ್ರಿ 2ರ ವೇಳೆಗೆ ವಾಂತಿ, ಭೇದಿ, ಹೊಟ್ಟೆನೋವಿನಿಂದ ಬಳಲಿದರು. ತಕ್ಷಣ ಅವರನ್ನು ಆಸ್ಪತ್ರೆಗೆ ದಾಖಲಿಸಲಾಯಿತು. ಗುರುವಾರ ಬೆಳಿಗ್ಗೆ ಮತ್ತೆ ಆರು ಮಂದಿ ಅನಾರೋಗ್ಯಗೊಂಡರು. ಅವರಲ್ಲಿ ಒಬ್ಬರು ಆಸ್ಪತ್ರೆಗೆ ದಾಖಲಾಗಿದ್ದು, ಉಳಿದವರು ಚಿಕಿತ್ಸೆ ಪಡೆದು ಮನೆಗೆ ಮರಳಿದ್ದಾರೆ’ ಎಂದು ಜಿಲ್ಲಾ ಆರೋಗ್ಯ ಅಧಿಕಾರಿ ಡಾ.ಸಲೀಂ ತಿಳಿಸಿದರು.

ಅನಧಿಕೃತ ಶಾಲೆ ಮುಚ್ಚಲು ಆ.16ರ ಗಡುವು

ಬೆಂಗಳೂರು: ರಾಜ್ಯದಲ್ಲಿನ ಅನಧಿಕೃತ ಶಾಲೆಗಳನ್ನು ಆ.16ರ ಒಳಗೆ ಕಡ್ಡಾಯವಾಗಿ ಮುಚ್ಚಿಸಬೇಕು ಎಂದು ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಇಲಾಖೆ ಆಯುಕ್ತೆ ಬಿ.ಬಿ.ಕಾವೇರಿ ಇಲಾಖೆಯ ಜಿಲ್ಲಾ ಉಪ ನಿರ್ದೇಶಕರಿಗೆ ಸೂಚಿಸಿದ್ದಾರೆ.

ನೋಂದಣಿ ಇಲ್ಲದೆ ಶಾಲೆಗಳನ್ನು ನಡೆಸುವುದು, ಅನುಮತಿ ಪಡೆದ ಹಂತಕ್ಕಿಂತ ಉನ್ನತ ತರಗತಿಗಳಿಗೆ ಮಕ್ಕಳನ್ನು ದಾಖಲಿಸಿಕೊಳ್ಳುವುದು. ಹೆಚ್ಚುವರಿ ತರಗತಿಗಳನ್ನು ನಡೆಸುವುದು. ಕೇಂದ್ರ ಪಠ್ಯಕ್ರಮಕ್ಕೆ ಸಂಯೋಜಿಸಿದ ನಂತರವೂ ರಾಜ್ಯ ಪಠ್ಯಕ್ರಮದಲ್ಲಿ ಬೋಧಿಸುವುದು, ರಾಜ್ಯ ಪಠ್ಯಕ್ರಮಕ್ಕೆ ಅನುಮತಿ ಪಡೆದು ಇತರೆ ಪಠ್ಯಕ್ರಮ ಅನುಸರಿಸುವ ಶಾಲೆಗಳು, ಇಲಾಖೆಯ ಪೂರ್ವಾನುಮತಿ ಪಡೆಯದೇ ಶಾಲೆಗಳನ್ನು ಸ್ಥಳಾಂತರಿಸುವುದು ನಿಯಮ ಬಾಹಿರ. ಇವು ಅನಧಿಕೃತ ಶಾಲೆಗಳಾಗಿದ್ದು, ಅವುಗಳನ್ನು ತಕ್ಷಣ ಗುರುತಿಸಿ, ಬಾಗಿಲು ಮುಚ್ಚಿಸಬೇಕು ಎಂದು ಜ್ಞಾಪನಾ ಪತ್ರದಲ್ಲಿ ವಿವರಿಸಿದ್ದಾರೆ.

ಅನಧಿಕೃತ ಶಾಲೆಗಳ ಪಟ್ಟಿ ತಯಾರಿಸಬೇಕು. ತೆಗೆದುಕೊಂಡ ಕ್ರಮಗಳ ಸಹಿತ ವರದಿಯನ್ನು ಆ.16ರ ಒಳಗೆ ಇಲಾಖೆಗೆ ಸಲ್ಲಿಸಬೇಕು. ಇಲ್ಲದಿದ್ದರೆ ಕರ್ತವ್ಯ ಲೋಪವೆಂದು ಪರಿಗಣಿಸಿ ಕ್ರಮ ಜರುಗಿಸಲಾಗುವುದು ಎಂದಿದ್ದಾರೆ.

ಬಾಕಿಗೆ ಲಂಚ: ವಿವರಣೆ ಪಡೆದ ರಾಜ್ಯಪಾಲ

‘ಬಿಲ್ ಪಾವತಿಗಿರುವ ಅಡೆ–ತಡೆಗಳು ಯಾವವು’ ಪ್ರಶ್ನೆಗೆ ಉತ್ತರ ನೀಡದ ಬಿಬಿಎಂಪಿ ಆಯುಕ್ತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಬಿಲ್‌ಗಳ ಬಾಕಿ ಮೊತ್ತ ಪಾವತಿಸಲು ಶೇ 15ರಷ್ಟು ಕಮಿಷನ್ ನೀಡಬೇಕಿದೆ’ ಎಂಬ ಬಿಬಿಎಂಪಿ ಗುತ್ತಿಗೆದಾರರ ದೂರನ್ನು ಗಂಭೀರವಾಗಿ ಪರಿಗಣಿಸಿರುವ ರಾಜ್ಯಪಾಲ ಥಾವರಚಂದ್ ಗೆಹಲೋತ್ ಅವರು, ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರನ್ನು ಕರೆಯಿಸಿಕೊಂಡು ವಿವರಣೆ ಪಡೆದಿದ್ದಾರೆ.

ರಾಜ್ಯಪಾಲರನ್ನು ಇದೇ 8ರಂದು ಭೇಟಿಯಾಗಿದ್ದ ಗುತ್ತಿಗೆದಾರರ ಸಂಘದ ನಿಯೋಗ, ಬಾಕಿ ಮೊತ್ತ ಪಾವತಿಗೆ ವಿಳಂಬವಾಗುತ್ತಿದೆ ಎಂದು ದೂರಿತ್ತಿದ್ದರು.

ತುಷಾರ್ ಗಿರಿನಾಥ್ ಅವರನ್ನು ಗುರುವಾರ ಕರೆಯಿಸಿಕೊಂಡಿದ್ದ ರಾಜ್ಯಪಾಲರು, ವಿಳಂಬಕ್ಕೆ ಕಾರಣವೇನು ಎಂದು ಕೇಳಿದ್ದಾರೆ. ಅದಕ್ಕೆ, ತುಷಾರ್ ನಿಖರ ಮಾಹಿತಿ ನೀಡಿಲ್ಲ ಎಂದು ಗೊತ್ತಾಗಿದೆ.

‘ಬಿಲ್ ಪಾವತಿ ವಿಳಂಬವಾಗುತ್ತಿದೆ. ಅಧಿಕಾರಿಗಳು ಹಣ ಬಿಡುಗಡೆ ಮಾಡುತ್ತಿಲ್ಲ. ದಯವಿಟ್ಟು ತಾವು ಸರ್ಕಾರ, ಅಧಿಕಾರಿಗಳಿಗೆ ಸೂಚನೆ ನೀಡಬೇಕು. ಇಲ್ಲದಿದ್ದರೆ ನಮಗೆ ದಯಾಮರಣ ಕೊಡಿಸಿ’ ಎಂದು ಗುತ್ತಿಗೆದಾರರು ರಾಜ್ಯಪಾಲರಲ್ಲಿ ಮನವಿ ಮಾಡಿದ್ದರು. ‘ಶೇ 15ರಷ್ಟು ಕಮಿಷನ್ ನೀಡಿದರೆ ಹಣ ಬಿಡುಗಡೆ ಮಾಡಲಾಗುವುದು ಎಂದು ಕೆಲವರು ಭರವಸೆ ನೀಡುತ್ತಿದ್ದಾರೆ’ ಎಂದೂ ಕೆಲವರು ಅಹವಾಲು ತೋಡಿಕೊಂಡಿದ್ದರು.

ಈ ಎಲ್ಲ ವಿಷಯಗಳ ಬಗ್ಗೆ ಅಧಿಕಾರಿಗಳಿಂದ ಇನ್ನಷ್ಟು ಮಾಹಿತಿ ಪಡೆದುಕೊಂಡಿದ್ದ ರಾಜ್ಯಪಾಲರು, ‘ಪೂರ್ಣಗೊಂಡ ಕಾಮಗಾರಿಗಳ ಬಿಲ್ ಪಾವತಿಗೆ ಸರ್ಕಾರವೇ ಸೂಚಿಸಿದ್ದರೂ, ಹಣ ಬಿಡುಗಡೆ ಏಕೆ ಆಗಿಲ್ಲ. ಹಣ ಬಿಡುಗಡೆ ಮಾಡದಿರಲು ಸರ್ಕಾರ ಅಥವಾ ಸಚಿವರ ಸೂಚನೆಯೇನಾದರೂ ಇದೆಯೇ’ ಎಂದೂ ಆಯುಕ್ತರನ್ನು ಪ್ರಶ್ನಿಸಿದ್ದಾರೆ.

‘ಪ್ರಶ್ನೆಗಳಿಗೆ ಸಮರ್ಪಕ ಉತ್ತರ ನೀಡದ ತುಷಾರ್, ಸಾಕಷ್ಟು ಬಾರಿ ಮೌನಕ್ಕೆ ಶರಣಾಗಿದ್ದರು’ ಎಂದು ಮೂಲಗಳು ಹೇಳಿವೆ.

‘ನಿಯಮಾನುಸಾರ ಗುತ್ತಿಗೆದಾರರಿಗೆ ಹಣ ಪಾವತಿ ಮಾಡಲು ಶೀಘ್ರ ಕ್ರಮ ಕೈಗೊಳ್ಳಬೇಕು ಅಥವಾ ಬಿಡುಗಡೆಗೆ ಯಾವುದಾದರೂ ಅಡ್ಡಿ ಇದ್ದರೆ ಅದನ್ನು ಲಿಖಿತವಾಗಿ ನೀಡಬೇಕು ಎಂದು ರಾಜ್ಯಪಾಲರು ಆಯುಕ್ತರಿಗೆ ತಾಕೀತು ಮಾಡಿದ್ದಾರೆ’ ಎಂದಿವೆ.

ರಾಜ್ಯಪಾಲರನ್ನು ಭೇಟಿ ಮಾಡುವ ಮುನ್ನ ತುಷಾರ್ ಗಿರಿನಾಥ್ ಅವರು ಬಿಬಿಎಂಪಿಯ ಎಲ್ಲ ವಿಶೇಷ ಆಯುಕ್ತರು, ಪ್ರಧಾನ ಎಂಜಿನಿಯರ್ ಹಾಗೂ ವಿಭಾಗಗಳ ಮುಖ್ಯಸ್ಥರೊಂದಿಗೆ ಸಭೆ ನಡೆಸಿದ್ದರು.

ಜನಪ್ರತಿನಿಧಿಗಳಿಗೆ ಮನವಿ: ಗುತ್ತಿಗೆದಾರರ ಸಂಘದ ಸದಸ್ಯರು ಬಿಬಿಎಂಪಿ ವ್ಯಾಪ್ತಿಯ 28 ವಿಧಾನಸಭೆ ಕ್ಷೇತ್ರದ ಶಾಸಕರು ಹಾಗೂ ಜನಪ್ರತಿನಿಧಿಗಳಿಗೆ ಮನವಿ ನೀಡುವ ಅಭಿಯಾನ ಮುಂದುವರಿಸಿದ್ದಾರೆ.

ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ, ನಗರದ ಶಾಸಕರಾದ ಆರ್. ಅಶೋಕ, ಬೈರತಿ ಬಸವರಾಜ್, ಎಸ್. ರಘು, ಸಿ.ಕೆ. ರಾಮಮೂರ್ತಿ, ಉದಯ್ ಗರುಡಾಚಾರ್ ಸೇರಿದಂತೆ ಕಾಂಗ್ರೆಸ್, ಬಿಜೆಪಿ ಮುಖಂಡರಿಗೆ ಮನವಿ ಸಲ್ಲಿಸಲಾಗಿದೆ ಎಂದು ಸಂಘದ ಅಧ್ಯಕ್ಷ ಕೆ.ಟಿ. ಮಂಜುನಾಥ್ ತಿಳಿಸಿದರು.

> ಎಲ್ಲ ಇಲಾಖೆಗಳಲ್ಲೂ ಹಿಂದಿನ ಸರ್ಕಾರದ ಅವಧಿ ಕೆಲಸಗಳಿಗೆ ಈಗ ಲಂಚ ಕೇಳುತ್ತಿದ್ದಾರೆ ಎಂದು ಗುತ್ತಿಗೆದಾರರು ಆರೋಪಿಸಿದ್ದಾರೆ. ಮುಖ್ಯಮಂತ್ರಿ ಮೌನ ವಹಿಸಿದ್ದಾರೆ
> **ಬಸವರಾಜ ಬೊಮ್ಮಾಯಿ,** ಬಿಜೆಪಿ ಶಾಸಕ

ಕೆಲಸ ಆಗದೇ ಬಿಲ್ ಪಾವತಿ ಹೇಗೆ ಸಾಧ್ಯ: ಎಚ್‌ಕೆಪಿ ಪ್ರಶ್ನೆ

ಬಿಬಿಎಂಪಿ ವ್ಯಾಪ್ತಿಯಲ್ಲಿ ಕೆಲಸಗಳೇ ಆಗದೇ ಬಿಲ್‌ಪಾವತಿ ಮಾಡಲು ಹೇಗೆ ಸಾಧ್ಯ? ಸರ್ಕಾರದ ಗ್ಯಾರಂಟಿ ಯೋಜನೆಗಳು ಯಶಸ್ವಿಯಾಗಿ ಜಾರಿ ಆಗುತ್ತಿರುವುದರಿಂದ, ಅದನ್ನು ಸಹಿಸದೇ ಸರ್ಕಾರದ ವಿರುದ್ಧ ಆರೋಪ ಮಾಡುತ್ತಿದ್ದಾರೆ ಎಂದು ಕಾನೂನು ಸಚಿವ ಎಚ್.ಕೆ.ಪಾಟೀಲ ಸುದ್ದಿಗಾರರ ಪ್ರಶ್ನೆಗೆ ಪ್ರತಿಕ್ರಿಯಿಸಿದರು.

ಕಾಮಗಾರಿಗಳ ಬಗ್ಗೆ ಈಗಾಗಲೇ ತನಿಖೆ ಆರಂಭವಾಗಿದೆ. ಇದರಿಂದ ಗುತ್ತಿಗೆದಾರರು ಆರೋಪಗಳನ್ನು ಮಾಡುತ್ತಿದ್ದಾರೆ. ಈ ಬಗ್ಗೆ ಸಂಬಂಧಪಟ್ಟ ಸಚಿವರು ಈಗಾಗಲೇ ಉತ್ತರ ನೀಡಿದ್ದಾರೆ. ಎಲ್ಲಿ ಕೆಲಸ ಆಗಿಲ್ಲವೋ ಅಲ್ಲಿ ಪಾವತಿಯೂ ಆಗಿಲ್ಲ ಎಂದು ಹೇಳಿದರು.

ರಾಜ್ಯಪಾಲರಿಗೆ ಬರೆದ ಪತ್ರ ನಕಲಿ ಎಂಬುದು ಈಗಾಗಲೇ ಸಾಬೀತಾಗಿದೆ. ಅದರಲ್ಲಿ ಸತ್ಯಾಸತ್ಯತೆ ಇಲ್ಲ. ಸರ್ಕಾರಕ್ಕೆ ಅನವಶ್ಯಕವಾಗಿ ಕಳಂಕ ತರುವ ಪ್ರಯತ್ನ ನಡೆದಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಕೆಂಪಣ್ಣಗೆ ನ್ಯಾಯ ಒದಗಿಸಲು ತನಿಖೆ: ಡಿಸಿಎಂ

‘ಕಾಮಗಾರಿಗಳ ಟೆಂಡರ್ ವಿಚಾರದಲ್ಲಿ ಭ್ರಷ್ಟಾಚಾರದ ಬಗ್ಗೆ ಗುತ್ತಿಗೆದಾರರ ಸಂಘದ ಅಧ್ಯಕ್ಷ ಕೆಂಪಣ್ಣ ಅವರು ದೂರು ನೀಡಿದ್ದರು. ಅವರಿಗೆ ನ್ಯಾಯ ಒದಗಿಸಲು ಕಾಮಗಾರಿಗಳ ತನಿಖೆ ಮಾಡಲು ಹೇಳಿದ್ದೇವೆ’ ಎಂದು ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಿಳಿಸಿದರು.

‘ಸರಿಯಾಗಿ ಕೆಲಸ ಮಾಡಿರುವ ಗುತ್ತಿಗೆದಾರರಿಗೆ ನ್ಯಾಯ ಒದಗಿಸಲು ಸರ್ಕಾರ ಬದ್ಧವಾಗಿದೆ. ಕೆಲವು ಗುತ್ತಿಗೆದಾರರನ್ನು ಮಾಧ್ಯಮಗಳ ಮುಂದೆ ಯಾರು ಮಾತನಾಡಿಸುತ್ತಿದ್ದಾರೆ, ದೆಹಲಿಗೆ ಯಾರು ಕರೆಯುತ್ತಿದ್ದಾರೆ, ಯಾವ ನಾಯಕರ ಮನೆಗೆ ಯಾರು ಕಳಿಸುತ್ತಿದ್ದಾರೆ ಎಂಬ ವಿಚಾರ ನನಗೆ ಗೊತ್ತಿದೆ’ ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆ ಆರ್ ಎಸ್*	124.80	113.00	4,938	8,053
ಹಾರಂಗಿ	2,859	2,858.54	1,255	1,891
ಕಬಿನಿ	2284.00	2,281.99	4,688	5,875
ಹೇಮಾವತಿ	2,922	2,916.20	2,397	1,830
ಲಿಂಗನಮಕ್ಕಿ	1,819	1,790.70	7,917	6,135
ಸೂಪಾ (ಮೀ)	564	546.80	7,940	5,082
ಮಾಣಿ	595	581.46	693	596
ತುಂಗಭದ್ರಾ	1,633	1,628.63	19,682	9,442
ಮಲಪ್ರಭಾ	2079.50	2,066.60	1,317	194
ಘಟಪ್ರಭಾ	2175	2,164.70	5,427	1,976
ಭದ್ರಾ	186	166.90	4,118	194
ಆಲಮಟ್ಟಿ (ಮೀ)	519.60	519.57	29,062	25,731
ನಾರಾಯಣಪುರ (ಮೀ)	492.25	492.13	25,000	6,000

* ನೆಲಮಟ್ಟದಿಂದ



ಭತ್ತ ನಾಟಿ ಬೆಳಗಾವಿ ತಾಲ್ಲೂಕಿನ ಕಣಬರ್ಗಿಯಲ್ಲಿ ಮಹೇಶ ಫೌಂಡೇಷನ್‌ನ ಉತ್ಕರ್ಷ ಕಲಿಕಾ ಕೇಂದ್ರದ ವಿದ್ಯಾರ್ಥಿಗಳು ಗುರುವಾರ ಭತ್ತದ ಗದ್ದೆಗೆ ಭೇಟಿ ನೀಡಿ ನಲಿದರು. ಭತ್ತ ನಾಟಿ ಮಾಡಿ ಖುಷಿಪಟ್ಟರು -ಪ್ರಜಾವಾಣಿ ಚಿತ್ರ

ಪರಿಷತ್ ನಾಮನಿರ್ದೇಶನ: ‘ಕೈ’ಗೆ ತಲೆನೋವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನ ಪರಿಷತ್‌ಗೆ ಎಂ.ಆರ್. ಸೀತಾರಾಮ್, ಮನ್ಸೂರ್ ಅಲಿ ಖಾನ್ ಮತ್ತು ಎಚ್.ಪಿ. ಸುಧಾಮ್ ದಾಸ್ ಅವರನ್ನು ನಾಮನಿರ್ದೇಶನ ಮಾಡಲು ಮುಂದಾದ ಬೆನ್ನಲ್ಲೆ, ಮನ್ಸೂರ್ ಬದಲು ಉಮಾಶ್ರೀ ಹೆಸರು ಮತ್ತು ಸುಧಾಮ್ ದಾಸ್ ನೇಮಕಕ್ಕೆ ವಿರೋಧ ವ್ಯಕ್ತವಾಗಿರುವುದು ಕಾಂಗ್ರೆಸ್ ನಾಯಕರಿಗೆ ತಲೆನೋವಾಗಿ ಪರಿಣಮಿಸಿದೆ.

ಪರಿಷತ್‌ಗೆ ಮೂವರ ನಾಮನಿರ್ದೇಶನ ವಿಚಾರ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲೂ ಚರ್ಚೆಗೆ ಬಂದಿದೆ. ಆದರೆ, ಅಂತಿಮ ತೀರ್ಮಾನ ತೆಗೆದುಕೊಂಡಿಲ್ಲ ಎಂದು ಮೂಲಗಳು ತಿಳಿಸಿವೆ.

ಹಿಂದುಳಿದ ವರ್ಗಗಳ ಕೋಟಾದಿಂದ ಎಂ.ಆರ್. ಸೀತಾರಾಮ್, ಅಲ್ಪಸಂಖ್ಯಾತ ಕೋಟಾದಿಂದ ರಾಜ್ಯಸಭೆಯ ಮಾಜಿ ಉಪ ಸಭಾಪತಿ ರೆಹಮಾನ್ ಖಾನ್ ಮಗ ಮನ್ಸೂರ್ ಅಲಿ ಖಾನ್, ಪರಿಶಿಷ್ಟ ಜಾತಿ ಎಡಗೈ ಬಣದಿಂದ ಸುಧಾಮ್ ದಾಸ್ ಹೆಸರನ್ನು ಕಾಂಗ್ರೆಸ್ ನಾಯಕರು ಈ ಹಿಂದೆಯೇ ಬಹುತೇಕ ಅಂತಿಮಗೊಳಿಸಿದ್ದರು. ಆದರೆ, ಸುಧಾಮ್ ದಾಸ್ ಅವರನ್ನು ನಾಮನಿರ್ದೇಶನ ಮಾಡುವ ಪ್ರಸ್ತಾವಕ್ಕೆ ಕಾಂಗ್ರೆಸ್‌ನ ಪರಿಶಿಷ್ಟ ಜಾತಿಯ ಎಡಗೈ ಬಣದ ಪ್ರಮುಖ ನಾಯಕರು ಆಕ್ಷೇಪ ವ್ಯಕ್ತಪಡಿಸಿದ್ದರಿಂದ, ಸರ್ಕಾರ ನಾಮನಿರ್ದೇಶನ ಪ್ರಕ್ರಿಯೆಯನ್ನು ಮುಂದುವರಿಸಿರಲಿಲ್ಲ.

‘ಪರಿಶಿಷ್ಟ ಸಮುದಾಯಕ್ಕೆ ಮತ್ತು ಕಾಂಗ್ರೆಸ್ ಪಕ್ಷಕ್ಕೆ ಸುಧಾಮ್ ದಾಸ್ ಹೇಳಿಕೊಳ್ಳುವಂಥ ಯಾವುದೇ ಕೊಡುಗೆ ನೀಡಿಲ್ಲ. ಹೀಗಾಗಿ ಅವರನ್ನು ನೇಮಕ ಮಾಡಬಾರದು’ ಎಂದು ಎಡಗೈ ಸಮುದಾಯದ ಸಚಿವರು, ಶಾಸಕರು, ಮಾಜಿ ಶಾಸಕರು ವಿರೋಧ ವ್ಯಕ್ತಪಡಿಸಿದ್ದಾರೆ. ಸಚಿವರಾದ ಕೆ.ಎಚ್. ಮುನಿಯಪ್ಪ, ಆರ್.ಬಿ. ತಿಮ್ಮಾಪುರ, ಕೆಪಿಸಿಸಿ ಕಾರ್ಯಾಧ್ಯಕ್ಷ ಚಂದ್ರಪ್ಪ, ಮಾಜಿ ಸಚಿವ ಎಚ್. ಆಂಜನೇಯ ಅವರು ಮುಖ್ಯಮಂತ್ರಿ ಸಿದ್ದರಾಮಯ್ಯ ಮತ್ತು ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ತಮ್ಮ ಅಭಿಪ್ರಾಯ ನೀಡಿದ್ದು, ಅವರೆಲ್ಲರೂ ಆಕ್ಷೇಪ ವ್ಯಕ್ತಪಡಿಸಿದ್ದಾರೆ’ ಎಂದೂ ಗೊತ್ತಾಗಿದೆ.

ಈ ಮಧ್ಯೆ, ಮನ್ಸೂರ್ ಅಲಿ ಖಾನ್ ಬದಲು ನಟಿ ಉಮಾಶ್ರೀ ಅವರನ್ನು ನಾಮನಿರ್ದೇಶನ ಮಾಡಲು ಮುಖ್ಯಮಂತ್ರಿ ಸಿದ್ದರಾಮಯ್ಯ ಒಲವು ಹೊಂದಿರುವುದಕ್ಕೆ ಕಾಂಗ್ರೆಸ್ಸಿನ ಮುಸ್ಲಿಂ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ. ಕಳೆದ ಚುನಾವಣೆಯಲ್ಲಿ ಇಡೀ ಸಮುದಾಯ ಕಾಂಗ್ರೆಸ್ ಬೆನ್ನಿಗೆ ನಿಂತಿದೆ. ಹೀಗಾಗಿ, ಪರಿಷತ್‌ಗೆ ಮೂವರ ನಾಮ ನಿರ್ದೇಶನದ ಸಂದರ್ಭದಲ್ಲಿ ಒಂದು ಸ್ಥಾನವನ್ನು ಮುಸ್ಲಿಂ ಸಮುದಾಯವರಿಗೆ ನೀಡಬೇಕು ಎಂದು ಆ ಸಮುದಾಯ ನಾಯಕರು ಪಟ್ಟು ಹಿಡಿದಿದ್ದಾರೆ.

ಆದರೆ, ಶಿಕ್ಷಣ, ಸಹಕಾರ, ಸಂಸ್ಕೃತಿ ಮತ್ತು ಸಾಮಾಜಿಕ ಸೇವೆಯ ಕ್ಷೇತ್ರದ ಪ್ರತಿನಿಧಿಗಳಾಗಿ ಸೀತಾರಾಮ್, ಮನ್ಸೂರ್ ಅಲಿ ಖಾನ್ ಮತ್ತು ಸುಧಾಮ್ ದಾಸ್ ಅವರನ್ನು ರಾಜ್ಯ ಸರ್ಕಾರ ನಾಮನಿರ್ದೇಶನ ಮಾಡಲು ಶಿಫಾರಸು ಮಾಡಿದರೂ, ಅವರ ವಿರುದ್ಧ ಹಲವು ಆರೋಪಗಳು ಇರುವುದರಿಂದ ಪರಿಗಣಿಸಬಾರದು ಎಂದು ಕರ್ನಾಟಕ ರಾಜ್ಯ ಮುಸ್ಲಿಂ ಜನಜಾಗೃತಿ ವೇದಿಕೆ ಮತ್ತು ‘ನ್ಯಾಯಮಿತ್ರ’ ಸಂಘಟನೆಯ ಕಾರ್ಯದರ್ಶಿ ರಾಘವಾಚಾರ್ ಶಾಸ್ತ್ರಿ ಅವರು ರಾಜ್ಯಪಾಲರಿಗೆ ಪ್ರತ್ಯೇಕ ದೂರು ನೀಡಿದ್ದಾರೆ. ಕೆಲವು ದಾಖಲೆಗಳ ಸಹಿತ ಸಲ್ಲಿಕೆಯಾಗಿರುವ ಈ ದೂರನ್ನು ಮುಖ್ಯ ಕಾರ್ಯದರ್ಶಿಗೆ ಕಳುಹಿಸಿರುವ ರಾಜಭವನ, ಪರಿಶೀಲಿಸಿ ನಿಯಮಗಳನ್ವಯ ಕ್ರಮ ತೆಗೆದುಕೊಳ್ಳುವಂತೆ ಮುಖ್ಯ ಕಾರ್ಯದರ್ಶಿಗೆ ಸೂಚಿಸಿದೆ.

‘ವಿರೋಧ ಪಕ್ಷಗಳ ಬಗ್ಗೆ ಮೃದು ಧೋರಣೆ ಬೇಡ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರತಿನಿತ್ಯ ಒಂದಲ್ಲ ಒಂದು ವಿಷಯವನ್ನು ಮುಂದಿಟ್ಟುಕೊಂಡು ವಿರೋಧ ಪಕ್ಷಗಳು ಸರ್ಕಾರಕ್ಕೆ ಮಸಿ ಬಳಿಯಲು ಪ್ರಯತ್ನಿಸುತ್ತಿವೆ. ಅವುಗಳ ವಿರುದ್ಧ ಮೃದು ಧೋರಣೆ ತಾಳದೇ ಆಕ್ರಮಣಕಾರಿಯಾಗಿರಬೇಕು ಎಂಬ ಒಮ್ಮತದ ಅಭಿಪ್ರಾಯ ಗುರುವಾರ ನಡೆದ ಸಚಿವ ಸಂಪುಟ ಸಭೆಯಲ್ಲಿ ವ್ಯಕ್ತವಾಗಿದೆ.

ಸಚಿವ ಎನ್.ಚಲುವರಾಯಸ್ವಾಮಿ ಅವರ ವಿರುದ್ಧ ರಾಜ್ಯಪಾಲರಿಗೆ ಬರೆದ ‘ನಕಲಿ’ ಪತ್ರ, ಗುತ್ತಿಗೆದಾರರ ದೂರುಗಳ ಕುರಿತೂ ಅನೌಪಚಾರಿಕವಾಗಿ ಸಭೆಯಲ್ಲಿ ಚರ್ಚೆ ನಡೆಯಿತು ಎಂದು ಗೊತ್ತಾಗಿದೆ.

‘ಎಲ್ಲರೂ ಎಚ್ಚರಿಕೆಯಿಂದ ಕೆಲಸ ಮಾಡಬೇಕು. ಯಾವುದೇ ಆರೋಪಗಳಿಗೆ ಅವಕಾಶ ನೀಡದಂತೆ ಕಾರ್ಯನಿರ್ವಹಿಸಬೇಕು. ಎಚ್.ಡಿ.ಕುಮಾರಸ್ವಾಮಿ ಅವರ ಆರೋಪಗಳಿಗೆ ಕುಗ್ಗದೇ ದಿಟ್ಟ ಉತ್ತರವನ್ನು ನೀಡಬೇಕು. ಸೂಕ್ತ ಉತ್ತರ ನೀಡದೇ ಸುಮ್ಮನೇ ಇದ್ದರೆ ನಮ್ಮ ಬಗ್ಗೆ ಸಾರ್ವಜನಿಕರಲ್ಲಿ ತಪ್ಪು ಅಭಿಪ್ರಾಯ ಮೂಡುತ್ತದೆ’ ಎಂದು ಹಿರಿಯ ಸಚಿವರು ಸಲಹೆ ನೀಡಿದರು.

ಸಚಿವ ಚಲುವರಾಯಸ್ವಾಮಿ ಅವರನ್ನು ಗುರಿಯಾಗಿಸಿ ಆರೋಪಗಳನ್ನು ಮಾಡಲಾಗಿದೆ. ಕೆಎಸ್‌ಆರ್‌ಟಿಸಿ ಚಾಲಕನ ಆತ್ಮಹತ್ಯೆ ಯತ್ನದ ವಿಚಾರದಲ್ಲಿ ರಾಜಕೀಯ ಮಾಡಿದರು. ಆ ಬಳಿಕ ಬಿಬಿಎಂಪಿ ಗುತ್ತಿಗೆದಾರರನ್ನು ಎತ್ತಿಕಟ್ಟುವ ಕೆಲಸವನ್ನೂ ಮಾಡುತ್ತಿದ್ದಾರೆ. ಗುತ್ತಿಗೆದಾರರ ಹಿಂದೆ ಬಿಜೆಪಿ ನಾಯಕರ ಚಿತಾವಣೆ ಇದೆ ಎಂದು ಸಚಿವರೊಬ್ಬರು ಹೇಳಿದರು.

ಇದೇ 15ರ ಬಳಿಕ ವಿಪಕ್ಷದ ನಾಯಕರ ಆಯ್ಕೆ: ಬೊಮ್ಮಾಯಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ, ವಿಧಾನ ಪರಿಷತ್‌ನಲ್ಲಿ ವಿರೋಧ ಪಕ್ಷದ ನಾಯಕ ಸ್ಥಾನಗಳ ಆಯ್ಕೆ ಕುರಿತು ಇದೇ 15ರ ನಂತರ ನಿರ್ಧಾರ ಕೈಗೊಳ್ಳುವುದಾಗಿ ಪಕ್ಷದ ವರಿಷ್ಠರು ತಿಳಿಸಿದ್ದಾರೆ ಎಂದು ಬಿಜೆಪಿ ಶಾಸಕ ಬಸವರಾಜ ಬೊಮ್ಮಾಯಿ ಹೇಳಿದರು.

ನಗರದಲ್ಲಿ ಗುರುವಾರ ಮಾತನಾಡಿದ ಅವರು, ‘ಸಂಸತ್ ಅಧಿವೇಶನದ ವೇಳೆ ಸಂಸದರನ್ನು ಭೇಟಿ ಮಾಡಲು ದೆಹಲಿಗೆ ಹೋಗಿದ್ದೆ. ಆಗ ಕೇಂದ್ರ ಗೃಹ ಸಚಿವ ಅಮಿತ್ ಶಾ, ಪಕ್ಷದ ರಾಷ್ಟ್ರೀಯ ಅಧ್ಯಕ್ಷ ಜೆ.ಪಿ.ನಡ್ಡಾ ಅವರನ್ನು ಭೇಟಿ ಮಾಡಿ ರಾಜ್ಯದ ಪ್ರಸಕ್ತ ರಾಜಕೀಯ ವಿದ್ಯಮಾನಗಳ ಕುರಿತು ಚರ್ಚಿಸಿದ್ದೇನೆ. ಆಗ ವರಿಷ್ಠರಿಂದ ಶೀಘ್ರ ಆಯ್ಕೆಯ ಭರವಸೆ ದೊರೆತಿದೆ’ ಎಂದರು.

‘ಲೋಕಸಭೆ ಚುನಾವಣೆಯ ಸಿದ್ಧತೆ, ಕಾಂಗ್ರೆಸ್ ಸರ್ಕಾರದ ಆಡಳಿತ ವೈಖರಿ, ಸರ್ಕಾರದ ಬಗ್ಗೆ ಜನರ ಅಭಿಪ್ರಾಯ, ಮುಂದಿನ ಹೋರಾಟದ ರೂಪುರೇಷೆ ಸಿದ್ಧಪಡಿಸುವ ಕುರಿತು ಚರ್ಚೆ ಮಾಡಿದ್ದೇವೆ. ರಾಜ್ಯ ಸರ್ಕಾರದ ವೈಫಲ್ಯಗಳ ವಿರುದ್ಧ ಹೋರಾಟ ಆರಂಭಿಸಲಾಗುವುದು’ ಎಂದು ಹೇಳಿದರು.

ರಾಜೀನಾಮೆ ವಾಪಸ್ ಪಡೆದ 12 ಸದಸ್ಯರು

ಸಿಂಧನೂರು: ತಾಲ್ಲೂಕಿನ ಆರ್.ಎಚ್.ನಂ. 1ರ ಗ್ರಾಮ ಪಂಚಾಯಿತಿಗೆ ಮುಸ್ಲಿಂ ಅಧ್ಯಕ್ಷರಾಗಿದ್ದಾರೆ ಎಂಬ ಕಾರಣಕ್ಕೆ ರಾಜೀನಾಮೆ ನೀಡಿದ್ದ 15 ಸದಸ್ಯರಲ್ಲಿ 12 ಸದಸ್ಯರು ಗುರುವಾರ ರಾಜೀನಾಮೆ ವಾಪಸ್ ಪಡೆದಿದ್ದಾರೆ.

ರಾಣಿ ಮಂಡಲ್, ಚಂದ್ರಿಮಾ ಸರ್ಕಾರ್, ರೇಣುಕಾ ನಾಯಕ, ವಾಸುದೇವರೆಡ್ಡಿ, ಅರ್ಜುನ್ ಗೋಲ್ದಾರ್, ಸಂಧ್ಯಾ ಮಂಡಲ್, ಮುಕ್ತ ವಿಶ್ವಾಸ್, ಸಂಧ್ಯಾ ಢಾಲಿ, ಕರಿಯಪ್ಪ, ಮಿಥಾಲಿ, ಶಿವಕುಮಾರ್, ಬಸವರಾಜ ತಮ್ಮ ರಾಜೀನಾಮೆ ವಾಪಸ್ ಪಡೆದಿರುವುದಾಗಿ ಅಧ್ಯಕ್ಷರಿಗೆ ಲಿಖಿತವಾಗಿ ತಿಳಿಸಿದ್ದಾರೆ.

‘ಪ್ರಜಾವಾಣಿ’ಯ ಆಗಸ್ಟ್ 8ರ ಸಂಚಿಕೆಯಲ್ಲಿ ಪ್ರಕಟಗೊಂಡ ಗಾಂಧಿ ಪುರಸ್ಕಾರ ಗ್ರಾಮಕ್ಕೆ ‘ಕೋಮು’ ಕಂಟಕ ವಿಶೇಷ ವರದಿ ಸಂಚಲನ ಮೂಡಿಸಿತ್ತು.

ಉಡುಪಿ: ಮುಂದುವರಿದ ತನಿಖೆ

ಪ್ರಜಾವಾಣಿ ವಾರ್ತೆ

ಉಡುಪಿ: ಇಲ್ಲಿನ ನೇತ್ರಜ್ಯೋತಿ ಪ್ಯಾರಾ ಮೆಡಿಕಲ್ ಕಾಲೇಜಿನ ಶೌಚಾಲಯದಲ್ಲಿ ನಡೆದಿದೆ ಎನ್ನಲಾದ ವಿಡಿಯೊ ಚಿತ್ರೀಕರಣ ಪ್ರಕರಣದ ತನಿಖೆ ಚುರುಕುಗೊಂಡಿದ್ದು ಸಿಐಡಿ ಎಡಿಜಿಪಿ ಮನೀಶ್ ಕರ್ಬಿಕರ್ ಗುರುವಾರ ಉಡುಪಿಗೆ ಭೇಟಿ ನೀಡಿ ಪ್ರಕರಣದ ಮಾಹಿತಿ ಪಡೆದರು.

ಪ್ರವಾಸಿ ಮಂದಿರದಲ್ಲಿ ಎಸ್‌ಪಿ ಹಾಕೆ ಅಕ್ಷಯ್ ಮಚ್ಚೀಂದ್ರ ಹಾಗೂ ಹಿರಿಯ ಪೊಲೀಸ್ ಅಧಿಕಾರಿಗಳೊಂದಿಗೆ ಸಭೆ ನಡೆಸಿದ ಎಡಿಜಿಪಿ ಪ್ರಕರಣದ ಮಾಹಿತಿ ಪಡೆದುಕೊಂಡರು. ಬಳಿಕ ಕಾಲೇಜಿಗೆ ತೆರಳಿ ಆಡಳಿತ ಮಂಡಳಿಯ ಪ್ರಮುಖರನ್ನು ವಿಚಾರಿಸಿದರು.

ಪ್ರಕರಣ ಸಿಐಡಿಗೆ ವರ್ಗಾವಣೆಯಾಗಿದ್ದು ತನಿಖೆ ಮುಂದುವರಿದಿದೆ. ಸಿಐಡಿ ಡಿವೈಎಸ್‌ಪಿ ಅಂಜುಮಾಲಾ ನಾಯಕ್ ತನಿಖಾಧಿಕಾರಿಯಾಗಿದ್ದು ಸಿಐಡಿ ಎಸ್‌ಪಿ ರಾಘವೇಂದ್ರ ಹೆಗಡೆ ಪ್ರಕರಣದ ಮೇಲ್ವಿಚಾರಣೆ ನೋಡಿಕೊಳ್ಳಲಿದ್ದಾರೆ. ಎಫ್‌ಎಸ್‌ಎಲ್ ವರದಿ ಇನ್ನೂ ಕೈಸೇರಿಲ್ಲ. ತನಿಖೆ ಪೂರ್ಣಗೊಂಡ ಬಳಿಕ ನ್ಯಾಯಾಲಯಕ್ಕೆ ವರದಿ ಸಲ್ಲಿಸಲಾಗುವುದು ಎಂದು ಮನೀಶ್ ಮಾಹಿತಿ ನೀಡಿದರು.

ಹಿಜಾಬ್ ಧರಿಸಿದ ವಿದ್ಯಾರ್ಥಿನಿಯರು

ಚಿಕ್ಕಮಗಳೂರು: ನಗರದ ಐಡಿಎಸ್‌ಜಿ ಕಾಲೇಜಿನಲ್ಲಿ ಹಿಜಾಬ್ ಧರಿಸಿ ವಿದ್ಯಾರ್ಥಿನಿಯರು ಕಾಲೇಜಿಗೆ ಹಾಜರಾಗಿದ್ದ ವಿಡಿಯೊ ವಾಟ್ಸ್‌ಆ್ಯಪ್ ಗ್ರೂಪ್‌ಗಳಲ್ಲಿ ಹರಿದಾಡುತ್ತಿದೆ.

ಕಾಲೇಜಿನ ಕಾರಿಡಾರ್‌ಗಳಲ್ಲಿ ವಿದ್ಯಾರ್ಥಿನಿಯರು ಬುರ್ಕಾ ಮತ್ತು ಹಿಜಾಬ್ ಧರಿಸಿ ಓಡಾಡುತ್ತಿರುವುದು, ತರಗತಿಯಲ್ಲಿ ಕುಳಿತಿರುವುದನ್ನು ಬೇರೆ ವಿದ್ಯಾರ್ಥಿಗಳು ಮೊಬೈಲ್ ಫೋನ್‌ನಲ್ಲಿ ವಿಡಿಯೊ ಮಾಡಿದ್ದಾರೆ. ‘ಪ್ರಥಮ ಪಿಯು ವಿದ್ಯಾರ್ಥಿನಿಯರು ಗೊತ್ತಿಲ್ಲದೆ ಹಿಜಾಬ್ ಧರಿಸಿ ಬಂದಿದ್ದು, ಅವರಿಗೆ ತಿಳಿವಳಿಕೆ ನೀಡಲಾಗಿದೆ ಎಂದು ಉಪನ್ಯಾಸಕರು ತಿಳಿಸಿದ್ದಾರೆ. ಆದರೂ ಮುನ್ನೆಚ್ಚರಿಕೆ ಕ್ರಮವಾಗಿ ಪೊಲೀಸ್ ನಿಯೋಜಿಸಲಾಗಿದೆ’ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದರು.

ಪಿಯು ಪೂರಕ ಪರೀಕ್ಷೆ: ನೋಂದಣಿಗೆ ನಾಳೆ ಕೊನೆ ದಿನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಆ.21ರಿಂದ ನಡೆಯುವ ಎರಡನೇ ಪೂರಕ ಪರೀಕ್ಷೆಗೆ ನೋಂದಣಿ ಮಾಡಿಕೊಳ್ಳಲು ಆ.12ರವರೆಗೆ ಅವಕಾಶ ಕಲ್ಪಿಸಲಾಗಿದೆ.

2023ರ ವಾರ್ಷಿಕ ಪರೀಕ್ಷೆ ಹಾಗೂ ಅದಕ್ಕೂ ಹಿಂದೆ ಅನುತ್ತೀರ್ಣರಾದ ವಿದ್ಯಾರ್ಥಿಗಳಿಗೆ ಜೂನ್‌ನಲ್ಲಿ ಪೂರಕ ಪರೀಕ್ಷೆ ನಡೆಸಲಾಗಿತ್ತು.

ಇದೇ ಮೊದಲ ಬಾರಿ ಒಂದೇ ಶೈಕ್ಷಣಿಕ ವರ್ಷದಲ್ಲಿ ಎರಡನೇ ಪೂರಕ ಪರೀಕ್ಷೆ ನಡೆಸಲು ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಳಿ ಅಧಿಸೂಚನೆ ಹೊರಡಿಸಿತ್ತು. ಅರ್ಜಿ ಸಲ್ಲಿಸಲು ಆ. 10ರವರೆಗೆ ಅವಕಾಶ ಕಲ್ಪಿಸಲಾಗಿತ್ತು. ಈಗ ಮತ್ತೆರಡು ದಿನ ವಿಸ್ತರಿಸಲಾಗಿದೆ.

ವಿದ್ಯಾರ್ಥಿಗಳು ತಾವು ಓದಿದ ಕಾಲೇಜಿಗೆ ತೆರಳಿ, ಕಾಲೇಜಿನ ಲಾಗಿನ್ ಮೂಲಕ ನೋಂದಣಿ ಮಾಡಿಕೊಳ್ಳಬೇಕು. ನಂತರ ಆನ್‌ಲೈನ್ ಮೂಲಕ ಪರೀಕ್ಷಾ ಶುಲ್ಕ ಪಾವತಿಸಬೇಕು ಎಂದು ಮಂಡಳಿ ಪ್ರಕಟಣೆ ತಿಳಿಸಿದೆ.

ಪರೀಕ್ಷೆಗಳು ಆ.21ರಿಂದ ಸೆ.2ರವರೆಗೆ ನಡೆಯಲಿವೆ. ಮಾಹಿತಿಗೆ http://kseab.karnataka.gov.in ಸಂಪರ್ಕಿಸಬಹುದು.

ಅಕ್ರಮ ಕಟ್ಟಡಕ್ಕೂ ತೆರಿಗೆ

ಒಂದನೇ ಪುಟದಿಂದ...

ಸ್ವತ್ತು ತೆರಿಗೆ ಸಂಗ್ರಹಿಸಿದ ಮಾತ್ರಕ್ಕೆ ಅಕ್ರಮ ಕಟ್ಟಡಗಳು ಸಕ್ರಮಗೊಳ್ಳುವುದಿಲ್ಲ ಅಥವಾ ಮಾಲೀಕತ್ವ ನೀಡಲಾಗುವುದಿಲ್ಲ(ಬಿಬಿಎಂಪಿಯಲ್ಲಿ ‘ಬಿ ಖಾತಾ’ ಎಂದು ಕರೆಯಲಾಗುತ್ತದೆ). ನಿಯಮ ಉಲ್ಲಂಘನೆಗೆ ಸಂಬಂಧಿಸಿದ ಕ್ರಮಗಳಿಗೆ ಅಕ್ರಮ ಕಟ್ಟಡಗಳ ಮಾಲೀಕರು ಬಾಧ್ಯಸ್ಥರಾಗಿರುತ್ತಾರೆ ಎಂದೂ ಅವರು ವಿವರಿಸಿದರು.

ಬಿಬಿಎಂಪಿಯಲ್ಲಿ ತೆರಿಗೆ ಸಂಗ್ರಹಕ್ಕೆ ಇರುವ ಅವಕಾಶವನ್ನು ರಾಜ್ಯದಾದ್ಯಂತ ಏಕರೂಪವಾಗಿ ಜಾರಿ ಮಾಡುವಂತೆ ಬೇಡಿಕೆಗಳು ಬಂದಿವೆ. ಹೀಗಾಗಿ ಅರಣ್ಯ ಮತ್ತು ಪರಿಸರ ಸಚಿವರ ಅಧ್ಯಕ್ಷತೆಯಲ್ಲಿ ಸಮಿತಿ ರಚಿಸಲಾಗುವುದು’ ಎಂದರು.

ಚಲುವರಾಯ ಸ್ವಾಮಿ ವಿರುದ್ಧದ ಲಂಚದ ಆರೋಪ ಪ್ರಕರಣ

ಕೃಷಿ ಇಲಾಖೆ ಅಧಿಕಾರಿಗಳ ಮೊಬೈಲ್ ಫೋನ್ ವಶ

ಪ್ರಜಾವಾಣಿ ವಾರ್ತೆ

ಮಂಡ್ಯ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ಅವರ ವಿರುದ್ಧ ಕೃಷಿ ಸಹಾಯಕ ನಿರ್ದೇಶಕರು ರಾಜ್ಯಪಾಲರಿಗೆ ನೀಡಿದ್ದಾರೆ ಎನ್ನಲಾದ ದೂರಿನ ಸಂಬಂಧ ತನಿಖೆ ನಡೆಸುತ್ತಿರುವ ಸಿಐಡಿ ತಂಡ, ಗುರುವಾರ ಕೃಷಿ ಇಲಾಖೆ ಕಚೇರಿಗೆ ಬಂದು 11 ಅಧಿಕಾರಿಗಳ ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆಯಿತು.

‘ಜಂಟಿ ನಿರ್ದೇಶಕರು, ಉಪ ನಿರ್ದೇಶಕರು, ಜಿಲ್ಲೆಯ 7 ತಾಲ್ಲೂಕುಗಳ ಎಲ್ಲಾ ಸಹಾಯಕ ನಿರ್ದೇಶಕರು ಹಾಗೂ ಇತರ ಅಧಿಕಾರಿಗಳ ಮೊಬೈಲ್ ಫೋನ್‌ಗಳಲ್ಲಿರುವ ಕರೆ ಮಾಹಿತಿ, ವಾಟ್ಸ್‌ಆ್ಯಪ್ ಸಂದೇಶಗಳನ್ನು ಕಲೆಹಾಕಲಾಗುತ್ತಿದೆ’ ಎಂದು ಮೂಲಗಳು ತಿಳಿಸಿವೆ.

ಮೈಸೂರು ಸರಸ್ವತಿಪುರಂ ಅಂಚೆ ಕಚೇರಿಯಿಂದ ಪತ್ರ ಪೋಸ್ಟ್ ಆಗಿದ್ದು, ಅಲ್ಲಿನ ಕೆಲವು ಅಧಿಕಾರಿಗಳನ್ನೂ ಮಂಡ್ಯಕ್ಕೆ ಕರೆಸಿ ವಿಚಾರಣೆ ನಡೆಸಲಾಗಿದೆ.

‘ಸಿಐಡಿ ತಂಡಕ್ಕೆ ಕಡತ ಹಸ್ತಾಂತರಿಸಲಾಗಿದ್ದು, ವಿಚಾರಣೆಗೆ ಸಹಕಾರ ನೀಡುತ್ತಿದ್ದೇವೆ’ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಎನ್.ಯತೀಶ್ ತಿಳಿಸಿದರು.

ಪೇಸಿಎಸ್ ಅಭಿಯಾನ

ಮಂಡ್ಯ: ಕೃಷಿ ಸಚಿವ ಎನ್.ಚಲುವರಾಯಸ್ವಾಮಿ ವಿರುದ್ಧ ಬಿಜೆಪಿ ಕಾರ್ಯಕರ್ತರು ಗುರುವಾರ ಪೇಸಿಎಸ್ (ಪೇ ಚಲುವರಾಯಸ್ವಾಮಿ) ಅಭಿಯಾನ ನಡೆಸಿದರು.

ಸಚಿವರ ಭಾವಚಿತ್ರವುಳ್ಳ ಕ್ಯೂಆರ್ ಕೋಡ್ ಸೃಷ್ಟಿಸಿ ನಗರ ಹಾಗೂ ಬೆಂಗಳೂರು–ಮೈಸೂರು ರಾಷ್ಟ್ರೀಯ ಹೆದ್ದಾರಿ ಸೇರಿದಂತೆ ವಿವಿಧೆಡೆ ಪೋಸ್ಟರ್ ಅಂಟಿಸಿದ್ದರು. ಜೆ.ಸಿ. ವೃತ್ತದಲ್ಲಿ ಪೋಸ್ಟರ್ ಹಿಡಿದು ಸಚಿವರ ವಿರುದ್ಧ ಘೋಷಣೆ ಕೂಗಿದರು.

‘ಕೋಡ್ ಸ್ಕ್ಯಾನ್ ಮಾಡಿದರೆ ಸಚಿವರ ಭ್ರಷ್ಟಾಚಾರ ಹೊರಬರುತ್ತದೆ. ವರ್ಗಾವಣೆ ಡೀಲ್‌ಗಳಿದ್ದರೆ ಪೇ ಸಿಎಸ್ ಮಾಡಿ, ಅದಕ್ಕೆ ₹ 6ರಿಂದ ₹ 8 ಲಕ್ಷ ಪಡೆಯಲಾಗುವುದು’ ಎಂದು ವ್ಯಂಗ್ಯವಾಡಿದರು.

ಈ ವೇಳೆ ಮಧ್ಯ ಪ್ರವೇಶಿಸಿದ ಪೊಲೀಸರು, ಪೋಸ್ಟರ್ ಕಿತ್ತು ಹಾಕಿ ಕಾರ್ಯಕರ್ತರನ್ನು ವಶಕ್ಕೆ ಪಡೆದು, ಬಿಡುಗಡೆ ಮಾಡಿದರು. ಬಿಜೆಪಿ ಸರ್ಕಾರದ ಅವಧಿಯಲ್ಲಿ ಕಾಂಗ್ರೆಸ್ ಮುಖಂಡರು ಮುಖ್ಯಮಂತ್ರಿ ವಿರುದ್ಧ ಪೇಸಿಎಂ ಅಭಿಯಾನ ನಡೆಸಿದ್ದರು.



ಚಲುವರಾಯಸ್ವಾಮಿ ವಿರುದ್ಧ ಸೃಷ್ಟಿಸಿರುವ ಕ್ಯೂಆರ್ ಕೋಡ್

ಅಶಿಸ್ತು: ಅಧೀರ್ ರಂಜನ್ ಅಮಾನತು

ಲೋಕಸಭೆ: ಹಕ್ಕುಬಾಧ್ಯತಾ ಸಮಿತಿಯಿಂದ ತನಿಖೆ ಬಾಕಿ • ಪ್ರಜಾಪ್ರಭುತ್ವ ವಿರೋಧಿ ಕ್ರಮ–ಕಾಂಗ್ರೆಸ್

ನವದೆಹಲಿ(ಪಿಟಿಐ): ಅವಿಶ್ವಾಸ ನಿರ್ಣಯ ಕುರಿತ ಚರ್ಚೆ ವೇಳೆ 'ಪದೇ ಪದೇ ಅಶಿಸ್ತಿನ ವರ್ತನೆ' ತೋರಿದ್ದಕ್ಕಾಗಿ ಲೋಕಸಭೆಯಲ್ಲಿ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಗುರುವಾರ ಅಮಾನತುಗೊಳಿಸಲಾಗಿದೆ.

'ಹಕ್ಕುಬಾಧ್ಯತಾ ಸಮಿತಿ ಈ ಕುರಿತು ತನಿಖಾ ವರದಿ ಸಲ್ಲಿಸುವ ವರೆಗೆ ಅಧೀರ್‌ರಂಜನ್ ಚೌಧರಿ ಅವರನ್ನು ಸದನದ ಕಾರ್ಯಕಲಾಪಗಳಿಂದ ಅಮಾನತುಗೊಳಿಸಲಾಗುವುದು' ಎಂಬ ಅಂಶವನ್ನು ಒಳಗೊಂಡಿರುವ ನಿರ್ಣಯವನ್ನು ಧ್ವನಿಮತದ ಮೂಲಕ ಅಂಗೀಕರಿಸಲಾಯಿತು.

'ತನ್ನ ಸದನ ನಾಯಕನ ವಿರುದ್ಧ ಪ್ರಜಾಪ್ರಭುತ್ವ ವಿರೋಧಿ ಹಾಗೂ ನಂಬಲಸಾಧ್ಯವಾದ ಕ್ರಮ ಕೈಗೊಳ್ಳಲಾಗಿದೆ' ಎಂದು ಕಾಂಗ್ರೆಸ್ ಆಕ್ರೋಶ ವ್ಯಕ್ತಪಡಿಸಿದೆ.

ಇದಕ್ಕೂ ಮೊದಲು, 'ಪ್ರಧಾನಿ ನರೇಂದ್ರ ಮೋದಿ ಹಾಗೂ ಸಚಿವರು ಮಾತನಾಡುತ್ತಿದ್ದ ವೇಳೆ ಪದೇಪದೇ ಕಲಾಪಕ್ಕೆ ಅಡ್ಡಿಪಡಿಸುತ್ತಿರುವ ಅಧೀರ್ ರಂಜನ್ ಚೌಧರಿ ಅವರನ್ನು ಅಮಾನತು ಮಾಡಬೇಕು' ಎಂಬ ನಿರ್ಣಯವನ್ನು ಸಂಸದೀಯ ವ್ಯವಹಾರಗಳ ಸಚಿವ ಪ್ರಲ್ಹಾದ ಜೋಶಿ ಮಂಡಿಸಿದರು.

'ಕಲಾಪಕ್ಕೆ ಅಡ್ಡಿಪಡಿಸುವುದು ಅವರಿಗೆ ಅಭ್ಯಾಸವಾಗಿ ಬಿಟ್ಟಿರುವುದು ದುರದೃಷ್ಟಕರ. ಅವರು ಈ ಸದನದಲ್ಲಿಯೇ ದೊಡ್ಡ ವಿರೋಧ ಪಕ್ಷವಾದ ಕಾಂಗ್ರೆಸ್‌ನ ನಾಯಕ. ಮೇಲಿಂದ ಮೇಲೆ ಎಚ್ಚರಿಕೆ ನೀಡಿದ್ದರೂ ಅವರು ತಮ್ಮ ವರ್ತನೆಯನ್ನು ಸುಧಾರಿಸಿಕೊಳ್ಳಲಿಲ್ಲ' ಎಂದು ಜೋಶಿ ಹೇಳಿದರು.

'ಯಾವಾಗಲೂ ಅವರು ಆಧಾರರಹಿತ ಆರೋಪಗಳನ್ನು ಮಾಡುತ್ತಾರಲ್ಲದೇ, ಸರ್ಕಾರದ ಘನತೆಯನ್ನು ಕುಗ್ಗಿಸಲು ಪ್ರಯತ್ನಿಸುತ್ತಾರೆ. ಅವರ ವಾದಗಳಲ್ಲಿ ಯಾವುದೇ ಹುರುಳು ಇರುವುದಿಲ್ಲ ಹಾಗೂ ತಮ್ಮ ತಪ್ಪಿಗೆ ಎಂದಿಗೂ ಕ್ಷಮೆ ಕೇಳುವುದಿಲ್ಲ. ಈ ದಿನ ಗೃಹ ಸಚಿವರು ಮಾತನಾಡುವ ವೇಳೆ ಅವರು ಎಂದಿನಂತೆಯೇ ವರ್ತಿಸಿದರು' ಎಂದರು.

ಈ ಕುರಿತು ಮಾತನಾಡಿದ ಲೋಕಸಭೆಯಲ್ಲಿ ಕಾಂಗ್ರೆಸ್‌ನ ಸಚೇತಕ ಮಾಣಿಕಂ ಟ್ಯಾಗೋರ್, 'ಪ್ರಧಾನಿ ವಿರುದ್ಧ ಮಾತನಾಡಿದ್ದಕ್ಕಾಗಿ ಇದೇ ಮೊದಲ ಬಾರಿಗೆ ಲೋಕಸಭೆಯಲ್ಲಿ ದೊಡ್ಡ ವಿರೋಧಪಕ್ಷವಾದ ಕಾಂಗ್ರೆಸ್‌ನ ನಾಯಕ ಅಧೀರ್ ರಂಜನ್ ಚೌಧರಿ ಅವರನ್ನು ಅಮಾನತುಗೊಳಿಸಲಾಗಿದೆ. ಇದನ್ನು ನಂಬಲು ಆಗುತ್ತಿಲ್ಲ. ಈ ಕ್ರಮ ಪ್ರಜಾಪ್ರಭುತ್ವ ವಿರೋಧಿಯಾಗಿದ್ದು, ಸರ್ವಾಧಿಕಾರ ಧೋರಣೆಯನ್ನು ಖಂಡಿಸುತ್ತೇನೆ' ಎಂದರು.

ಅಶಿಸ್ತಿನ ವರ್ತನೆ ತೋರಿದ್ದಕ್ಕಾಗಿ ಬಿಜೆಪಿ ಸಂಸದ ವೀರೇಂದ್ರ ಸಿಂಗ್ ಅವರಿಗೆ ಸ್ಪೀಕರ್ ಎಚ್ಚರಿಕೆ ನೀಡಿದರು. ನಂತರ ಅವರು ಕ್ಷಮೆ ಯಾಚಿಸಿದರು.



ಲೋಕಸಭೆಯಲ್ಲಿ ಗುರುವಾರ ಕಾಂಗ್ರೆಸ್ ನಾಯಕ ಅಧೀರ್ ರಂಜನ್ ಚೌಧರಿ ಮಾತನಾಡಿದರು –ಪಿಟಿಐ ಚಿತ್ರ

ಶಾ ವಿರುದ್ಧ ಕಾಂಗ್ರೆಸ್ ಹಕ್ಕುಚ್ಯುತಿ

ನವದೆಹಲಿ (ಪಿಟಿಐ): ಕೇಂದ್ರ ಗೃಹ ಸಚಿವ ಅಮಿತ್ ಶಾ ವಿರುದ್ಧ ಕಾಂಗ್ರೆಸ್ ಸಂಸದರು ಗುರುವಾರ ಹಕ್ಕುಚ್ಯುತಿ ನೋಟಿಸ್ ನೀಡಿದ್ದಾರೆ.

ಲೋಕಸಭೆಯಲ್ಲಿ ಪಕ್ಷದ ಸಚೇತಕ ಮಾಣಿಕಂ ಟ್ಯಾಗೋರ್ ಅವರು ಸ್ಪೀಕರ್ ಓಂ ಬಿರ್ಲಾ ಅವರಿಗೆ ಹಕ್ಕುಚ್ಯುತಿ ನೋಟಿಸ್ ಸಲ್ಲಿಸಿದ್ದು, ಈ ಕುರಿತು ಸಾಮಾಜಿಕ ಮಾಧ್ಯಮ 'ಎಕ್ಸ್'ನಲ್ಲಿ (ಟ್ವಿಟರ್) ಬರೆದುಕೊಂಡಿದ್ದಾರೆ.

ರಾಹುಲ್ ಗಾಂಧಿ ಅವರು 2008ರಲ್ಲಿ ಮಹಾರಾಷ್ಟ್ರದಲ್ಲಿ ಕೃಷಿಕ ಮಹಿಳೆ ಕಲಾವತಿ ಬಂಡೂರಕರ್ ಅವರನ್ನು ಭೇಟಿ ಮಾಡಿದ್ದರು. ಈ ಕುರಿತು ವಿವರಿಸುವಾಗ ಸಚಿವ ಶಾ ಅವರು ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಾರೆ ಎಂದು ಆರೋಪಿಸಿರುವ ಕಾಂಗ್ರೆಸ್, ಹಕ್ಕುಚ್ಯುತಿ ನೋಟಿಸ್ ನೀಡಿದೆ.

ಮಹಾರಾಷ್ಟ್ರದ ವಿದರ್ಭ ಭಾಗದಲ್ಲಿ ಕೃಷಿ ಕ್ಷೇತ್ರದಲ್ಲಿನ ಸಂಕಷ್ಟದಿಂದಾಗಿ ಕಲಾವತಿ ಅವರ ಪತಿ ಆತ್ಮಹತ್ಯೆ ಮಾಡಿಕೊಂಡಿದ್ದರು. ಅವರ ಮನೆಗೆ ಭೇಟಿ ನೀಡಿದ್ದ ರಾಹುಲ್, ಕಲಾವತಿ ಅವರನ್ನು ಭೇಟಿ ಮಾಡಿ, ಸಾಂತ್ವನ ಹೇಳಿದ್ದರು.

ಬುಧವಾರ ನಡೆದ ಚರ್ಚೆ ವೇಳೆ, ರಾಹುಲ್ ಗಾಂಧಿ ಅವರನ್ನು ರಾಜಕೀಯವಾಗಿ ಬೆಳೆಸುವ ನಿಟ್ಟಿನಲ್ಲಿ ನಡೆದ ಪ್ರಯತ್ನಗಳ ಪೈಕಿ 13 'ವೈಫಲ್ಯ'ಗಳನ್ನು ಪಟ್ಟಿ ಮಾಡಿದ್ದ ಶಾ, ಕಲಾವತಿ ಅವರನ್ನು ಭೇಟಿ ಮಾಡಿದ್ದ ಪ್ರಸಂಗವನ್ನೂ ಉಲ್ಲೇಖಿಸಿದ್ದರು.

'ಕಲಾವತಿ ಅವರಿಗೆ ಮೋದಿ ಸರ್ಕಾರ ಮನೆ ನೀಡಿತ್ತು. ವಿವಿಧ ಸರ್ಕಾರಿ ಯೋಜನೆಗಳ ಲಾಭವನ್ನೂ ಅವರಿಗೆ ನೀಡಲಾಗಿತ್ತು' ಎಂದು ಶಾ ಹೇಳಿದ್ದರು.

ಈ ವಿಷಯವಾಗಿ ಮೋದಿ ಸರ್ಕಾರ ಸುಳ್ಳು ಹೇಳುತ್ತಿದೆ ಎಂದು ಆರೋಪಿಸಿರುವ ಕಾಂಗ್ರೆಸ್, ಕಲಾವತಿ ಅವರು ಮಾತನಾಡಿರುವ ವಿಡಿಯೊವನ್ನು 'ಎಕ್ಸ್'ನಲ್ಲಿ ಹಂಚಿಕೊಂಡಿದೆ.

'ಬಡತನದಿಂದ ಸಂಕಷ್ಟ ಎದುರಿಸುತ್ತಿದ್ದ ನನಗೆ ರಾಹುಲ್ ಗಾಂಧಿ ನೆರವು ನೀಡಿದ್ದಾರೆ' ಎಂಬುದಾಗಿ ಕಲಾವತಿ ಹೇಳಿರುವುದು ವಿಡಿಯೊದಲ್ಲಿದೆ.

ರಾಜ್ಯಸಭೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

'ಪ್ರಧಾನಿ ಮೋದಿ ದೇವರಲ್ಲ'

ನವದೆಹಲಿ (ಪಿಟಿಐ): 'ಪ್ರಧಾನಿ ನರೇಂದ್ರ ಮೋದಿ ಅವರು ಮೇಲ್ಮನೆಗೆ ಬಂದರೆ ಏನಾದರೂ ಸಂಭವಿಸಲಿದೆಯೇ? ಅವರು 'ಪರಮಾತ್ಮ'ನೇ? ಮೋದಿ ಖಂಡಿತ ದೇವರಲ್ಲ' ಎಂದು ಮೇಲ್ಮನೆಯ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಗುರುವಾರ ಬೆಳಿಗ್ಗೆ ರಾಜ್ಯಸಭೆಯಲ್ಲಿ ಕಲಾಪ ಶುರುವಾದಾಗ ಸಭಾಪತಿ ಜಗದೀಪ್ ಧನಕರ್ ಅವರಿಗೆ 'ಪ್ರಧಾನಿ ಅವರ ಉಪಸ್ಥಿತಿಯಲ್ಲಿ ನಿಯಮ 167ರ ಅಡಿ ಮಣಿಪುರ ಹಿಂಸಾಚಾರಕ್ಕೆ ಸಂಬಂಧಿಸಿದಂತೆ ಚರ್ಚೆ ಆರಂಭಿಸಬೇಕು' ಎಂದು ಖರ್ಗೆ ಕೋರಿದರು.

> **ಎರಡೂ ಕಡೆಯವರು ಗಟ್ಟಿ ನಿಲುವಿಗೆ ಅಂಟಿಕೊಂಡಿದ್ದಾರೆ. ಹಾಗಾಗಿ, ಕಣಿವೆ ರಾಜ್ಯದ ಸಂಘರ್ಷ ಕುರಿತ ಚರ್ಚೆಗೆ ಅಡ್ಡಿಯಾಗಿದೆ. ಇದು ನನಗೆ ವೈಯಕ್ತಿಕವಾಗಿ ನೋವು ತಂದಿದೆ**
>
> **ಜಗದೀಪ್ ಧನಕರ್,** ಸಭಾಪತಿ

ಇದಕ್ಕೆ ಮೊದಲ ಸಾಲಿನಲ್ಲಿ ಆಸೀನರಾಗಿದ್ದ ಸಚಿವರು ಹಾಗೂ ಬಿಜೆಪಿ ಸದಸ್ಯರು ಆಕ್ಷೇಪ ವ್ಯಕ್ತಪಡಿಸಿದರು. ಆಗ ಖರ್ಗೆ ಹಾಗೂ ಆಡಳಿತಾರೂಢ ಸದಸ್ಯರ ನಡುವೆ ವಾಗ್ವಾದ ನಡೆಯಿತು. ಪರಿಸ್ಥಿತಿ ನಿಯಂತ್ರಣಕ್ಕೆ ಬಾರದಿದ್ದರಿಂದ ಮಧ್ಯಾಹ್ನ 2ಗಂಟೆಗೆ ಕಲಾಪವನ್ನು ಮುಂದೂಡಲಾಯಿತು.

ಮೊದಲು ನಡೆದಿದ್ದೇನು?: ಕಲಾಪ ಆರಂಭಗೊಂಡಾಗ ಮಣಿಪುರ ಸಂಘರ್ಷವೂ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ಚರ್ಚೆಗೆ ಅವಕಾಶ ಕೋರಿ ಹಲವು ನೋಟಿಸ್‌ಗಳು ಸಲ್ಲಿಕೆಯಾಗಿದ್ದವು.

'ನಿಯಮ 167ರ ಅಡಿ ಮಣಿಪುರ ವಿಷಯ ಕುರಿತ ಚರ್ಚೆಗೆ ಮೂರು ನೋಟಿಸ್ ಸಲ್ಲಿಕೆಯಾಗಿವೆ. ನಿಯಮ 168ರ ಅಡಿ ಚರ್ಚೆಗೆ ಡಿಎಂಕೆಯ ತಿರುಚಿ ಶಿವ, ಸಿಪಿಐನ ಬಿನೋಯ್ ವಿಶ್ವಂ ಹಾಗೂ ಸಿಪಿಎಂನ ಎಲಮರಂ ಕರೀಂ ಅವರು ನೋಟಿಸ್ ಸಲ್ಲಿಸಿದ್ದಾರೆ' ಎಂದು ಸಭಾಪತಿ ಧನಕರ್ ತಿಳಿಸಿದರು.

'ಜುಲೈ 31ರಂದೇ ಮಣಿಪುರ ಕುರಿತ ಚರ್ಚೆಗೆ ಅವಕಾಶ ಕಲ್ಪಿಸಲಾಗಿತ್ತು. ಆದರೆ, ವಿರೋಧ ಪಕ್ಷಗಳ ಸದಸ್ಯರು ಅಡ್ಡಿಪಡಿಸಿದ್ದರಿಂದ ಇದು ಫಲಪ್ರದವಾಗಿಲ್ಲ. ಹಾಗಾಗಿ, ಯಾವ ವಿಷಯ ಕುರಿತು ಮೊದಲು ಚರ್ಚೆ ಆರಂಭಿಸಬೇಕು ಎನ್ನುವುದನ್ನು ನೀವೇ ನಿರ್ಧರಿಸಿ' ಎಂದು ಹೇಳಿದರು.

ಆಡಳಿತ ಪಕ್ಷದ ಸಭಾ ನಾಯಕ ಪೀಯೂಷ್ ಗೋಯಲ್, 'ಸುಗಮ ಕಲಾಪಕ್ಕೆ ಸಂಬಂಧಿಸಿದಂತೆ ಚರ್ಚಿಸಲು ಸರ್ಕಾರ ಸಿದ್ಧವಿತ್ತು. ಆದರೆ, ವಿರೋಧ ಪಕ್ಷಗಳ ಸದಸ್ಯರು ಇದಕ್ಕೆ ಸಮ್ಮತಿಸುತ್ತಿಲ್ಲ' ಎಂದು ಆಪಾದಿಸಿದರು.

'ನಾನು ಹಾಗೂ ಸಚಿವ ಪ್ರಲ್ಹಾದ ಜೋಶಿ 'ಇಂಡಿಯಾ' ಸದಸ್ಯರ ಮನವೊಲಿಸಲು ಪ್ರಯತ್ನಿಸಿದೆವು. ಚರ್ಚೆಯಲ್ಲಿ ಮೋದಿ ಹಾಜರಿರಬೇಕೆಂದು ಷರತ್ತು ವಿಧಿಸಿದರು. ಇದಕ್ಕೆ ಜೋಶಿ ಒಪ್ಪಿಗೆ ಸೂಚಿಸಲಿಲ್ಲ' ಎಂದು ಸದನಕ್ಕೆ ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ಖರ್ಗೆ, 'ನಿಯಮ 167ರ ಅಡಿ ಚರ್ಚೆಗೆ ನೀವು ಒಪ್ಪಿದ್ದೀರಿ. ಪ್ರಸ್ತಾವ ಮಂಡಿಸಿದ್ದ ನೀವೇ ಈಗ ವಿರುದ್ಧವಾಗಿ ಮಾತನಾಡುತ್ತಿದ್ದೀರಿ. ಚರ್ಚೆ ಆರಂಭಿಸಲು ನಿಮಗಿರುವ ಸಮಸ್ಯೆಯಾದರೂ ಏನು' ಎಂದು ಪ್ರಶ್ನಿಸಿದರು.

ಆಗ ಮಧ್ಯಪ್ರವೇಶಿಸಿದ ಸದಸ್ಯ ತಿರುಚಿ ಶಿವ, 'ಮಣಿಪುರ ಸಂಘರ್ಷ ಕುರಿತು ಚರ್ಚೆ ನಡೆಯಬೇಕು ಎಂಬುದಷ್ಟೇ ನಮ್ಮ ಒತ್ತಾಯ. ನಾವು ಒಂದೇ ಮಾನದಂಡಕ್ಕೆ ಅಂಟಿಕೊಳ್ಳಬಾರದು. ಸರ್ಕಾರವೂ ಇದೇ ಹಾದಿ ತುಳಿಯಬಾರದು' ಎಂದರು.



ರಾಜ್ಯಸಭೆಯಲ್ಲಿ ಗುರುವಾರ ವಿರೋಧ ಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ ಮಾತನಾಡಿದರು –ಪಿಟಿಐ ಚಿತ್ರ

ಹಿಂಸಾಚಾರ: ಚರ್ಚೆಗೆ ಪಟ್ಟು

ನವದೆಹಲಿ (ಪಿಟಿಐ): ಮಣಿಪುರ ಹಿಂಸಾಚಾರ ಕುರಿತು ಚರ್ಚೆಗೆ ಆಗ್ರಹಿಸಿ ವಿರೋಧ ಪಕ್ಷಗಳು ಗದ್ದಲ ಸೃಷ್ಟಿಸಿದ ಕಾರಣ ದಿನದ ಮಟ್ಟಿಗೆ ರಾಜ್ಯಸಭೆ ಕಲಾಪವನ್ನು ಗುರುವಾರ ಮುಂದೂಡಲಾಯಿತು.

ಆಡಳಿತ ಮತ್ತು ವಿಪಕ್ಷಗಳ ಸದಸ್ಯರ ನಡುವಣ ವಾಗ್ವಾದ, ಗದ್ದಲದ ನಡುವೆಯೇ ಸದನವು ಔಷಧ ವಿಜ್ಞಾನ (ತಿದ್ದುಪಡಿ) ಮಸೂದೆ–2023 ಅಂಗೀಕರಿಸಿತು.

ಬೆಳಿಗ್ಗೆ ಕಲಾಪ ಆರಂಭಗೊಂಡಾಗ, ಮಣಿಪುರ ವಿಷಯ ಕುರಿತು ಚರ್ಚೆಗೆ ವಿಪಕ್ಷಗಳು ಪಟ್ಟುಹಿಡಿದು ಗದ್ದಲ ಎಬ್ಬಿಸಿದಾಗ, ಕಲಾಪವನ್ನು ಮುಂದೂಡಲಾಯಿತು.

ಮಧ್ಯಾಹ್ನ 2ಕ್ಕೆ ಮತ್ತೆ ಕಲಾಪ ಆರಂಭಗೊಂಡಾಗ, ಬೇರೆ ನಿಯಮದಡಿ ಮಣಿಪುರ ಹಿಂಸಾಚಾರ ಕುರಿತು ಚರ್ಚೆ ನಡೆಸುವ ಸಂಬಂಧ ಸದಸ್ಯರಲ್ಲಿ ಒಮ್ಮತ ಮೂಡಿಸಲು ಸಭಾಪತಿ ಜಗದೀಪ್ ಧನಕರ್ ಪ್ರಯತ್ನಿಸಿದರು. ಮತ್ತೆ ಜೋರಾಗಿ ಗದ್ದಲ ಸೃಷ್ಟಿಯಾದ ಕಾರಣ, ಅವರು ಕಲಾಪವನ್ನು ಮುಂದೂಡಿದರು.

'ನನ್ನ ಧ್ವನಿ ದಮನಿಸುವ ಯತ್ನ': 'ಬಿಜೆಪಿ ನನ್ನ ಧ್ವನಿ ದಮನಿಸಲು ಯತ್ನಿಸುತ್ತಿದೆ' ಎಂದು ಆಮ್ ಆದ್ಮಿ ಪಕ್ಷದ (ಎಎಪಿ) ಸಂಸದ ರಾಘವ ಛಡ್ಡಾ ಗುರುವಾರ ವಾಗ್ದಾಳಿ ನಡೆಸಿದರು.

ದೆಹಲಿ ಸೇವಾ ವಿಷಯಗಳ ಮೇಲೆ ನಿಯಂತ್ರಣ ಮಸೂದೆ ಮಂಡನೆ ವೇಳೆ, ಸಮಿತಿ ರಚನೆ ಕೋರಿ ಸಲ್ಲಿಸಿದ್ದ ಪ್ರಸ್ತಾವದಲ್ಲಿ ಛಡ್ಡಾ ತಮ್ಮ ಸಹಿಗಳನ್ನು ಫೋರ್ಜರಿ ಮಾಡಿದ್ದಾರೆ ಎಂದು ಬಿಜೆಪಿಯ ನಾಲ್ವರು ಸಂಸದರು ಆರೋಪಿಸಿದ್ದರು. ಈ ಸಂಬಂಧ ಸಂಸದರು ಛಡ್ಡಾ ವಿರುದ್ಧ ನೀಡಿದ್ದ ದೂರನ್ನು ಸಭಾಪತಿ ಧನಕರ್ ಅವರು ಹಕ್ಕುಬಾಧ್ಯತಾ ಸಮಿತಿಗೆ ಒಪ್ಪಿಸಿದ್ದರು. ಈ ಕುರಿತು ಸದನದಲ್ಲಿ ಪ್ರತಿಕ್ರಿಯೆ ನೀಡುವ ವೇಳೆ ಛಡ್ಡಾ ಅವರು ಬಿಜೆಪಿ ವಿರುದ್ಧ ವಾಗ್ದಾಳಿ ನಡೆಸಿದರು.

ನಂತರ ಸುದ್ದಿಗೋಷ್ಠಿಯನ್ನೂ ನಡೆಸಿದ ಛಡ್ಡಾ, 'ನನ್ನ ವಿರುದ್ಧ ಸುಳ್ಳು ಆರೋಪಗಳನ್ನು ಮಾಡಿರುವ ಬಿಜೆಪಿ ಸಂಸದರ ವಿರುದ್ಧ ಹಕ್ಕುಬಾಧ್ಯತಾ ಸಮಿತಿಗೆ ದೂರು ಸಲ್ಲಿಸುವೆ, ನ್ಯಾಯಾಲಯದ ಮೆಟ್ಟಿಲನ್ನೂ ಏರುವೆ' ಎಂದರು.

ಬೆಲೆ ಏರಿಕೆಗೆ ಕಡಿವಾಣ–ಸಚಿವೆ

ನೇಪಾಳದಿಂದ ಟೊಮೆಟೊ, ಮ್ಯಾನ್ಮಾರ್‌ನಿಂದ ಉದ್ದಿನಬೇಳೆಯ ಆಮದು

ನವದೆಹಲಿ (ಪಿಟಿಐ): ಮಾರುಕಟ್ಟೆ ಬೇಡಿಕೆಯನ್ನು ಪೂರೈಸುವುದು ಹಾಗೂ ಬೆಲೆ ನಿಯಂತ್ರಿಸುವುದರ ಕ್ರಮವಾಗಿ ನೇಪಾಳದಿಂದ ಟೊಮೆಟೊ ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಗುರುವಾರ ಲೋಕಸಭೆಯಲ್ಲಿ ತಿಳಿಸಿದರು.

ಅವಿಶ್ವಾಸ ನಿರ್ಣಯದ ಮೇಲೆ ಮಾತನಾಡಿದ ಅವರು, ಹಣದುಬ್ಬರ ಮತ್ತು ಬೆಲೆ ಏರಿಕೆ ತಡೆಗೆ ಸರ್ಕಾರ ಅಗತ್ಯ ಕ್ರಮಕೈಗೊಳ್ಳುತ್ತಿದೆ. ಮೊಜಂಬಿಕ್‌ನಿಂದ ತೊಗರಿಬೇಳೆ ಮತ್ತು ಮ್ಯಾನ್ಮಾರ್‌ನಿಂದ ಉದ್ದಿನ ಬೇಳೆಯನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು.

ಅಲ್ಲದೆ, ಈಗಾಗಲೇ ಮೂರು ಲಕ್ಷ ಟನ್ ಈರುಳ್ಳಿ ಖರೀದಿಸಲಾಗಿದ್ದು, ದಾಸ್ತಾನು ಇಡಲಾಗಿದೆ. ಸದ್ಯ, ಕರ್ನಾಟಕ ಮತ್ತು ಮಹಾರಾಷ್ಟ್ರದಿಂದ ಟೊಮೆಟೊವನ್ನು ಖರೀದಿಸಿ ದೆಹಲಿ, ಬಿಹಾರ, ಪಶ್ಚಿಮ ಬಂಗಾಳ, ರಾಜಸ್ಥಾನಗಳಲ್ಲಿ ರಾಷ್ಟ್ರೀಯ ಕೃಷಿ ಉತ್ಪನ್ನ ಸಹಕಾರ ಮಾರುಕಟ್ಟೆ ಒಕ್ಕೂಟ (ನಾಫೆಡ್) ಮತ್ತು ಇತರೆ ಸಹಕಾರ ಸಂಘಗಳ ಮೂಲಕ ಹಂಚಿಕೆ ಮಾಡಲಾಗುತ್ತದೆ ಎಂದು ವಿವರಿಸಿದರು.



ನಿರ್ಮಲಾ ಸೀತಾರಾಮನ್

ಈ ರಾಜ್ಯಗಳಿಗೆ ಇದುವರೆಗೂ 8.84 ಲಕ್ಷ ಕೆ.ಜಿ ಟೊಮೆಟೊವನ್ನು ಹಂಚಿಕೆ ಮಾಡಲಾಗಿದೆ. ಈ ಪ್ರಕ್ರಿಯೆ ಮುಂದುವರಿಯಲಿದ್ದು, ಪ್ರಮಾಣವನ್ನು ಹೆಚ್ಚಿಸಲಾಗುವುದು. ಕರ್ನಾಟಕ, ಆಂಧ್ರಪ್ರದೇಶದಲ್ಲಿ ಟೊಮೆಟೊದ ಸಗಟು ಮಾರಾಟ ದರವು ಇಳಿಕೆಯಾಗುತ್ತಿದೆ ಎಂದರು.

ನೇಪಾಳದಿಂದ ಟೊಮೆಟೊ ಆಮದಿಗಾಗಿ, ಆಮದು ಮೇಲಿನ ನಿರ್ಬಂಧ ಸಡಿಲಿಸಲಾಗಿದೆ. ಆಮದುಗೊಳ್ಳಲಿರುವ ಟೊಮೆಟೊ ಈ ವಾರದಲ್ಲಿ ವಾರಾಣಸಿ, ಕಾನ್ಪುರ, ಲಖನೌ ತಲುಪಲಿದೆ. ಅಲ್ಲದೆ, ರಾಷ್ಟ್ರೀಯ ಸಹಕಾರ ಗ್ರಾಹಕ ಒಕ್ಕೂಟದ (ಎನ್‌ಸಿಸಿಎಫ್) ಮೂಲಕ ದೆಹಲಿ ಎನ್‌ಸಿಆರ್ ವಲಯದಲ್ಲಿ ಈ ವಾರಾಂತ್ಯದ ವೇಳೆಗೆ ಕೆ.ಜಿಗೆ ₹ 70ರ ದರದಲ್ಲಿ ಮಾರಲಾಗುತ್ತದೆ ಎಂದು ವಿವರಿಸಿದರು.

ಮೋದಿ ನೇತೃತ್ವದ ಸರ್ಕಾರ ಜನರಿಗೆ ನೀಡಿದ್ದ ಭರವಸೆಗಳನ್ನು ಈಡೇರಿಸುತ್ತಿದೆ. ಆರ್ಥಿಕತೆ ಪ್ರಗತಿಯಾಗುತ್ತಿದೆ ಎಂದರು. 'ಇಂದಿರಾಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಹಿಂದೆ ಗರೀಬಿ ಹಟಾವೋ ಘೋಷಣೆ ಮಾಡಿತ್ತು. ಬಡತನ ನಿರ್ಮೂಲನೆಯಾಯಿತೇ' ಎಂದು ಪ್ರಶ್ನಿಸಿದರು.

ಮೋದಿ ಅವರು ಈಗ ಆಡಳಿತದ ಶೈಲಿಯನ್ನೇ ಬದಲಿಸಿದ್ದಾರೆ. ಹಿಂದೆ 'ಸಿಗುತ್ತದೆ' ಎಂಬ ಭರವಸೆ ಇತ್ತು. ಈಗ 'ಸಿಕ್ಕಿತು' ಎಂಬ ಭಾವನೆ ಇದೆ ಎಂದರು. ಹಣದುಬ್ಬರ ತಡೆ, ಬ್ಯಾಂಕಿಂಗ್ ಕ್ಷೇತ್ರದ ಪ್ರಗತಿ ಅಂಶಗಳನ್ನು ಉಲ್ಲೇಖಿಸಿ ಸರ್ಕಾರದ ಆಡಳಿತವನ್ನು ಸಮರ್ಥಿಸಿಕೊಂಡರು.

'ಇಂಡಿಯಾ' ಮೈತ್ರಿಕೂಟವನ್ನು ಟೀಕಿಸಿದ ಅವರು, ಮೈತ್ರಿಕೂಟದ ಪಕ್ಷಗಳು ಒಟ್ಟಾಗಿ ಹೋರಾಟ ನಡೆಸುತ್ತಿವೆಯೊ, ಪರಸ್ಪರ ಹೋರಾಟ ನಡೆಸುತ್ತಿವೆಯೋ ಎಂದು ನಿರ್ಧರಿಸುವುದೇ ಕ್ಲಿಷ್ಟವಾಗಿದೆ ಎಂದರು.

'ಬೆತ್ತಲೆಗೊಳಿಸಿದ್ದು ಸ್ಮೃತಿ ಕೆರಳಿಸಲ್ಲ'

ನವದೆಹಲಿ (ಪಿಟಿಐ): 'ಮಣಿಪುರದಲ್ಲಿ ಮಹಿಳೆಯರನ್ನು ಬೆತ್ತಲೆಗೊಳಿಸಿ ಮೆರವಣಿಗೆ ನಡೆಸಿದ ಪ್ರಕರಣವು ಸಚಿವೆ ಸ್ಮೃತಿ ಇರಾನಿ ಅವರಲ್ಲಿ ಆಕ್ರೋಶ ಕೆರಳಿಸುವುದಿಲ್ಲ' ಎಂದು ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆ (ಡಿಸಿಡಬ್ಲ್ಯು) ಸ್ವಾತಿ ಮಾಲಿವಾಲ್ ಅವರು ಕಿಡಿಕಾರಿದ್ದಾರೆ.

ರಾಹುಲ್ ಸದನದಲ್ಲಿ ಸಂಸದೆಯರತ್ತ 'ಫ್ಲೈಯಿಂಗ್ ಕಿಸ್' ನೀಡಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಸ್ಮೃತಿ ಇರಾನಿ ಅವರು ಆರೋಪ ಮಾಡಿರುವ ಬೆನ್ನಲ್ಲೇ ಸ್ವಾತಿ ಎಕ್ಸ್‌ನಲ್ಲಿ (ಟ್ವಿಟರ್) ವಿಡಿಯೊವನ್ನು ಪೋಸ್ಟ್ ಮಾಡಿದ್ದಾರೆ. ಮಹಿಳೆಯರ ವಿರುದ್ಧ ದೇಶದಲ್ಲಿ ನಡೆದ ಹಲವು ಘಟನೆಗಳ ಕುರಿತು ಸ್ಮೃತಿ ಅವರು ಮೌನ ಕಾಯ್ದುಕೊಂಡಿರುವ ಕುರಿತು ಅವರು ಪ್ರಶ್ನಿಸಿದ್ದಾರೆ.

'ಸಂಸತ್ತಿನಲ್ಲಿ ಅವರ ಹಿಂದಿನ ಆಸನದಲ್ಲಿ ಬ್ರಿಜ್‌ಭೂಷಣ್ ಎಂಬಾತ ಕೂರುವಾಗ ಈ ಆಕ್ರೋಶ ಎಲ್ಲಿ ಹೋಗುತ್ತದೆ. ಗುಜರಾತ್‌ನ ಬಿಲ್ಕಿಸ್ ಬಾನು ಅತ್ಯಾಚಾರಿಗಳನ್ನು ಬಿಡುಗಡೆಗೊಳಿಸಿದ್ದು', ಸ್ಮೃತಿ ಅವರನ್ನು ಕೆರಳಿಸುವುದಿಲ್ಲ ಎಂದು ಆರೋಪಿಸಿದ್ದಾರೆ.

'ಭಾರತ ಮಾತಾ' ಈಗ ಅಸಂಸದೀಯ ಪದವೆನಿಸಿದೆ: ರಾಹುಲ್

ನವದೆಹಲಿ (ಪಿಟಿಐ): ದೇಶದಲ್ಲಿ ಈಗ 'ಭಾರತ ಮಾತಾ' ಎಂಬುದು ಅಸಂಸದೀಯ ಪದವೆನಿಸಿದೆ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಗುರುವಾರ ಹೇಳಿದ್ದಾರೆ.

ಲೋಕಸಭೆಯಲ್ಲಿ ಬುಧವಾರ ಅವಿಶ್ವಾಸ ನಿರ್ಣಯ ಮೇಲಿನ ಚರ್ಚೆ ಸಂದರ್ಭದಲ್ಲಿ ತಮ್ಮ ಕೆಲ ಹೇಳಿಕೆಗಳನ್ನು ಸ್ಪೀಕರ್ ಓಂ ಬಿರ್ಲಾ ಅವರು ಕಡತದಿಂದ ತೆಗೆದು ಹಾಕಿರುವ ಬಗ್ಗೆ ಅವರು ಹೀಗೆ ಪ್ರತಿಕ್ರಿಯಿಸಿದ್ದಾರೆ.

ಅವಿಶ್ವಾಸ ನಿರ್ಣಯ ಕುರಿತು ಪ್ರಧಾನಿ ನರೇಂದ್ರ ಮೋದಿ ಅವರು ಉತ್ತರ ನೀಡುವುದಕ್ಕೂ ಮುನ್ನ ಸಂಸತ್‌ನಿಂದ ಹೊರನಡೆದ ವೇಳೆ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಕಾರ್ಯ ನಿಮಿತ್ತ ಹೋಗುತ್ತಿರುವೆ' ಎಂದು ಪ್ರಶ್ನೆಯೊಂದಕ್ಕೆ ಉತ್ತರಿಸಿದರು.

ಶಾಂತಿ ಸ್ಥಾಪನೆ ಭರವಸೆ

ಒಂದನೇ ಪುಟದಿಂದ

'ನಮ್ಮ ಸಚಿವರು 400ಕ್ಕೂ ಹೆಚ್ಚು ಬಾರಿ ಭೇಟಿ ನೀಡಿದ್ದಾರೆ' ಎಂದು ಹೇಳಿದರು.

'ಪ್ರಜಾಪ್ರಭುತ್ವ, ಸಂವಿಧಾನದ ಕೊಲೆ ಕುರಿತು ಮಾತನಾಡುವ ಈ ಜನರೇ (ಕಾಂಗ್ರೆಸ್) ಭಾರತವನ್ನು ಮೂರು ತುಂಡುಗಳಾಗಿಸಿದರು. ಗುಲಾಮಗಿರಿಯಿಂದ ಭಾರತ ಮಾತೆಯನ್ನು ಮುಕ್ತಗೊಳಿಸುವ ಕಾಲ ಬಂದಾಗ ಆಕೆಯ ಅಂಗಾಂಗಗಳನ್ನು ಕತ್ತರಿಸಿದರು' ಎಂದು ಟೀಕಿಸಿದರು.

ಕಾಂಗ್ರೆಸ್ ಕ್ಷುಲ್ಲಕ ರಾಜಕಾರಣ ಮಾಡುತ್ತಿದೆ ಎಂದ ಅವರು, ಇಂದಿರಾಗಾಂಧಿ ಪ್ರಧಾನಿಯಾಗಿದ್ದಾಗ 1966ರಲ್ಲಿ ಮಿಜೋರಾಂ ನಾಗರಿಕರ ಮೇಲೆ ದಾಳಿಗೆ ವಾಯುಪಡೆ ಬಳಸಿದ್ದರು. 80ರ ದಶಕದಲ್ಲಿ ಅಕಾಲ್ ತಖ್ತ್ ಮೇಲೆ ಸೇನಾದಾಳಿ ನಡೆದಿತ್ತು ಎಂದರು.

> **ಪ್ರಧಾನಿ ಮೋದಿಗೆ ಕಾಂಗ್ರೆಸ್ ಫೋಬಿಯಾ ಕಾಡುತ್ತಿದೆ. ಅದಕ್ಕಾಗಿ ಭಾಷಣದಲ್ಲಿ ಕಾಂಗ್ರೆಸ್ ಬಗ್ಗೆ ದೀರ್ಘವಾಗಿ, ಮಣಿಪುರ ಕುರಿತು ಕಡಿಮೆ ಮಾತನಾಡಿದ್ದಾರೆ**
>
> **ಗೌರವ್ ಗೊಗೋಯಿ,** ಕಾಂಗ್ರೆಸ್ ಉಪನಾಯಕ, ಲೋಕಸಭೆ

ಅವಿಶ್ವಾಸಕ್ಕೆ ಸೋಲು: ಸರ್ಕಾರದ ವಿರುದ್ಧ ಮಂಡಿಸಲಾಗಿದ್ದ ಅವಿಶ್ವಾಸ ನಿರ್ಣಯಕ್ಕೆ ಸೋಲಾಗಿದೆ. ಗೌರವ್ ಗೊಗೋಯಿ ಮಂಡಿಸಿದ್ದ ನಿರ್ಣಯವನ್ನು ಮತಕ್ಕೆ ಹಾಕಿದಾಗ ವಿರೋಧ ಪಕ್ಷಗಳ ಸದಸ್ಯರು ಸದನದಲ್ಲಿ ಇರಲಿಲ್ಲ. ಅದಕ್ಕೂ ಮೊದಲೇ ಸಭಾತ್ಯಾಗ ಮಾಡಿದ್ದರು. ಶಿರೋಮಣಿ ಅಕಾಲಿದಳದ (ಅಮೃತಸರ) ಸಂಗ್ರೂರು ಸಂಸದ ಸಿಮ್ರಾನ್‌ಜಿತ್ ಸಿಂಗ್ ಮಾನ್ ಅವರು ಮಾತ್ರ ವಿರೋಧ ಪಕ್ಷಗಳ ಸಾಲಿನಲ್ಲಿ ಇದ್ದರು.

ಭಾಷಣದ ಕೊನೆಗೆ ಮಣಿಪುರ ಪ್ರಸ್ತಾಪ!

ಒಂದನೇ ಪುಟದಿಂದ

ಭಾರತ ರಾಷ್ಟ್ರ ಸಮಿತಿ (ಬಿಆರ್‌ಎಸ್) ಮತ್ತು ಶಿರೋಮಣಿ ಅಕಾಲಿ ದಳ (ಎಸ್‌ಎಡಿ) ಸದಸ್ಯರು ಹಿಂದೆಯೇ ಸಭಾತ್ಯಾಗ ಮಾಡಿದರು.

ಪ್ರಧಾನಿ ಅವರು ಎರಡು ಗಂಟೆ ಭಾಷಣದ ಬಳಿಕ ಮಣಿಪುರ ಬೆಳವಣಿಗೆಯನ್ನು ಉಲ್ಲೇಖಿಸಿದರು.

ನಿಲುವಳಿ ಮೇಲೆ ಚರ್ಚೆ ಆರಂಭಿಸಿದ್ದ ಗೌರವ್, 'ಮಣಿಪುರ ಕುರಿತು ಪ್ರಧಾನಿ ಮಾತನಾಡಬೇಕು ಎಂಬುದು ಅವಿಶ್ವಾಸ ನಿರ್ಣಯ ಮಂಡನೆಯ ಉದ್ದೇಶ ಆಗಿತ್ತು. ಅದು ಈಡೇರಲಿಲ್ಲ. ಪ್ರಧಾನಿ ತಮ್ಮ ಜವಾಬ್ದಾರಿಯಿಂದ ನುಣುಚಿಕೊಂಡರು' ಎಂದರು.

'ಪ್ರಧಾನಿ ಮೋದಿ ರಾಜಕೀಯ ಭಾಷಣ ಮಾಡಿದರು' ಎಂದು ಡಿಎಂಕೆ ಸದಸ್ಯ ಟಿ.ಆರ್.ಬಾಲು ಟೀಕಿಸಿದರೆ, ಕಾಂಗ್ರೆಸ್‌ನ ಕಾರ್ತಿ ಚಿದಂಬರಂ, 'ಮಣಿಪುರ ಕುರಿತು ಮಾತನಾಡದ ನಿಲುವು ಖಂಡಿಸಿ ಸಭಾತ್ಯಾಗ ಮಾಡಿದೆವು' ಎಂದು ತಿಳಿಸಿದರು.

ಮಣಿಪುರ: ಸಾಮೂಹಿಕ ಅತ್ಯಾಚಾರದ ದೂರು

ಒಂದನೇ ಪುಟದಿಂದ

ಮೇ 3ರಂದು ಸಂಜೆ 6.30ರ ಹೊತ್ತಿಗೆ ಅತ್ಯಾಚಾರ ನಡೆದಿದೆ. ಕುಕಿ ಜನರು ತಮ್ಮದೂ ಸೇರಿಸಿ ಹಲವು ಮನೆಗಳ ಮೇಲೆ ಬೆಂಕಿ ಹಚ್ಚಿದ್ದಾರೆ. ಈ ಸಂಘರ್ಷದ ನಡುವೆ ತಪ್ಪಿಸಿಕೊಂಡು ಓಡಿದರೂ ಅರ್ಧ ಕಿಲೋಮೀಟರ್ ದೂರ ಸಾಗುವಷ್ಟರಲ್ಲಿ ಕೆಲವು ಜನರು ತಮ್ಮನ್ನು ತಡೆಗಟ್ಟಿ ಹಲ್ಲೆ ನಡೆಸಿದರು ಎಂದು ಮಹಿಳೆ ಹೇಳಿದ್ದಾರೆ ಎಂದು ಎಫ್‌ಐಆರ್‌ನಲ್ಲಿ ಉಲ್ಲೇಖಿಸಲಾಗಿದೆ.

ಚುರಚಾಂದ್‌ಪುರ ಮತ್ತು ಕಾಂಗ್‌ಪೊಕ್ಪಿಯಂತಹ ಕುಕಿ ಸಮುದಾಯದ ಜನರು ಹೆಚ್ಚಾಗಿರುವ ಜಿಲ್ಲೆಗಳಿಂದ ಮೈತೇಯಿ ಸಮುದಾಯದ ಸಾವಿರಾರು ಜನರು ಪರಾರಿಯಾಗಿ, ಸಂತ್ರಸ್ತರ ಶಿಬಿರಗಳಲ್ಲಿ ಆಶ್ರಯ ಪಡೆದಿದ್ದಾರೆ. ಇಂಫಾಲ್, ಬಿಷ್ಣುಪುರ ಮತ್ತು ಥೌಬಲ್ ಜಿಲ್ಲೆಗಳಲ್ಲಿ ಮೈತೇಯಿ ಸಮುದಾಯದ ಪ್ರಾಬಲ್ಯ ಇದ್ದು, ಇಲ್ಲಿದ್ದ ಕುಕಿ ಸಮುದಾಯದ ಜನರು ಪರಾರಿಯಾಗಿದ್ದಾರೆ.

ಪರಿಸ್ಥಿತಿಯನ್ನು ನಿಯಂತ್ರಣಲ್ಲಿ ಇರಿಸಿಕೊಳ್ಳುವ ಉದ್ದೇಶದಿಂದ ಗುಡ್ಡಗಾಡು ಪ್ರದೇಶ ಮತ್ತು ಕಣಿವೆ ಪ್ರದೇಶದ ನಡುವೆ ಭದ್ರತಾ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ.

ಮೈತೇಯಿ ಮತ್ತು ಕುಕಿ ಸಮುದಾಯದ ಜನರ ನಡುವೆ ಉಂಟಾದ ಸಂಘರ್ಷದಿಂದಾಗಿ ಸುಮಾರು 160 ಜನರ ಹತ್ಯೆ ಆಗಿದೆ. 60 ಸಾವಿರಕ್ಕೂ ಹೆಚ್ಚು ಜನರು ನಿರಾಶ್ರಿತರಾಗಿದ್ದಾರೆ. 40 ಸಾವಿರಕ್ಕೂ ಹೆಚ್ಚು ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಹಾಗಿದ್ದರೂ ಪರಿಸ್ಥಿತಿ ನಿಯಂತ್ರಣಕ್ಕೆ ಬಂದಿಲ್ಲ.

ಮೈತೇಯಿ ಸಮುದಾಯದ ಜನರು ಕುಕಿ ಸಮುದಾಯದ ಮಹಿಳೆಯೊಬ್ಬರನ್ನು ಬೆತ್ತಲುಗೊಳಿಸಿ ಮೆರವಣಿಗೆ ನಡೆಸಿದ ವಿಡಿಯೊ ಜುಲೈ 20ರಂದು ಬಹಿರಂಗವಾಗಿತ್ತು. ಅದರ ಬಳಿಕ ದೇಶದಾದ್ಯಂತ ಆಕ್ರೋಶ ವ್ಯಕ್ತವಾಗಿತ್ತು.

ಸ್ಮೃತಿ ಟೀಕಿಸಿದ ಮಹುವಾ

ನವದೆಹಲಿ (ಪಿಟಿಐ): ರಾಹುಲ್ ಗಾಂಧಿ ಅವರು ಸದನದಿಂದ ತೆರಳುತ್ತಿದ್ದ ವೇಳೆ ಬಿಜೆಪಿ ಮಹಿಳಾ ಸಂಸದರತ್ತ 'ಫ್ಲೈಯಿಂಗ್ ಕಿಸ್' ನೀಡಿ ಅನುಚಿತವಾಗಿ ವರ್ತಿಸಿದ್ದಾರೆ ಎಂದು ಆರೋಪಿಸಿರುವ ಕೇಂದ್ರ ಸಚಿವೆ ಸ್ಮೃತಿ ಇರಾನಿ ಅವರನ್ನು ಟಿಎಂಸಿ ಸಂಸದೆ ಮಹುವಾ ಮೊಯಿತ್ರಾ ತರಾಟೆಗೆ ತೆಗೆದುಕೊಂಡಿದ್ದಾರೆ.



ಮಹುವಾ ಮೊಯಿತ್ರಾ

ಸಂಸತ್‌ನ ಹೊರಗೆ ಗುರುವಾರ ಮಾಧ್ಯಮಗಳೊಂದಿಗೆ ಮಾತನಾಡಿದ ಅವರು, 'ಬಿಜೆಪಿ ಸಂಸದರೊಬ್ಬರ ವಿರುದ್ಧ ನಮ್ಮ ಚಾಂಪಿಯನ್ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯದ ಆರೋಪ ಮಾಡಿದಾಗ ಸಚಿವರಿಂದ ಒಂದು ಮಾತೂ ಕೇಳಿಬರಲಿಲ್ಲ. ಆದರೆ ಅವರು ಈಗ ಫ್ಲೈಯಿಂಗ್ ಕಿಸ್ ಬಗ್ಗೆ ಮಾತನಾಡುತ್ತಿದ್ದಾರೆ. ನಿಮ್ಮ ಆದ್ಯತೆಗಳೇನು ಮೇಡಂ' ಎಂದು ಪ್ರಶ್ನೆ ಮಾಡಿದ್ದಾರೆ.

ಸಂಸದ ಬ್ರಿಜ್ ಭೂಷಣ್ ಮಹಿಳಾ ಕುಸ್ತಿಪಟುಗಳಿಗೆ ಲೈಂಗಿಕ ಕಿರುಕುಳ ನೀಡಿದ ಆರೋಪ ಕೇಳಿ ಬಂದಿದೆ. ಈ ಪ್ರಕರಣದಲ್ಲಿ ದೆಹಲಿ ಪೊಲೀಸರು ಅವರ ವಿರುದ್ಧ ಜೂನ್ 15ರಂದು ಚಾರ್ಜ್‌ಶೀಟನ್ನೂ ಸಲ್ಲಿಸಿದ್ದಾರೆ.

ಬಾಡಿಗೆ ಕಟ್ಟಲು ಮಾಂಗಲ್ಯ ಅಡ!

ಒಂದನೇ ಪುಟದಿಂದ

'ನಗರದ ಅಂಗನವಾಡಿಗೆ ತಿಂಗಳಿಗೆ ₹4,000 ಹಾಗೂ ಗ್ರಾಮೀಣ ಅಂಗನವಾಡಿಗೆ ₹1,000 ಬಾಡಿಗೆ ಹಣ ನೀಡುತ್ತದೆ. ಈ ಮೊತ್ತವನ್ನೂ ಭರಿಸಲಾಗದ ಅಸಹಾಯಕ ಸ್ಥಿತಿ ನಿರ್ಮಾಣವಾಗಿದೆ' ಎಂದು ಅಧಿಕಾರಿಯೊಬ್ಬರು ಮಾಹಿತಿ ನೀಡಿದರು.

'ನಗರದಲ್ಲಿ ಒಂದು ಅಂಗನವಾಡಿ ಕೇಂದ್ರದ ತಿಂಗಳ ಸರಾಸರಿ ವಿದ್ಯುತ್ ಬಿಲ್ ₹210 ಮತ್ತು ಗ್ರಾಮೀಣ ಭಾಗದಲ್ಲಿ ₹150 ಬರುತ್ತದೆ. ವಿದ್ಯುತ್ ಬಿಲ್ ಪಾವತಿಸದ್ದಕ್ಕೆ ವಿದ್ಯುತ್ ಪೂರೈಕೆ ಕಡಿತಗೊಳಿಸಿದ ಪ್ರಕರಣಗಳು ನಡೆದಿವೆ' ಎಂದು ಕಾರ್ಯಕರ್ತೆಯೊಬ್ಬರು ತಿಳಿಸಿದರು.

'ಕಚೇರಿ, ವಾಹನಗಳ ನಿರ್ವಹಣೆ, ಲೇಖನ ಸಾಮಗ್ರಿ ಖರೀದಿಗೂ ಅನುದಾನ ಬಂದಿಲ್ಲ. ವಾಹನಗಳ ವಿಮಾ ಕಂತು ಪಾವತಿಗೆ ಹಣಕಾಸಿನ ಕೊರತೆಯಿದೆ. ತುರ್ತು ಸಂದರ್ಭ ಹೊರತುಪಡಿಸಿ ಉಳಿದ ದಿನ ಅಧಿಕಾರಿಗಳು ಆಟೊರಿಕ್ಷಾ, ಬಸ್‌ಗಳಲ್ಲಿ ಓಡಾಡುತ್ತಾರೆ. ಸಿಬ್ಬಂದಿಗೆ ಎರಡು ತಿಂಗಳಿನಿಂದ ಸಂಬಳ ಪಾವತಿ ಆಗಿಲ್ಲ' ಎಂದು ಇಲಾಖೆಯ ಕಚೇರಿ ಸಿಬ್ಬಂದಿಯೊಬ್ಬರು ತಿಳಿಸಿದರು.

ಆಯುಕ್ತರ ನೇಮಕ: ಸಿಜೆಐ ಇಲ್ಲ

ಒಂದನೇ ಪುಟದಿಂದ


'ಇಂಡಿಯಾ' ಸದಸ್ಯರ ವಿರೋಧ: 'ಉದ್ದೇಶಿತ ಹೊಸ ನೇಮಕ ಸಮಿತಿಯಲ್ಲಿ ಬಿಜೆಪಿಯ ಇಬ್ಬರು ಹಾಗೂ ಕಾಂಗ್ರೆಸ್‌ನ ಒಬ್ಬ ಸದಸ್ಯ ಇರುತ್ತಾರೆ. ಚುನಾವಣಾ ಆಯೋಗಕ್ಕೆ ನೇಮಕವಾಗುವ ಸದಸ್ಯರು ಆಡಳಿತಾರೂಢ ಪಕ್ಷಕ್ಕೆ ಹೆಚ್ಚು ನಿಷ್ಠೆ ಹೊಂದುವ ಸಾಧ್ಯತೆ ಇರುತ್ತದೆ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹೇಳಿದ್ದಾರೆ.

'ಆಯೋಗಕ್ಕೆ ಸದಸ್ಯರ ನೇಮಕ ಸಂಬಂಧ ಸುಪ್ರೀಂ ಕೋರ್ಟ್ ಹೊಸ ಪ್ರಕ್ರಿಯೆ ರೂಪಿಸಿದೆ. ಇದರನ್ವಯ ರಚಿಸಿರುವ ಸಮಿತಿಯು ನಿಷ್ಪಕ್ಷಪಾತವಾಗಿಲ್ಲವೇ? ಪಕ್ಷಪಾತಿಯಾಗಿ ಆಯುಕ್ತರ ನೇಮಕಕ್ಕೆ ಪ್ರಧಾನಿ ಅವರು ಇಚ್ಛಿಸಿರುವುದೇಕೆ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಎಕ್ಸ್‌ನಲ್ಲಿ (ಟ್ವಿಟರ್) ಟ್ವೀಟ್ ಮಾಡಿದ್ದಾರೆ.

'ಲೋಕಸಭಾ ಚುನಾವಣೆಯಲ್ಲಿ ಲಾಭ ಪಡೆಯಲು ಸರ್ಕಾರ ಈ ಮಸೂದೆ ಮಂಡಿಸಿದೆ. 'ಇಂಡಿಯಾ' ರಚನೆಯಾದ ಬಳಿಕ ಬಿಜೆಪಿಗೆ ಭಯ ಶುರುವಾಗಿದೆ. ಅದಕ್ಕಾಗಿಯೇ ಈ ಪ್ರಯತ್ನಕ್ಕೆ ಮುಂದಾಗಿದೆ' ಎಂದು ತೃಣಮೂಲ ಕಾಂಗ್ರೆಸ್‌ನ ರಾಜ್ಯಸಭಾ ಸದಸ್ಯ ಸಾಕೇತ್ ಗೋಖಲೆ ದೂರಿದ್ದಾರೆ.

ರಾಜ್ಯದ ಅಂಗನವಾಡಿ ಕೇಂದ್ರಗಳ ನೋಟ

66,361	ಒಟ್ಟು ಅಂಗನವಾಡಿ ಕೇಂದ್ರಗಳು
46,559	ಸ್ವಂತ ಕಟ್ಟಡ ಹೊಂದಿದ ಕೇಂದ್ರಗಳು
19,802	ಬಾಡಿಗೆಯಲ್ಲಿ ನಡೆಯುತ್ತಿರುವ ಅಂಗನವಾಡಿಗಳು
10,874	ಖಾಸಗಿ ಕಟ್ಟಡದಲ್ಲಿರುವ ಕೇಂದ್ರಗಳು
1,055	ಗ್ರಾಮ ಪಂಚಾಯಿತಿ ಕಟ್ಟಡಗಳಲ್ಲಿರುವ ಕೇಂದ್ರಗಳು
2,457	ಸಮುದಾಯ ಭವನದಲ್ಲಿರುವ ಕೇಂದ್ರಗಳು
68	ಯುವಕ ಮಂಡಳದ ಕಟ್ಟಡದಲ್ಲಿರುವ ಕೇಂದ್ರಗಳು
4,505	ಪ್ರಾಥಮಿಕ ಶಾಲಾ ಕಟ್ಟಡದಲ್ಲಿ ನಡೆಯುತ್ತಿರುವ ಕೇಂದ್ರಗಳು
43	ಮಹಿಳಾ ಮಂಡಳದಲ್ಲಿರುವ ಕೇಂದ್ರಗಳು
800	ಪ್ರಸಕ್ತ ವರ್ಷ ಪರ್ಯಾಯ ವ್ಯವಸ್ಥೆ ಮಾಡಿದ ಕೇಂದ್ರಗಳು



❦ ಸುಭಾಷಿತ ❦
ವಿಷಯವನ್ನು ಯಾವ ಮೂರ್ಖ ಬೇಕಾದರೂ ತಿಳಿದುಕೊಳ್ಳಬಹುದು. ಆದರೆ ಅದನ್ನು ಅರ್ಥ ಮಾಡಿಕೊಳ್ಳುವುದು ಮುಖ್ಯ. -ಆಲ್ಬರ್ಟ್ ಐನ್‌ಸ್ಟೀನ್

ಎಂಎಸ್‌ಎಂಇ ವಲಯಕ್ಕೆ ಸಾಲ ಸರ್ಕಾರದ ನೆರವಿನ ಹಸ್ತ ಬೇಕು

ಸಾಲ ನೀಡಿಕೆ ಪ್ರಮಾಣ ಕುರಿತು ಭಾರತೀಯ ರಿಸರ್ವ್ ಬ್ಯಾಂಕ್ ಬಿಡುಗಡೆ ಮಾಡಿರುವ ಅಂಕಿ–ಅಂಶಗಳು ಅತಿಸಣ್ಣ, ಸಣ್ಣ ಹಾಗೂ ಮಧ್ಯಮ ಗಾತ್ರದ (ಎಂಎಸ್‌ಎಂಇ) ಉದ್ದಿಮೆಗಳ ಸ್ಥಿತಿಯ ಕುರಿತು ಚಿತ್ರಣವೊಂದನ್ನು ನೀಡುತ್ತಿವೆ. ಹೊಸ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದಲ್ಲಿ ಈ ವಲಯಕ್ಕೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣವು ಹಿಂದಿನ ವರ್ಷದ ಇದೇ ಅವಧಿಗೆ ಹೋಲಿಸಿದರೆ ಬಹಳ ಕಡಿಮೆ ಆಗಿದೆ. ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣವು ಹಿಂದಿನ ವರ್ಷದ ಏಪ್ರಿಲ್, ಮೇ, ಜೂನ್ ತ್ರೈಮಾಸಿಕಕ್ಕೆ ಹೋಲಿಸಿದರೆ ಈ ವರ್ಷದ ಏಪ್ರಿಲ್, ಮೇ ಹಾಗೂ ಜೂನ್ ತ್ರೈಮಾಸಿಕದಲ್ಲಿ ಗಣನೀಯವಾಗಿ ತಗ್ಗಿದೆ. ಅತಿಸಣ್ಣ ಹಾಗೂ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣದ ಕಥೆಯೂ ಇದೇ ಆಗಿದೆ. ಮಧ್ಯಮ ಪ್ರಮಾಣದ ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣವು ಹಿಂದಿನ ಆರ್ಥಿಕ ವರ್ಷದ ಮೊದಲ ಮೂರು ತಿಂಗಳಲ್ಲಿ ಶೇಕಡ 48ಕ್ಕಿಂತ ಹೆಚ್ಚಿತ್ತು. ಆದರೆ, ಅದು ಈ ವರ್ಷದಲ್ಲಿ ಶೇ 17ಕ್ಕೆ ಬಂದಿದೆ. ಅತಿಸಣ್ಣ ಹಾಗೂ ಸಣ್ಣ ಪ್ರಮಾಣದ ಉದ್ದಿಮೆಗಳಿಗೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣವು ಕಳೆದ ಆರ್ಥಿಕ ವರ್ಷದ ಮೊದಲ ಮೂರು ತಿಂಗಳಲ್ಲಿ ಶೇ 30ಕ್ಕಿಂತ ಹೆಚ್ಚಿತ್ತು. ಅದು ಈ ವರ್ಷದಲ್ಲಿ ಶೇ 10ರ ಆಸುಪಾಸಿಗೆ ಬಂದಿದೆ. ದೇಶದಲ್ಲಿ ಅತಿಹೆಚ್ಚು ಜನರಿಗೆ ಉದ್ಯೋಗ ನೀಡಿರುವ ಹೆಗ್ಗಳಿಕೆ ಎಂಎಸ್‌ಎಂಇ ವಲಯದ್ದು. ಆದರೂ, ಈ ವಲಯಕ್ಕೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣದಲ್ಲಿ ಈ ಮಟ್ಟದ ಇಳಿಕೆ ಕಂಡುಬಂದಿದೆ. ಈ ವಲಯದ ಬಗ್ಗೆ ಬ್ಯಾಂಕ್‌ಗಳಿಗೆ ಇರುವ ಧೋರಣೆಯೇ ಸಾಲ ನೀಡಿಕೆ ವಿಚಾರದಲ್ಲಿ ಇರುವ ಅಡ್ಡಿ ಎಂದು ಉದ್ಯಮದ ಪ್ರತಿನಿಧಿಗಳು ದೂರುತ್ತಾರೆ.



ಕೇಂದ್ರ, ರಾಜ್ಯ ಸರ್ಕಾರಗಳು ಹೆಚ್ಚಿನ ಕ್ರಮಗಳ ಜೊತೆಗೆ, ಬ್ಯಾಂಕ್‌ಗಳ ಮನವೊಲಿಸಿ, ಎಂಎಸ್‌ಎಂಇ ವಲಯಕ್ಕೆ ಬಂಡವಾಳದ ಕೊರತೆ ಎದುರಾಗದಂತೆ ನೋಡಿಕೊಳ್ಳಬೇಕು

ಕೋವಿಡ್ ಸಾಂಕ್ರಾಮಿಕದ ಅವಧಿಯಲ್ಲಿ ತೀವ್ರ ಸಂಕಷ್ಟಕ್ಕೆ ಸಿಲುಕಿದ್ದ ಎಂಎಸ್‌ಎಂಇ ಉದ್ದಿಮೆಗಳು, ನಂತರದ ದಿನಗಳಲ್ಲಿ ಬಂಡವಾಳದ ಕೊರತೆ ಎದುರಿಸಲು ಆರಂಭಿಸಿದವು. ಹೊಸ ಕಾಲದ ಕೆಲವು ಉದ್ಯಮಗಳು ತಮ್ಮ ಷೇರುಗಳನ್ನು ಸಾರ್ವಜನಿಕರು ಖರೀದಿಸಲು ಮುಕ್ತವಾಗಿಸುವ ಮೂಲಕ ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸಿದ ನಿದರ್ಶನಗಳೂ ಇವೆ. ಆದರೆ, ಎಂಎಸ್‌ಎಂಇ ವಲಯದ ಬಹುಪಾಲು ಉದ್ಯಮಗಳಿಗೆ ಈ ರೀತಿ ಬಂಡವಾಳ ಸಂಗ್ರಹಿಸಲು ಆಗದು ಎಂಬುದು ವಾಸ್ತವ. ಬಂಡವಾಳಕ್ಕೆ ಬ್ಯಾಂಕ್ ಸಾಲವನ್ನೇ ನೆಚ್ಚಿಕೊಂಡಿರುವ ಈ ಉದ್ದಿಮೆಗಳು, 'ನಮಗೆ ಬ್ಯಾಂಕ್‌ಗಳಿಂದ ಅಗತ್ಯ ಸಾಲ ಸಿಗುತ್ತಿಲ್ಲ' ಎಂದು ಕಾಲಕಾಲಕ್ಕೆ ಹೇಳುತ್ತಲೇ ಇವೆ. ಕೋವಿಡ್ ನಂತರದ ಅವಧಿಯಲ್ಲಿ, ಹಣದುಬ್ಬರದ ಏರಿಕೆಯನ್ನು ನಿಯಂತ್ರಿಸುವ ಉದ್ದೇಶದಿಂದ ಆರ್‌ಬಿಐ ರೆಪೊ ದರವನ್ನು ಹೆಚ್ಚಿಸುತ್ತಾ ಬಂತು. ಇದರ ಪರಿಣಾಮವಾಗಿ ಸಾಲದ ಮೇಲಿನ ಬಡ್ಡಿ ಹೆಚ್ಚುತ್ತಾ ಸಾಗಿತು. ಹಣದುಬ್ಬರ ಹಾಗೂ ಕಾರ್ಮಿಕರ ಮೇಲಿನ ವೆಚ್ಚ ಏರಿಕೆಯ ಕಾರಣದಿಂದಾಗಿ ಎಂಎಸ್‌ಎಂಇ ವಲಯದ ಹಣಕಾಸಿನ ಸ್ಥಿತಿ ಕೆಟ್ಟಿತು. ಬಡ್ಡಿ ದರ ಏರಿಕೆಯು ಈ ವಲಯದ ಸಮಸ್ಯೆಗಳು ಇನ್ನಷ್ಟು ಹೆಚ್ಚಲು ಕಾರಣವಾಯಿತು. ಬಂಡವಾಳದ ಕೊರತೆಯನ್ನು ತುಂಬಿಕೊಳ್ಳಲು ಎಂಎಸ್‌ಎಂಇ ಉದ್ದಿಮೆಗಳು ವೆಂಚರ್ ಕ್ಯಾಪಿಟಲಿಸ್ಟ್‌ಗಳ ಹಾಗೂ ಖಾಸಗಿ ಮೂಲಗಳ ಮೊರೆ ಹೋಗಿದ್ದೂ ಇದೆ. ಬ್ಯಾಂಕ್‌ಗಳಲ್ಲಿ ನಗದು ಕೊರತೆ ಇಲ್ಲದಿರುವ ಹೊತ್ತಿನಲ್ಲಿಯೂ ಈ ವಲಯಕ್ಕೆ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣವು ಕಡಿಮೆ ಆಗಿರುವುದು ಒಳ್ಳೆಯ ಸೂಚನೆ ಅಲ್ಲ.

ಹಿಂದಿನ ಆರ್ಥಿಕ ವರ್ಷದ ಮೊದಲ ತ್ರೈಮಾಸಿಕದ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣಕ್ಕೆ ಹೋಲಿಸಿದರೆ, ಈ ವರ್ಷದ ಮೊದಲ ತ್ರೈಮಾಸಿಕದ ಸಾಲ ನೀಡಿಕೆಯಲ್ಲಿನ ಹೆಚ್ಚಳದ ಪ್ರಮಾಣದಲ್ಲಿ ಎಲ್ಲ ಪ್ರಮುಖ ವಲಯಗಳಲ್ಲಿಯೂ ಏರಿಕೆ ದಾಖಲಾಗಿದೆ. ಸೇವಾ ವಲಯ, ಕೃಷಿ ಹಾಗೂ ಕೃಷಿಗೆ ಸಂಬಂಧಿಸಿದ ವಲಯಗಳು, ಬೃಹತ್ ಉದ್ಯಮ ವಲಯಗಳಿಗೆ ಸಾಲ ನೀಡಿಕೆಯಲ್ಲಿನ ಬೆಳವಣಿಗೆ ಪ್ರಮಾಣದಲ್ಲಿ ಏರಿಕೆ ಇದೆ. ವೈಯಕ್ತಿಕ ಸಾಲ ನೀಡಿಕೆ ಪ್ರಮಾಣದಲ್ಲಿ ಕೂಡ ಏರಿಕೆ ಇದೆ. ಇಳಿಕೆ ಆಗಿರುವುದು ಎಂಎಸ್‌ಎಂಇ ವಲಯಕ್ಕೆ ನೀಡುವ ಸಾಲದ ಪ್ರಮಾಣದ ಬೆಳವಣಿಗೆಯಲ್ಲಿ ಮಾತ್ರ. ದೇಶದ ಬಹುತೇಕ ಬ್ಯಾಂಕ್‌ಗಳು ಜೂನ್ ತ್ರೈಮಾಸಿಕದ ಫಲಿತಾಂಶವನ್ನು ಪ್ರಕಟಿಸಿವೆ. ಹೆಚ್ಚಿನ ಬ್ಯಾಂಕ್‌ಗಳು ಲಾಭದಲ್ಲಿ ಏರಿಕೆ ಕಂಡಿವೆ. ಆರ್ಥಿಕತೆ ಪುಟಿದೇಳುತ್ತಿರುವ ಹೊತ್ತಿನಲ್ಲಿ ಎಂಎಸ್‌ಎಂಇ ವಲಯಕ್ಕೆ ಬಂಡವಾಳದ ಟಾನಿಕ್ ಬೇಕು. ಬೃಹತ್ ಉದ್ದಿಮೆಗಳ ರೀತಿಯಲ್ಲಿ ಈ ವಲಯದ ಉದ್ದಿಮೆಗಳಿಗೆ ಬಂಡವಾಳ ಮಾರುಕಟ್ಟೆಯಿಂದ ಹಣ ಸಂಗ್ರಹಿಸಲು ಆಗದು; ಇವುಗಳಿಗೆ ಬ್ಯಾಂಕ್ ನೆರವೇ ದೊಡ್ಡ ಆಸರೆ. ಹೀಗಾಗಿ, ಈ ವಿಚಾರವಾಗಿ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳೂ ಹೆಚ್ಚಿನ ಕ್ರಮಗಳನ್ನು ಕೈಗೊಳ್ಳಬೇಕು. ಬ್ಯಾಂಕ್‌ಗಳ ಮನವೊಲಿಸಿ, ಎಂಎಸ್‌ಎಂಇ ವಲಯಕ್ಕೆ ಬಂಡವಾಳದ ಕೊರತೆ ಎದುರಾಗದಂತೆ ನೋಡಿಕೊಳ್ಳಬೇಕು.

ಸಮಾಜೋ–ಆರ್ಥಿಕ ಪರಿವರ್ತನೆಗೆ ಪೂರಕವಾಗುವಂತೆ ಮರುರೂಪಿಸಬೇಕಿದೆ

ಉನ್ನತ ಶಿಕ್ಷಣ: ಬೇಕು ಸುಧಾರಣೆ



ವಿಶ್ಲೇಷಣೆ

ಎಂ.ಚಂದ್ರ ಪೂಜಾರಿ

ಉನ್ನತ ಶಿಕ್ಷಣ ನೀತಿಯನ್ನು ರಾಜ್ಯದಲ್ಲಿ ಈ ಹಿಂದಿನ ಅವಧಿಯ ಸರ್ಕಾರವು ಪೂರ್ವತಯಾರಿ ಇಲ್ಲದೆ, ಅಧ್ಯಯನಪೂರ್ಣ ಸಂವಾದಕ್ಕೆ ಒಳಪಡಿಸದೆ ತರಾತುರಿಯಲ್ಲಿ ಜಾರಿಗೆ ತಂದಿದೆ. ವಿಶ್ವವಿದ್ಯಾಲಯ ಮಟ್ಟದಲ್ಲಿ ಸ್ಥಳೀಯ ಅಗತ್ಯಕ್ಕೆ ಅನುಸಾರವಾಗಿ ಸಿದ್ಧಗೊಳ್ಳಬೇಕಾದ ಪಠ್ಯಗಳನ್ನು ರಾಜ್ಯ ಮಟ್ಟದಲ್ಲಿ ಕೇಂದ್ರೀಕೃತವಾಗಿ ಸಿದ್ಧಗೊಳಿಸಿದೆ. ಈ ಕ್ಷೇತ್ರವನ್ನು ಬಹಳಷ್ಟು ಪೂರ್ವ ತಯಾರಿಯೊಂದಿಗೆ ರಾಜ್ಯದ ಸಮಾಜೋ-ಆರ್ಥಿಕ ಪರಿವರ್ತನೆಗೆ ಪೂರಕವಾಗುವಂತೆ ಮರುರೂಪಿಸುವ ಅನಿವಾರ್ಯ ಇದೆ. ಉನ್ನತ ಶಿಕ್ಷಣ ನೀತಿಯ ಬಗ್ಗೆ ಮರುಚಿಂತನೆ ನಡೆಸುವಾಗ, ಸಂಶೋಧನೆ, ಬೋಧನೆ, ಜ್ಞಾನದ ಅನ್ವಯಿಸುವಿಕೆ ಮತ್ತು ಉನ್ನತ ಶಿಕ್ಷಣ ಸಂಸ್ಥೆಗಳ ನಿರ್ವಹಣೆಯಲ್ಲಿ ಗಂಭೀರ ಪ್ರಮಾಣದಲ್ಲಿ ಬದಲಾವಣೆ ತರಬೇಕಾದ ಅಗತ್ಯ ಇದೆ ಎನಿಸುತ್ತದೆ.

ಸತ್ಯದೆಡೆಗಿನ ಸಾಧಿಸಿ ತೋರಿಸಬಹುದಾದ ನಂಬಿಕೆಯೇ ಜ್ಞಾನ ಎಂದು ತತ್ವಜ್ಞಾನಿಗಳು ವ್ಯಾಖ್ಯಾನಿಸುತ್ತಾರೆ. ಈಗಿನ ಸಾಧಿಸಿ ತೋರಿಸಲು ಮೂರು ವಿಧಾನಗಳಿವೆ: ವಿಜ್ಞಾನದ ವಿಧಾನ, ಸಮಾಜವಿಜ್ಞಾನ ಅಥವಾ ಮಾನವಿಕದ ವಿಧಾನ ಮತ್ತು ಸ್ಥಳೀಯ ಜ್ಞಾನ ಪರಂಪರೆಯ ವಿಧಾನ. ಪ್ರಶ್ನಿಸಿ, ಪರೀಕ್ಷಿಸಿ, ಅವಲೋಕಿಸಿ, ವಿಶ್ಲೇಷಿಸಿ ತೀರ್ಮಾನಕ್ಕೆ ಬರುವುದು ವಿಜ್ಞಾನ ಮತ್ತು ಸಮಾಜವಿಜ್ಞಾನದ ವಿಧಾನಗಳ ತಳಹದಿ. ಆದರೆ, ಸ್ಥಳೀಯ ಜ್ಞಾನಪರಂಪರೆಯು ನಂಬಿಕೆಗೆ ಮಾನ್ಯತೆ ನೀಡುತ್ತದೆ.

ಮೂರೂ ವಿಧಾನಗಳು ತಂದೊಡ್ಡುವ ಗಂಭೀರ ಸಮಸ್ಯೆಗಳನ್ನು ಎದುರಿಸುತ್ತಿವೆ. ಒಂದು, ವಿಜ್ಞಾನ, ಸಮಾಜವಿಜ್ಞಾನ ಹಾಗೂ ಸ್ಥಳೀಯ ಜ್ಞಾನ ಪರಂಪರೆಗಳ ನಡುವೆ ಪರಸ್ಪರ ಸಂವಾದ ನಡೆಯುತ್ತಿಲ್ಲ ಮತ್ತು ಸ್ಥಳೀಯ ಜ್ಞಾನ ಪರಂಪರೆಯು ಪ್ರಶ್ನೆ, ಪರೀಕ್ಷೆ, ಪರಾಮರ್ಶೆಗೆ ಒಡ್ಡಿಕೊಳ್ಳಲು ತಯಾರಿಲ್ಲ. ಈ ಎರಡೂ ಕೊರತೆಗಳನ್ನು ಸ್ವಲ್ಪ ವಿವರಿಸಬೇಕಾಗಿದೆ. ಮಾರುಕಟ್ಟೆ ಬೇಡಿಕೆಗಳು ವಿಜ್ಞಾನ, ಸಮಾಜವಿಜ್ಞಾನ ಸಂಶೋಧನೆಯ ಆದ್ಯತೆಗಳನ್ನು ಪ್ರಭಾವಿಸಿರುವಷ್ಟು ತಳಸ್ತರದ ಜನರ ಬದುಕು ಪ್ರಭಾವಿಸುತ್ತಿಲ್ಲ. ಇದರಿಂದ ಸಂಶೋಧನೆಗಳ ಸಂಖ್ಯೆ ಹೆಚ್ಚುತ್ತಾ ಹೋದರೂ ಜನಸಾಮಾನ್ಯರ ಬದುಕಿನ ಗುಣಮಟ್ಟದಲ್ಲಿ ವಿಶೇಷ ಪರಿವರ್ತನೆಯನ್ನು ಕಾಣಲು ಸಾಧ್ಯವಾಗುತ್ತಿಲ್ಲ.

ತಳಸ್ತರದ ಬಹುತೇಕರು ಇಂದು ಕೂಡ ತಮ್ಮ ಕೃಷಿ, ವ್ಯಾಪಾರ, ಉದ್ದಿಮೆ, ಸೇವಾವಲಯದ ಚಟುವಟಿಕೆಗಳನ್ನು, ತಮ್ಮ ಸಾಮಾಜಿಕ ಹಾಗೂ ಸಾಂಸ್ಕೃತಿಕ ಬದುಕನ್ನು ಸ್ಥಳೀಯ ಜ್ಞಾನಪರಂಪರೆಯ ನೆಲೆಗಟ್ಟಿನಲ್ಲಿಯೇ ಕಟ್ಟಿಕೊಂಡಿದ್ದಾರೆ. ಆದರೆ ಇವರ ಜ್ಞಾನಪರಂಪರೆಯು ಎರಡು ಪ್ರಮುಖ ಸಮಸ್ಯೆಗಳನ್ನು ಎದುರಿಸುತ್ತಿದೆ. ಒಂದು, ಇದಕ್ಕೆ ಭಾರತೀಯ ಜ್ಞಾನಪರಂಪರೆಯ ಸ್ಥಾನಮಾನ ಇಲ್ಲ. ಎರಡು, ಇದು ಪ್ರಶ್ನೆ, ಪ್ರಯೋಗ, ಪರಾಮರ್ಶೆಗಳಿಗೆ ಒಡ್ಡಿಕೊಳ್ಳದ ಕಾರಣ ಆರ್ಥಿಕವಾಗಿ ಯಶಸ್ಸು ಕಾಣುತ್ತಿಲ್ಲ ಮತ್ತು ಸಾಮಾಜಿಕ, ಸಾಂಸ್ಕೃತಿಕ ಬದುಕಿನಲ್ಲಿ ಬ್ರಾಹ್ಮಣ್ಯದ ಕಣ್ಣಲ್ಲಿ ಲೋಕ ನೋಡುವ ಅಭ್ಯಾಸದಿಂದ ಇವರಿಗೆ ಹೊರಬರಲಾಗುತ್ತಿಲ್ಲ. ಇವೇ ಕಾರಣಗಳಿಂದ ಇವರು ಸಮಾಜೋ-ಆರ್ಥಿಕ ಪರಿವರ್ತನೆಗಳಿಂದ ವಂಚಿತರಾಗಿದ್ದಾರೆ. ಆದ್ದರಿಂದ ಈ ಜನರ ಜ್ಞಾನ-ಪರಂಪರೆಯೊಂದಿಗೆ ವಿಜ್ಞಾನ, ಸಮಾಜವಿಜ್ಞಾನಗಳು ಸಂವಾದ ನಡೆಸುವ ಅನಿವಾರ್ಯ ಇದೆ. ಅಂದರೆ, ಇವರ ಸಮಾಜ, ಆರ್ಥಿಕತೆ, ರಾಜಕೀಯ, ಸಂಸ್ಕೃತಿಗಳು ಪಠ್ಯದೊಳಗೆ ಬರುವ ಅಗತ್ಯವಿದೆ. ಪಠ್ಯದಲ್ಲಿ ಇರುವವರು ಸಂಶೋಧಕರ 'ಪ್ರಜ್ಞೆಯ ಭಾಗ' ಆಗುತ್ತಾರೆ. ಸಂಶೋಧಕರ ಪ್ರಜ್ಞೆಯ ಭಾಗವಾದವರು ಸರ್ಕಾರದ ನೀತಿಯ ಭಾಗವಾಗುತ್ತಾರೆ. ಆಗ, ಬದಲಾಗುತ್ತಿರುವ ಲೋಕದೊಂದಿಗೆ ಸಂವಾದ ನಡೆಸಲು ಇವರನ್ನು ಅಣಿಗೊಳಿಸುವುದು ಸುಲಭವಾಗುತ್ತದೆ.

ಬೋಧನೆಯಲ್ಲಿ ಕೆಲವು ಸಮಸ್ಯೆಗಳಿವೆ. ಬೋಧಕರ ಉಪನ್ಯಾಸಕ್ಕೂ ಸ್ವಾಮೀಜಿಗಳ ಪ್ರವಚನಕ್ಕೂ ವಿಶೇಷ ವ್ಯತ್ಯಾಸವಿಲ್ಲ. ಎರಡೂ ಕಡೆ ಪ್ರಶ್ನೆ, ವಿಮರ್ಶೆ, ಚರ್ಚೆಗೆ ಅವಕಾಶವಿಲ್ಲ. ತರಗತಿ ಮತ್ತು ಶಿಕ್ಷಣ ಸಂಸ್ಥೆಗಳು ಲಿಂಗ, ಜಾತಿ, ಧರ್ಮ, ವರ್ಗ ತಾರತಮ್ಯಗಳನ್ನು ಜೀವಂತ ಇಡುವ ಮೌಲ್ಯಗಳನ್ನು ನಮ್ಮ ಸಂಸ್ಕೃತಿ ಹೆಸರಲ್ಲಿ ಆಚರಿಸುತ್ತಿವೆ. ಇವೆಲ್ಲ ಕಾರಣಗಳಿಂದ, ಇಂದು ಉನ್ನತ ಶಿಕ್ಷಣ ಪಡೆದವರು ಮತ್ತು ಪಡೆಯದವರ ನಡುವಿನ ವ್ಯತ್ಯಾಸವನ್ನು ಅವರು ಅನುಭೋಗಿಸುವ ಸರಕುಗಳಿಂದ ಮಾತ್ರ ಗುರುತಿಸಬಹುದೇ ವಿನಾ ಅವರ ಬದುಕಿನ ಮೌಲ್ಯಗಳಿಂದ ಗುರುತಿಸಲು ಸಾಧ್ಯವಾಗುತ್ತಿಲ್ಲ.

ಇವೆಲ್ಲ ಬದಲಾಗಿ, ಉಪನ್ಯಾಸಕರ ಬೋಧನೆ ಕಡಿಮೆ ಇದ್ದು ವಿದ್ಯಾರ್ಥಿಗಳ ಪ್ರಶ್ನೆ, ವಿಮರ್ಶೆಗಳು ಹೆಚ್ಚಾಗಬೇಕು. ಪ್ರಯೋಗ, ಪರೀಕ್ಷೆಗಳ ಮೂಲಕ 'ಮಾಡಿ ಕಲಿಯುವ' ಅವಕಾಶ ಹೆಚ್ಚಾಗಬೇಕು. ಶಿಕ್ಷಣ ಸಂಸ್ಥೆ ಮತ್ತು ತರಗತಿಗಳ ಎಲ್ಲ ಚಟುವಟಿಕೆಗಳು, ಕಾರ್ಯಕ್ರಮಗಳು ಸಾಂವಿಧಾನಿಕ, ಪ್ರಜಾಪ್ರಭುತ್ವ ಹಾಗೂ ಜಾತ್ಯತೀತ ಮೌಲ್ಯಗಳಿಗೆ ಅನುಸಾರವಾಗಿ ನಡೆಯಬೇಕು.

ಸೃಷ್ಟಿಸುವ ಜ್ಞಾನವನ್ನು ಆರ್ಥಿಕ ಚಟುವಟಿಕೆಗಳ (ಜಿಡಿಪಿ) ವೃದ್ಧಿಗೆ ಬಳಸುವುದನ್ನು ಜ್ಞಾನ ಅನ್ವಯಿಸುವಿಕೆ ಎಂದು ಬಹುಷಃ ಶಿಕ್ಷಣ ಸಂಸ್ಥೆಗಳು ಭಾವಿಸಿವೆ. ಸರಕುಸೇವೆಗಳ ಉತ್ಪಾದನೆ ಹಾಗೂ ಪೂರೈಕೆ ಹೆಚ್ಚಾದ ಕೂಡಲೇ ಸಮಾಜದ ಎಲ್ಲರ ಸಮಸ್ಯೆಗಳೂ ಪರಿಹಾರವಾಗುವುದಿಲ್ಲ. ಈ ಉತ್ಪಾದನೆಯಲ್ಲಿ ತಳಸ್ತರದ ಜನರ ಪಾಲ್ಗೊಳ್ಳುವಿಕೆ ಸಾಧ್ಯವಾದರೆ ಮಾತ್ರ ಅನುಭೋಗದಲ್ಲೂ ಪಾಲ್ಗೊಳ್ಳಲು ಸಾಧ್ಯ. ಇಲ್ಲವಾದರೆ ಇವರು ಸರ್ಕಾರದ 'ಕನಿಷ್ಠ ಆದಾಯದ' ಕಾರ್ಯಕ್ರಮವನ್ನು ಅವಲಂಬಿಸಿ ಬದುಕಬೇಕಾಗುತ್ತದೆ. ಆದ್ದರಿಂದ ಆರ್ಥಿಕ ಪ್ರಗತಿಯಲ್ಲಿ ಸಮಾಜದ ಎಲ್ಲರೂ ಪಾಲ್ಗೊಳ್ಳುವುದು ಅನಿವಾರ್ಯ. ಆದರೆ, ಈ ಕೆಳಗಿನ ತೊಡಕುಗಳು ಇವೆ.

1. ಲಿಂಗ, ಜಾತಿ, ಧರ್ಮ ತಾರತಮ್ಯಗಳು ಸೃಷ್ಟಿಸುವ 'ಸಾಮಾಜಿಕ ಅಸಾಮರ್ಥ್ಯ'ಗಳು. 2. ಜನರ ಉಣ್ಣುವ, ಪೂಜಿಸುವ, ಪ್ರೀತಿಸುವ ವಿಷಯಗಳನ್ನು ಬಳಸಿಕೊಂಡು ಸಾಂಸ್ಕೃತಿಕ ರಾಜಕೀಯವು ಸೃಷ್ಟಿಸುವ 'ಸಾಂಸ್ಕೃತಿಕ ಅಸಾಮರ್ಥ್ಯ'ಗಳು. 3. ಬಲವಾದ ದೇಶ ಕಟ್ಟುವ ನೆಪದಲ್ಲಿ 'ಕೇಂದ್ರೀಕೃತ ರಾಜಕೀಯ' ಸೃಷ್ಟಿಸುವ ರಾಜಕೀಯ ಅಸಾಮರ್ಥ್ಯಗಳು ಪಾರಂಪರಿಕ ಜ್ಞಾನ ಬಳಸಿಕೊಂಡು ಉತ್ಪಾದನೆಯಲ್ಲಿ ತೊಡಗಿಸಿಕೊಳ್ಳುವವರಿಗೆ ಆರ್ಥಿಕ ಪ್ರಗತಿಯಲ್ಲಿ ಪಾಲ್ಗೊಳ್ಳಲು ಅಡ್ಡಿಯಾಗಿವೆ. ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಅಸಾಮರ್ಥ್ಯಗಳನ್ನು ಹೋಗಲಾಡಿಸುವ ಉದ್ದೇಶದಿಂದ ಜಾರಿಗೆ ತಂದ ಕಾಯ್ದೆ ಕಾನೂನುಗಳಿವೆ. ಆದರೆ, ಅವುಗಳಿಗೆ ಸಾಮಾಜಿಕ, ಸಾಂಸ್ಕೃತಿಕ ಒಪ್ಪಿಗೆ ಇಲ್ಲದ ಕಾರಣ ಅವು ಪರಿಣಾಮಕಾರಿಯಾಗಿ ಅನುಷ್ಠಾನಗೊಳ್ಳುತ್ತಿಲ್ಲ. ಆದ್ದರಿಂದ ಜ್ಞಾನ ಅನ್ವಯಿಸುವಿಕೆಯ ವ್ಯಾಪ್ತಿಯನ್ನು ಆರ್ಥಿಕ ಪ್ರಗತಿಗೆ ಸೀಮಿತಗೊಳಿಸುವ ಬದಲು ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕ್ಷೇತ್ರಗಳಿಗೂ ವಿಸ್ತರಿಸುವ ಅವಶ್ಯಕತೆ ಇದೆ.

ವರ್ತಮಾನದಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು ಸಂಪನ್ಮೂಲ ಹೊಂದಿಸಿಕೊಳ್ಳುವುದು, ಪಠ್ಯ- ಆಡಳಿತ ಹಾಗೂ ಮಾನವ ಸಂಪನ್ಮೂಲ ಸೃಷ್ಟಿಗೆ ಸಂಬಂಧಿಸಿದ ಸಮಸ್ಯೆಗಳನ್ನು ಎದುರಿಸುತ್ತಿವೆ. ಸಂಪನ್ಮೂಲಕ್ಕೆ ಸರ್ಕಾರಿ ಶಿಕ್ಷಣ ಸಂಸ್ಥೆಗಳು ಸಂಪೂರ್ಣವಾಗಿ ಸರ್ಕಾರವನ್ನು ಅವಲಂಬಿಸಿವೆ. ಸೇವಾ 'ಹಿರಿತನ' ಮತ್ತು ಹೊಣೆಗಾರಿಕೆರಹಿತ ಆಡಳಿತ ವ್ಯವಸ್ಥೆಗಳು ಶೈಕ್ಷಣಿಕ ಕೆಲಸಗಳನ್ನು ನಿರ್ವಹಣೆ ಮಾಡುತ್ತಿವೆ. ಬಂದವರೆಲ್ಲರಿಗೆ ಪದವಿ ಕೊಡುವುದನ್ನೇ ಮಾನವ ಸಂಪನ್ಮೂಲ ಸೃಷ್ಟಿ ಎಂದು ಬಗೆಯಲಾಗಿದೆ. ಇದು ಬದಲಾಗಬೇಕಾಗಿದೆ. ಉನ್ನತ ಶಿಕ್ಷಣ ಸಂಸ್ಥೆಗಳು ಬದಲಿ ಸಂಪನ್ಮೂಲ ಸೃಷ್ಟಿಯ ಮಾರ್ಗಗಳನ್ನು ಕಂಡುಕೊಳ್ಳಬೇಕಾಗಿದೆ. ಸೇವಾ ಹಿರಿತನಕ್ಕಿಂತ ವಿಷಯದ ಮೇಲಿನ ತಜ್ಞತೆ ಹಾಗೂ ಹೊಣೆಗಾರಿಕೆಗಳು ಆಡಳಿತ ವ್ಯವಸ್ಥೆಗಳನ್ನು ರೂಪಿಸುವಲ್ಲಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಪದವಿ ನೀಡುವುದಕ್ಕಿಂತ ಸೃಜನಶೀಲವಾದ, ವಿಮರ್ಶಾ ಧೋರಣೆಯ ಹಾಗೂ ಮುನ್ನುಗ್ಗುವ ಛಾತಿಯುಳ್ಳ ಮಾನವ ಸಂಪನ್ಮೂಲ ಸೃಷ್ಟಿಗೆ ಒತ್ತು ನೀಡಬೇಕಾಗಿದೆ. ಇಂತಹ ಮಾನವ ಸಂಪನ್ಮೂಲ ಮಾತ್ರ ಕಣ್ಣುಮುಂದಿನ ಅನ್ಯಾಯಗಳನ್ನು ಪ್ರಶ್ನಿಸುವ, ಸೋತವರೊಂದಿಗೆ ನಿಲ್ಲುವ ಧೈರ್ಯ ಪ್ರದರ್ಶಿಸಲು ಸಾಧ್ಯ.

ಶಿಕ್ಷಣ ಅದರಲ್ಲೂ ಉನ್ನತ ಶಿಕ್ಷಣವು ಸಮಸಮಾಜ ನಿರ್ಮಿಸುವ ವೈದ್ಯರು, ಎಂಜಿನಿಯರ್‌ಗಳು, ನ್ಯಾಯಾಧೀಶರು, ವಕೀಲರು, ಉಪನ್ಯಾಸಕರು, ಅಧಿಕಾರಿಗಳು ಎಲ್ಲರನ್ನೂ ಸೃಷ್ಟಿಸುತ್ತದೆ. ಆದ್ದರಿಂದ ಉದ್ಯೋಗದ ಪರಿಣತಿಯಷ್ಟೇ ಮಹತ್ವವನ್ನು ಶಿಕ್ಷಿತರು ರೂಢಿಸಿಕೊಳ್ಳಬೇಕಾದ ಸಾಂವಿಧಾನಿಕ ಮೌಲ್ಯಗಳಿಗೂ ನೀಡಬೇಕಾಗುತ್ತದೆ. ಶಿಕ್ಷಣವು ಸಾಂವಿಧಾನಿಕ ಮೌಲ್ಯಗಳನ್ನು ನೀಡಲು ಸೋತರೆ (ಸೋತಿದೆ) ಆಧುನಿಕ ಸಂಸ್ಥೆಗಳಲ್ಲಿ ವಸಾಹತುಶಾಹಿ, ಊಳಿಗಮಾನ್ಯ ಮೌಲ್ಯಗಳ ಮಿಶ್ರಣಗಳು ಕಾರುಬಾರು ಮಾಡಬಹುದು (ಮಾಡುತ್ತಿವೆ). ಈ ಸ್ಥಿತಿಯನ್ನು ಬದಲಾಯಿಸುವ ಉನ್ನತ ಶಿಕ್ಷಣ ನೀತಿ ಇಂದಿನ ಅನಿವಾರ್ಯ.



ಚುರುಮುರಿ



ಮೌನವ್ರತ!

• ಬಿ.ಎನ್.ಮಲ್ಲೇಶ್

ಹರಟೆಕಟ್ಟೆಯಲ್ಲಿ ಚಂದ್ರಯಾನದ ಬಗ್ಗೆ ಚರ್ಚೆ ನಡೆದಿತ್ತು. 'ಮಂಜಮ್ಮ, ನೀನ್ಯಾಕೆ ಚಂದ್ರನ ಮ್ಯಾಲೆ ಒಂದು ಹೋಟ್ಲು ಮಾಡ್ಬಾರ್ದು?' ತೆಪರೇಸಿ ಚಾ ಕುಡಿಯುತ್ತ ಕೇಳಿದ. 'ಮಾಡಬೋದು... ಆದ್ರೆ ಅಲ್ಲೂ ನಿಮ್ಮಂಥ ಉದ್ರಿ ಗಿರಾಕಿಗಳೇ ಸಿಕ್ರೆ ನನ್ ಕತೆ ಅಷ್ಟೆ' ಮಂಜಮ್ಮ ನಕ್ಕಳು.

'ನಿನ್ ಉದ್ರಿ ಇವತ್ತಿಲ್ಲ ನಾಳೆ ತೀರಿಸ್ತೀವಿ ಬಿಡು ಮಂಜಮ್ಮ, ನಿಂಗೆ ಚಂದ್ರನ ಮೇಲೆ 60x40 ಸೈಟು ಸಾಕಾ? ಎಲ್ರಿಗಿಂತ ಮೊದ್ಲು ಅಲ್ಲಿ ಜಮೀನು ಖರೀದಿ ಮಾಡಿದ್ರೆ ಸೋವಿ ಸಿಗುತ್ತಂತೆ. ಲೇ ಗುಡ್ಡೆ, ನಿಂಗೆ ಸೈಟ್ ಬ್ಯಾಡೇನೋ?' ತೆಪರೇಸಿ ಪ್ರಶ್ನೆಗೆ ಗುಡ್ಡೆ ಮಾತಾಡಲಿಲ್ಲ.

'ಯಾಕೋ ಮಾತಾಡ್ತಿಲ್ಲ? ಮೌನವ್ರತ ಮಾಡ್ತಿದೀಯ?' ಮಂಜಮ್ಮ ಕೇಳಿದಳು.

'ನಿನ್ನೆಂಡ್ತಿ ರಾತ್ರಿ ಮೂಲೆಗಾಕ್ಕಂಡು ಒದ್ದೇನೋ?' ದುಬ್ಬೀರ ನಕ್ಕ.

'ಮೊದ್ಲೆಲ್ಲ ಮಣಿಪುರದ ರಾಜ ಬಬ್ರುವಾಹನನ ತರ ಎಗರಾಡ್ತಿದ್ದೆ. ಈಗ್ಯಾಕೆ ಎಲೆಕ್ಷನ್‌ನಲ್ಲಿ ಡಿಪಾಜಿಟ್ ಕಳ್ಕಂಡಿರೋನ್ ತರ ಕುಂತಿದೀಯ?'

ಯಾರ ಪ್ರಶ್ನೆಗೂ ಗುಡ್ಡೆ ಪಿಟಕ್ಕನ್ನಲಿಲ್ಲ.

'ಅಷ್ಟರಲ್ಲಿ ಅಲ್ಲಿಗೆ ಬಂದ ಗೌಸು 'ಗುಡ್ಡೆ ಯಾಕ್ ಮಾತಾಡ್ತಿಲ್ಲ ಮುಜೆ ಮಾಲೂಮ್' ಅಂದ.

'ಹೌದಾ? ಯಾಕೆ?' ಮಂಜಮ್ಮ ಕೇಳಿದಳು.

'ಗುಡ್ಡೆ ಫರ್ ಕು ಏಕ್ ಲವ್ ಲೆಟರ್ ಬಂದಿತ್ತಂತೆ. ಅದ್ರಲ್ಲಿ ಯಾರೋ ಚೋಕ್ರಿ 'ಐ ಲವ್ ಯು' ಕರ್ಕೆ ಬರೆದಿತ್ತಂತೆ. ವೋ ದೇಕ್ಕೆ ಪಮ್ಮಕ್ಕ ತವರ್ ಮನೀಗೆ ಹೋಗೇತೆ' ಗೌಸು ವರದಿ ಒಪ್ಪಿಸಿದ.

'ಓ... ಇದಾ ಸಮಾಚಾರ? ಸರ್ಕಾರ ಒಡೆಯೋಕೆ, ಸಂಸಾರ ಮುರಿಯೋಕೆ ಕೆಲವ್ರು ಅಂಥ ಪತ್ರ ಬರೀತಿರ್ತಾರೆ, ಅದಕ್ಕೆಲ್ಲ ತಲೆ ಕೆಡಿಸ್ಕಾಬಾರ್ದು ಗುಡ್ಡೆ' ದುಬ್ಬೀರ ಸಮಾಧಾನ ಮಾಡಿದ.

'ಈಗ ರಾತ್ರಿ ನಂದೇ ಪಾರ್ಟಿ. ಒಳ್ಳೆ ಫಾರಿನ್‌ದು ಫುಲ್ ಬಾಟ್ಲು ಐತೆ, ಎಲ್ರೂ ಸೇರ್ಕಳಾಣ. ಲೇ ಗುಡ್ಡೆ ನೀ ಬರ್ತೀ ಇಲ್ಲೋ?' ತೆಪರೇಸಿ ಕೇಳಿದ.

'ಫಾರಿನ್‌ದಾ? ಎಲ್ಲಿ ಸೇರ್ಕಳಾದು?' ಗುಡ್ಡೆ ಬಾಯಿಬಿಟ್ಟ.

'ಆಹಾ... ಆಸೆ ನೋಡು, ಚಂದ್ರನ ಮ್ಯಾಲೆ ಸೇರ್ಕಳಾಣ ಅಂತ... ಬರ್ತೀಯಾ?' ತೆಪರೇಸಿ ಕೀಟಲೆಗೆ ಹರಟೆಕಟ್ಟೆಯಲ್ಲಿ ನಗುವಿನ ಅಲೆ ತೇಲಿತು.

ದಿನದ ಟ್ವೀಟ್

ಮೃಗರಾಜನ ಸಂರಕ್ಷಿಸೋಣ



ಸಿಂಹಗಳ ಆವಾಸಸ್ಥಾನವನ್ನು ಸಂರಕ್ಷಿಸುವ ಮತ್ತು ವಿಸ್ತರಿಸುವ ಪ್ರತಿಜ್ಞೆಯನ್ನು ಕೈಗೊಳ್ಳುವ ಮೂಲಕ ವಿಶ್ವ ಸಿಂಹ ದಿನವನ್ನು (ಆ. 10) ಆಚರಿಸೋಣ. ಮೃಗರಾಜ ಚಿರಾಯುವಾಗಲಿ.

ಜಾವಗಲ್ ಶ್ರೀನಾಥ್, ಮಾಜಿ ಕ್ರಿಕೆಟಿಗ

ಕಿಡಿನುಡಿ



ಅನಾರೋಗ್ಯದ ನಡುವೆಯೂ ಸಂಸತ್ತಿನ ಕಲಾಪದಲ್ಲಿ ಪಾಲ್ಗೊಂಡೆ. ಆದರೆ ಅಲ್ಲಿ ನಡೆಯುತ್ತಿರುವುದನ್ನು ನೋಡಿ ಭಾರಿ ನಿರಾಶೆಗೆ ಒಳಗಾಗಿದ್ದೇನೆ. ನನ್ನ ಸುದೀರ್ಘ ಅನುಭವದಿಂದ ಹೇಳುವುದಾದರೆ, ಇದು ಅತ್ಯಂತ ಕೆಳಮಟ್ಟದ ಸ್ಥಿತಿ. ಪ್ರತಿಯೊಬ್ಬರೂ ಘನತೆ ಮತ್ತು ಸಭ್ಯತೆಯನ್ನು ಕಾಯ್ದುಕೊಂಡಾಗ ಮಾತ್ರ ಪ್ರಜಾಪ್ರಭುತ್ವವನ್ನು ಉಳಿಸಲು ಸಾಧ್ಯ. ಕಿರುಚಾಡುವುದು, ನಿಂದಿಸುವುದು, ಘೋಷಣೆಗಳನ್ನು ಕೂಗುವುದು ನಮ್ಮ ವ್ಯವಸ್ಥೆಯಲ್ಲಿ ಅಳಿದುಳಿದಿರುವುದನ್ನೂ ನಾಶಪಡಿಸುತ್ತದೆ ಅಷ್ಟೆ.

ಎಚ್.ಡಿ.ದೇವೇಗೌಡ, ಸಂಸತ್ ಸದಸ್ಯ, ಜೆಡಿಎಸ್ ವರಿಷ್ಠ

25 ವರ್ಷಗಳ ಹಿಂದೆ

ಮಂಗಳವಾರ, 11-8-1998

• ಕಾವೇರಿ: ಪ್ರಾಧಿಕಾರ ರಚನೆ ಕರಡು ಯೋಜನೆ ಪೂರ್ಣ

ನವದೆಹಲಿ, ಆ. 10– ಕಾವೇರಿ ನ್ಯಾಯಮಂಡಲಿಯ ಮಧ್ಯಂತರ ಆಜ್ಞೆಯ ಜಾರಿಗೆ ಪ್ರಧಾನಿ ನೇತೃತ್ವದ ಕಾವೇರಿ ನದಿ ಪ್ರಾಧಿಕಾರ ಮತ್ತು ಅದಕ್ಕೆ ಪೂರಕವಾಗಿ ಕಾರ್ಯನಿರ್ವಹಿಸುವ ಉಸ್ತುವಾರಿ ಸಮಿತಿ ಒಳಗೊಂಡ 'ಯೋಜನೆ'ಯನ್ನು ಒಂದೆರಡು ಸಣ್ಣಪುಟ್ಟ ಬದಲಾವಣೆಗಳೊಡನೆ ಕೇಂದ್ರ ಸರ್ಕಾರ ಇಂದು ಅಖೈರುಗೊಳಿಸಿತು.

ಕೇಂದ್ರ ಸಂಪುಟ ಕಾರ್ಯದರ್ಶಿ ಪ್ರಭಾತ್ ಕುಮಾರ್ ಅವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯಲ್ಲಿ ಕರ್ನಾಟಕ, ತಮಿಳುನಾಡು, ಕೇರಳ, ಪುದುಚೇರಿಯ ಮುಖ್ಯ ಕಾರ್ಯದರ್ಶಿಗಳು, ಜಲ ಸಂಪನ್ಮೂಲ ಸಚಿವಾಲಯದ ಕಾರ್ಯದರ್ಶಿಯು ಯೋಜನೆಯ ಕರಡನ್ನು ಅಂತಿಮಗೊಳಿಸಿದರು.

• ವಿಜ್ಞಾನಿಗಳ ಮೇಲೆ ನಿರ್ಬಂಧ: ಪ್ರಧಾನಿ ವಾಜಪೇಯಿ ಟೀಕೆ

ಮುಂಬೈ, ಆ. 10 (ಪಿಟಿಐ)– ಅಮೆರಿಕ ಹಾಗೂ ಇತರ ಕೆಲವು ದೇಶಗಳು ಭಾರತೀಯ ವಿಜ್ಞಾನಿಗಳ ಮೇಲೆ ನಿರ್ಬಂಧ ಹೇರಿರುವುದನ್ನು ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಇಂದು ಕಟುವಾಗಿ ಟೀಕಿಸಿದರು.

ಇದರಿಂದ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಭಾರತವು ನಡೆಸುತ್ತಿರುವ ಸಂಶೋಧನಾ ಕಾರ್ಯಕ್ಕೆ ಹಿನ್ನಡೆ ಆಗುವುದಿಲ್ಲ ಎಂದು ಒತ್ತಿ ಹೇಳಿದರು.

50 ವರ್ಷಗಳ ಹಿಂದೆ

ಶನಿವಾರ, 11-8-1973

• ರಾಜ್ಯದಲ್ಲಿ ಆಹಾರಧಾನ್ಯ ಅಭಾವ ನಿವಾರಣೆಗೆ ಸರ್ಕಾರದ ವಿಶೇಷ ಕ್ರಮ

ಬೆಂಗಳೂರು, ಆ. 10– ಕೊಯ್ಲಿನ ಪೂರ್ವದ ತಿಂಗಳುಗಳಲ್ಲಿ ರಾಜ್ಯದ ಕೈಗಾರಿಕಾ ಕೇಂದ್ರಗಳು, ಮುಖ್ಯ ಪಟ್ಟಣಗಳು ಮತ್ತು ಜನನಿಬಿಡ ಪ್ರದೇಶಗಳಲ್ಲಿ ಕಾಣಬಹುದಾದ ಆಹಾರಧಾನ್ಯ ಅಭಾವ ನಿವಾರಣೆಗೆ ಸರ್ಕಾರ ಕೆಲವೊಂದು ವಿಶೇಷ ಕ್ರಮಗಳನ್ನು ಕೈಗೊಂಡಿದೆ.

ಇದರ ಪ್ರಕಾರ, ಹೆಚ್ಚುವರಿ ಆಹಾರಧಾನ್ಯ ಇರುವ ಕಡೆಗಳಿಂದ ಕೊರತೆ ಪ್ರದೇಶಗಳಿಗೆ ಸುಲಭದಲ್ಲಿ ಆಹಾರಧಾನ್ಯ ಸಾಗಿಸುವ ವ್ಯವಸ್ಥೆಗೆ ಅನುವು ಮಾಡಿಕೊಡಲಾಗಿದೆ.

ಬೆಂಗಳೂರಿನ ಬಿಇಎಲ್, ಎಚ್‌ಎಂಟಿ ಮತ್ತು ಮೈಕೊ ಕಾರ್ಖಾನೆಗಳಿಗೆ ಹೆಚ್ಚುವರಿ ಧಾನ್ಯ ಇರುವ ಪ್ರದೇಶದಿಂದ ಲೆವಿ ಇಲ್ಲದೆ ಆಹಾರಧಾನ್ಯ ಸಾಗಿಸಿ ಕಾರ್ಮಿಕರಿಗೆ ಹಂಚುವುದಕ್ಕೆ ಅನುಮತಿ ನೀಡಲಾಗಿದೆ.

• ಸ್ಥಳೀಯ ಸಂಸ್ಥೆ ರದ್ದು ಮಾಡುವ ರಾಜ್ಯ ಸರ್ಕಾರಗಳ ಧೋರಣೆ ಕುರಿತು ತೀವ್ರ ಕಳವಳ

ಹುಬ್ಬಳ್ಳಿ, ಆ. 10– ಸ್ಥಳೀಯ ಸಂಸ್ಥೆಗಳನ್ನು ರದ್ದು ಮಾಡುವ ಕೆಲವು ರಾಜ್ಯ ಸರ್ಕಾರಗಳ ಇತ್ತೀಚಿನ ಧೋರಣೆಯ ಬಗ್ಗೆ ಇಂದು ಇಲ್ಲಿ ಸೇರಿದ್ದ ಅಖಿಲ ಭಾರತ ಮೇಯರುಗಳ ಕೌನ್ಸಿಲ್‌ನ ಕಾರ್ಯಕಾರಿ ಸಮಿತಿಯು ತನ್ನ ತೀವ್ರ ಕಳವಳ ಸೂಚಿಸಿ, ಇದು ಪ್ರಜಾಸತ್ತೆಗೆ ಅಪಾಯಕಾರಕ ಎಂದು ಅಭಿಪ್ರಾಯಪಟ್ಟಿತು.

ಪ್ರಮುಖ ಮುನಿಸಿಪಲ್ ಕಾರ್ಪೊರೇಷನ್‌ಗಳನ್ನು ರದ್ದು ಮಾಡುವಲ್ಲಿ ಆಯಾ ಸರ್ಕಾರಗಳು ಕೈಗೊಂಡ ತಮ್ಮ ನಿರ್ಧಾರಗಳನ್ನು ಪುನರ್‌ಪರಿಶೀಲಿಸಬೇಕೆಂದು ಉತ್ತರ ಪ್ರದೇಶದ ರಾಜ್ಯಪಾಲರಿಗೂ ಮಧ್ಯಪ್ರದೇಶದ ಮುಖ್ಯಮಂತ್ರಿಗೂ ಮನವಿ ಮಾಡಿಕೊಳ್ಳಲು ಸಭೆ ನಿರ್ಧರಿಸಿತು.

ಸಂಗತ

ಜಾನುವಾರಿಗೆ ಉರುಳಾಗುತ್ತಿದೆ ಉಣ್ಣೆಬಾಧೆ

ಉಣ್ಣೆಗಳ ಉಪಟಳದಿಂದ ಜಾನುವಾರುಗಳನ್ನು ರಕ್ಷಿಸಲು ಅತೀವ ಕಾಳಜಿಯಿಂದ ಅವುಗಳನ್ನು ನಿರ್ವಹಣೆ ಮಾಡಬೇಕಾದ ಅಗತ್ಯವಿದೆ

• ಡಾ. ಮುರಳೀಧರ ಕಿರಣಕೆರೆ

ಅದೊಂದು ಭಯಾನಕ ದೃಶ್ಯ. ಆ ರೈತರ ಕೊಟ್ಟಿಗೆಯಲ್ಲಿದ್ದ ಹಸುಗಳ ಮೈ ತುಂಬಾ ರಾಶಿ ರಾಶಿ ಉಣುಗುಗಳು (ಉಣ್ಣೆ). ಕೆಲವೆಡೆಯಂತೂ ಚರ್ಮವೂ ಕಾಣದಿರುವ ರೀತಿಯಲ್ಲಿ ಒತ್ತೊತ್ತಾಗಿ ಕಚ್ಚಿಕೊಂಡು ರಕ್ತ ಹೀರುತ್ತಿದ್ದವು! ನೆಲ, ಗೋಡೆಯ ಮೇಲೂ ಉಣ್ಣೆಗಳು ಹರಿದಾಡುತ್ತಿರುವುದನ್ನು ನೋಡಿ ಮತ್ತಷ್ಟು ಗಾಬರಿಯಾಗಿತ್ತು.

'ಈ ಮಳೆಗಾಲ್ದಲ್ಲೂ ವಣಗಿನ ಕಾಟ ವಿಪ್ರೀತ ಸ್ವಾರ್. ಈಗಾಗ್ಲೆ ಮೂರು ಕರು ಸತ್ತುಹೋದ್ವು. ಹಾಲು ಕರ್ಯಕ್ಕೆ ಕೂತ್ರೆ ಮೈಮೇಲೆಲ್ಲಾ ಹತ್ಕೊಂತವೆ. ಮನೆಯೊಳಗೂ ಬರ್ತಿವೆ. ಎಂತ ಮಾಡಿದ್ರೂ ಕಂಟ್ರೋಲ್ ಮಾಡಕ್ಕೆ ಆಗ್ತಿಲ್ಲ' ಎನ್ನುತ್ತಾ ತಮ್ಮ ಅಸಹಾಯಕತೆಯನ್ನು ಬಿಚ್ಚಿಟ್ಟರು ಅವರು. ಅಲ್ಲೇ ಸುತ್ತಾಡುತ್ತಿದ್ದ ಸಣ್ಣ ಮಗುವಿನ ಕೈಕಾಲುಗಳ ಮೇಲೂ ಕೆಂಪು ಬೊಕ್ಕೆಗಳು. ಇದೂ ಉಣುಗು ಕಡಿತದ ಅಲರ್ಜಿಯೆ!

ಸಾಧಾರಣವಾಗಿ ಜೋರು ಮಳೆ, ತುಂಬಾ ಚಳಿಯಿದ್ದಾಗ ಉಣುಗುಗಳು ಸುಪ್ತಾವಸ್ಥೆಗೆ ಜಾರುವುದರಿಂದ ಈ ಅವಧಿಯಲ್ಲಿ ಉಪಟಳ ಕಮ್ಮಿ. ಆದರೀಗ ಋತುಚಕ್ರ ಹಳಿ ತಪ್ಪಿ ಮಳೆ, ಚಳಿಯ ಪ್ರಮಾಣ ಏರುಪೇರಾಗಿರುವುದರಿಂದ ವರ್ಷವಿಡೀ ಉಣ್ಣೆ, ಸೊಳ್ಳೆ, ನೊಣಗಳ ಬಾಧೆ ಕಾಣಿಸುತ್ತಾ ಜನ, ಜಾನುವಾರುಗಳನ್ನು ಹೈರಾಣ ಮಾಡುತ್ತಿದೆ. ಇವುಗಳನ್ನು ಹೆಕ್ಕಿ ತಿಂದು ನಿಯಂತ್ರಿಸುತ್ತಿದ್ದ ಪ್ರಾಣಿ ಪಕ್ಷಿಗಳ ಸಂಖ್ಯೆಯೂ ಮಾಲಿನ್ಯ, ರಾಸಾಯನಿಕ ವಿಷಗಳ ಪ್ರಭಾವದಿಂದ ಕುಸಿದಿರುವ ಕಾರಣ ಕಾಯಿಲೆಗಳ ಹರಡುವಿಕೆ ಹೆಚ್ಚಾಗಿದೆ. ಈ ಉಪದ್ರಕಾರಿ ಪೀಡೆಗಳ ನಿಯಂತ್ರಣವೇ ರೈತರ ಮುಂದಿರುವ ದೊಡ್ಡ ಸವಾಲು.

ದೇಹಕ್ಕೆ ಹತ್ತಿಕೊಳ್ಳುವಾಗ ಸಾಸಿವೆ, ಸೇಬಿನ ಬೀಜಗಳ ಗಾತ್ರದಲ್ಲಿರುವ ಇವು, ರಕ್ತ ಕುಡಿದು ಸಣ್ಣ ಗೋಲಿಗಳ ಆಕಾರಕ್ಕೆ ಉಬ್ಬುತ್ತವೆ. ವಯಸ್ಕ ಉಣ್ಣೆಗಳು ದಿನಕ್ಕೆ 2 ಎಂಎಲ್‌ವರೆಗೂ ರಕ್ತ ಹೀರುತ್ತವೆ! ಜಾನುವಾರುಗಳಲ್ಲಿ ತೀವ್ರ ರಕ್ತಹೀನತೆ ಕಾಣಿಸುತ್ತದೆ. ಹಾಲಿನ ಇಳುವರಿ ಶೇ 25ರಿಂದ 60ರವರೆಗೂ ಕುಸಿಯುತ್ತದೆ. ದನಕರುಗಳು ತೀವ್ರ ನಿಶ್ಶಕ್ತಿಯಿಂದ ಬಳಲುತ್ತವೆ. ರೋಗನಿರೋಧಕ ಸಾಮರ್ಥ್ಯ ಕುಂಠಿತಗೊಳ್ಳುವ ಕಾರಣ ವಿವಿಧ ವ್ಯಾಧಿಗಳಿಗೆ ತುತ್ತಾಗುತ್ತವೆ.

ಪ್ರಮುಖವಾಗಿ ಉಣ್ಣೆಗಳು ಜಾನುವಾರುಗಳಿಗೆ ಹಲವು ಮಾರಕ ಕಾಯಿಲೆಗಳನ್ನು ಹರಡುತ್ತವೆ. ಸೂಕ್ತ ಸಮಯಕ್ಕೆ ಸರಿಯಾದ ಚಿಕಿತ್ಸೆ ದೊರೆಯದಿದ್ದರೆ ಮಲೇರಿಯಾದಂತಹ ಈ ಕಾಯಿಲೆಗಳು ದನಕರುಗಳ ಜೀವಕ್ಕೆ ಕಂಟಕ ತರುತ್ತವೆ. ಇಳುವರಿ ಕುಸಿತ, ಜೀವಹಾನಿಯಿಂದ ಹೈನುಗಾರರು ತೀವ್ರ ಸಂಕಷ್ಟಕ್ಕೆ ಸಿಲುಕುತ್ತಾರೆ. ಉಣುಗುಗಳು ಜಾನುವಾರುಗಳಿಗೆ ಮಾತ್ರವಲ್ಲ ಮಾನವನಿಗೂ ವಿವಿಧ ರೋಗಗಳನ್ನು ಅಂಟಿಸುವ ಮಧ್ಯವರ್ತಿಗಳು. ಮಂಗನ ಕಾಯಿಲೆ (ಕೆಎಫ್‌ಡಿ), ಉಣ್ಣೆ ಜ್ವರ, ಲೈಮ್ ಕಾಯಿಲೆ, ರಿಕೆಟ್ಸಿಯಾ ಸೋಂಕು, ಅನಾಪ್ಲಾಸ್ಮಾ, ಮೆದುಳಿನ ಉರಿಯೂತದಂತಹ ಹತ್ತಾರು ಕಾಯಿಲೆಗಳ ರೋಗಾಣುಗಳನ್ನು ಮಾನವನಿಗೆ ದಾಟಿಸುತ್ತವೆ.

ಉಣ್ಣೆಗಳಲ್ಲಿ ಸುಮಾರು 900ಕ್ಕೂ ಅಧಿಕ ಜಾತಿಗಳಿವೆ! ಇವು ಮೊಟ್ಟೆಯಿಡುವುದು ಹೆಚ್ಚಾಗಿ ಗಾಳಿ, ಬೆಳಕಿಲ್ಲದ, ತೇವಾಂಶವಿರುವ ಕತ್ತಲೆಯ ಜಾಗದಲ್ಲಿ. ಮೊಟ್ಟೆಗಳು ಒಡೆದು ಹೊರಬರುವ ಲಾರ್ವಾಗಳು ಬೆಳವಣಿಗೆ ಹೊಂದಲು ರಕ್ತಾಹಾರ ಬೇಕೇ ಬೇಕು. ಕೆಲವು ರೋಗಾಣುಗಳು ಆನುವಂಶೀಯವಾಗಿ ಇವುಗಳ ಮುಂದಿನ ಪೀಳಿಗೆಗಳಿಗೆ ವರ್ಗಾವಣೆ ಆಗುವುದರಿಂದ ಉಣ್ಣೆಗಳಿಂದ ರೋಗ ಪ್ರಸಾರ ನಿರಂತರವಾಗಿ ನಡೆಯುತ್ತದೆ!

ಉಣ್ಣೆಗಳ ಉಪಟಳದಿಂದ ರಕ್ಷಿಸಲು ತುಂಬಾ ಕಾಳಜಿಯಿಂದ ಜಾನುವಾರುಗಳ ನಿರ್ವಹಣೆ ಮಾಡಬೇಕು. ಹುಲ್ಲು, ದರಗು, ಗಿಡಗಂಟಿಗಳ ಎಲೆಗಳಲ್ಲಿ ಉಣುಗುಗಳ ನೆಲೆಯಿದ್ದು, ಮೇಯಲು ಬರುವ ರಾಸುಗಳಿಗೆ ಇವು ಕಚ್ಚಿಕೊಳ್ಳುತ್ತವೆ. ಕೊಟ್ಟಿಗೆಗೆ ತಂದುಹಾಕುವ ದರಗು, ಸೊಪ್ಪಿನ ಮೂಲಕವೂ ದನಕರುಗಳ ಸಂಪರ್ಕಕ್ಕೆ ಬರಬಹುದು. ಬ್ರಶ್ ಇಲ್ಲವೆ ಹುಲ್ಲು, ಕತ್ತದ ಚಂಡೆ ಬಳಸಿ ಚೆನ್ನಾಗಿ ಮೈಯುಜ್ಜಿ ಸ್ನಾನ ಮಾಡಿಸುವುದರಿಂದ ಹತ್ತಿಕೊಂಡ ಉಣ್ಣೆಗಳು ಬಿದ್ದು ಹೋಗುತ್ತವೆ. ಕೊಟ್ಟಿಗೆಯನ್ನು ಸ್ವಚ್ಛವಾಗಿಡುವ ಜೊತೆಗೆ ಗಾಳಿ, ಬೆಳಕು ಚೆನ್ನಾಗಿರುವ ವ್ಯವಸ್ಥೆ ಮಾಡಬೇಕು. ಮೂರು ತಿಂಗಳಿಗೆ ಒಮ್ಮೆಯಾದರೂ ಕೊಟ್ಟಿಗೆಯ ಗೋಡೆಗಳಿಗೆ ಸುಣ್ಣ ಬಳಿಯಬೇಕು. ಸಂದುಗಳು, ಬಿರುಕುಗಳನ್ನು ಮುಚ್ಚಿದಾಗ ಅಂತಹ ಜಾಗಗಳಲ್ಲಿ ಮೊಟ್ಟೆಯಿಡುವುದು, ಮರಿಯಾಗುವುದನ್ನು ತಪ್ಪಿಸಬಹುದು.



ತುಸು ನಿರ್ಲಕ್ಷ್ಯ ವಹಿಸಿದರೂ ದನಕರುಗಳ ಮೈಮೇಲೆ ಸೋಂಕು ಹೆಚ್ಚಾಗುವುದಲ್ಲದೆ ಕೊಟ್ಟಿಗೆ ದಾಟಿ ವಾಸದ ಮನೆಯೊಳಗೂ ಗಂಭೀರ ಆರೋಗ್ಯ ಸಮಸ್ಯೆ ಹುಟ್ಟುಹಾಕಬಹುದು. ಹೀಗೆ ವ್ಯಾಪಕವಾಗಿ ಹರಡಿದಾಗ ನಿಯಂತ್ರಣವೂ ಕಷ್ಟ.

ಮಾರುಕಟ್ಟೆಯಲ್ಲಿನ ಬಹುತೇಕ ಉಣ್ಣೆ ನಾಶಕಗಳು ರಾಸಾಯನಿಕ ವಿಷಗಳು. ಅಪರೂಪಕ್ಕೊಮ್ಮೆ ಬಳಕೆ ಮಾಡಬಹುದಾದರೂ ಪದೇಪದೇ ಉಪಯೋಗಿಸುವುದರಿಂದ ರಾಸುಗಳ ಆರೋಗ್ಯದ ಮೇಲೂ ತೀವ್ರ ದುಷ್ಪರಿಣಾಮವಾಗುವುದು. ಹಾಲು, ಮೊಟ್ಟೆ, ಮಾಂಸದ ಮೂಲಕ ಈ ರಾಸಾಯನಿಕಗಳು ಸೇವಿಸುವವರ ದೇಹಕ್ಕೂ ಹಾನಿ ತರುತ್ತವೆ. ಹಾಗಾಗಿ ಉಣ್ಣೆ ನಿಯಂತ್ರಣಕ್ಕಾಗಿ ಸುರಕ್ಷಿತವಾದ ಸಾವಯವ ಉಪಾಯಗಳನ್ನು ಅನುಸರಿಸುವುದು ಮಾನವ, ಪಶು, ಪರಿಸರದ ದೃಷ್ಟಿಯಿಂದ ಹಿತಕರ.

ತುಂಬೆ ಸೊಪ್ಪು, ಬೇವಿನ ಸೊಪ್ಪನ್ನು ಅರೆದು ಹಚ್ಚುವುದು, ತೆಂಗಿನೆಣ್ಣೆ, ಪಚ್ಚಕರ್ಪೂರದ ಲೇಪನ, ಹೊಗೆಸೊಪ್ಪಿನ ಕಷಾಯ ಬಳಿಯುವಂತಹ ಕ್ರಮಗಳಿಂದ ಪರಿಣಾಮಕಾರಿ ನಿಯಂತ್ರಣ ಸಾಧ್ಯ.

ಲೇಖಕ: ಮುಖ್ಯ ಪಶುವೈದ್ಯಾಧಿಕಾರಿ ಸರ್ಕಾರಿ ಪಶು ಆಸ್ಪತ್ರೆ, ತೀರ್ಥಹಳ್ಳಿ

ವಾಚಕರ ವಾಣಿ

ಅರಿಯಬೇಕಿದೆ ಬಾಲಕಿಯರ ಸಾಮರ್ಥ್ಯ

ಗ್ರಾಮೀಣ ಭಾರತದಲ್ಲಿ ಪ್ರಾಥಮಿಕ ಶಿಕ್ಷಣದ ಸ್ಥಿತಿಗತಿ- 2022 ಎಂಬ ಸಮೀಕ್ಷಾ ವರದಿಯೊಂದು ಇತ್ತೀಚೆಗೆ ಬಿಡುಗಡೆಯಾಗಿದೆ. ಇದರಲ್ಲಿ, ದೇಶದ ಗ್ರಾಮೀಣ ಪ್ರದೇಶದ ಬಾಲಕಿಯರ ಪಾಲಕರ ಪೈಕಿ ಶೇ 78ರಷ್ಟು ಮಂದಿ ತಮ್ಮ ಪುತ್ರಿಯರು ಕನಿಷ್ಠಪಕ್ಷ ಪದವಿ ಇಲ್ಲವೇ ಅದಕ್ಕಿಂತ ಹೆಚ್ಚು ಶಿಕ್ಷಣ ಪಡೆಯಬೇಕು ಎಂಬ ಬಯಕೆ ಹೊಂದಿರುವ ಅಂಶ ತಿಳಿದುಬಂದಿದೆ. ಇದು ಹೆಮ್ಮೆಪಡುವಂತಹ ಸಂಗತಿ.

ಆದರೆ ಉಳಿದ ಶೇ 22ರಷ್ಟು ಪಾಲಕರ ಕಥೆ ಹೇಗಿರಬಹುದು? ಮಗಳ ಆಸೆ-ಆಕಾಂಕ್ಷೆ ಕೇಳದೆ ಮದುವೆ ಮಾಡಿರಬಹುದು. ಅನ್ಯರ ಉದಾಹರಣೆ ಕೊಟ್ಟು, ತಮ್ಮ ಮಗಳ ಸಾಮರ್ಥ್ಯ ತಿಳಿಯದೆ ಶಾಲೆ ಬಿಡಿಸಿರಬಹುದು. ಹೆಚ್ಚಿಗೆ ಕಲಿಸಿದರೆ ನಮಗೇನು ಲಾಭ, ಗಂಡನ ಮನೆಗೆ ಲಾಭ ಎಂದು ಕೆಟ್ಟದಾಗಿ ಚಿಂತಿಸಿರಬಹುದು. ಇನ್ನೂ ಕಲಿಸಲು ಹಣದ ಅಭಾವ ಕಾಡಿರಬಹುದು. ಶಾಲೆಯಲ್ಲಿ ಸಹಪಾಠಿ ಹುಡುಗನನ್ನು ಮಾತನಾಡಿಸಿದ್ದಕ್ಕೆ ಅಥವಾ ಸಣ್ಣ ಪರೀಕ್ಷೆಯಲ್ಲಿ ಫೇಲಾಗಿದ್ದಕ್ಕೆ ಹುಂಬರಂತೆ ರೇಗಿ ಶಾಲೆಯಿಂದ ದೂರ ಮಾಡಿರಬಹುದು. ಹೇಳಲು ಇನ್ನೂ ಅನೇಕ ಕಾರಣಗಳಿವೆ. ಒಟ್ಟಾರೆ, ಗ್ರಾಮೀಣ ಭಾಗದಲ್ಲಿ ಗಂಡಿಗಿಂತ ಹೆಣ್ಣೇ ಹೆಚ್ಚು ಶಿಕ್ಷಣ ವಂಚಿತಳಾಗುತ್ತಿರುವುದು ಸುಳ್ಳಲ್ಲ.

ಬಸನಗೌಡ ಮಂಜುನಾಥಗೌಡ ಪಾಟೀಲ, ಯರಗುಪ್ಪಿ

ಗಿಡ ಪೋಷಣೆ: ಉತ್ತಮ ಸೂತ್ರ

ಕೆರೆ ದಂಡೆಯಲ್ಲಿ ಎರಡು ಗಿಡಗಳನ್ನು ನೆಟ್ಟು, ನಾಲ್ಕು ವರ್ಷ ಉತ್ತಮ ರೀತಿಯಲ್ಲಿ ಪೋಷಿಸುವ ವಿದ್ಯಾರ್ಥಿಗಳಿಗೆ ಪದವಿ ಅಂತಿಮ ಪರೀಕ್ಷೆಯಲ್ಲಿ ಐದು ಅಂಕಗಳನ್ನು ನೀಡಲು ಶಿರಸಿಯ ಅರಣ್ಯ ಮಹಾವಿದ್ಯಾಲಯ ಮುಂದಾಗಿರುವುದು ಉತ್ತಮ ನಿರ್ಧಾರ. ಅಂಕ ಪಡೆಯುವ ಉದ್ದೇಶದಿಂದಾದರೂ ವಿದ್ಯಾರ್ಥಿಗಳು ಗಿಡ ನೆಟ್ಟು ಪೋಷಿಸುತ್ತಾರೆ. ಪರಿಸರದ ಬಗ್ಗೆ ಆಸಕ್ತಿ ಮೂಡಲು ಈ ಉಪಕ್ರಮವು ಸಹಕಾರಿ. ಎಲ್ಲ ವಿಶ್ವವಿದ್ಯಾಲಯಗಳೂ ಈ ರೀತಿಯ ಹೊಸ ಹೊಸ ಆಯಾಮಗಳಿಂದ ವಿದ್ಯಾರ್ಥಿಗಳನ್ನು ಸಮಾಜಮುಖಿಯಾಗಿಸುವತ್ತ ಚಿಂತಿಸಬೇಕು. ವಿದ್ಯೆಗೆ ಕೊನೆಯೆಲ್ಲಿ?

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಸಾಹಿತ್ಯ ಸಮ್ಮೇಳನ ಆಡಂಬರದ ಜಾತ್ರೆಯಾಗದಿರಲಿ

ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಇತ್ತೀಚಿನ ವರ್ಷಗಳಲ್ಲಿ ಆಡಂಬರದ ಜಾತ್ರೆಯಂತೆ ಆಗುತ್ತಿರುವುದು ವಿಷಾದಕರ. ಸಮ್ಮೇಳನದಲ್ಲಿ ನಡೆಯುವ ಭಾಷಣ, ವಿಚಾರ ಸಂಕಿರಣದಲ್ಲಿ ಹೊಸ ವಿಚಾರಗಳಿಲ್ಲದೆ ಅವು ಚರ್ವಿತಚರ್ವಣದಿಂದ, ನೀರಸ ವಿಚಾರಗಳಿಂದ ಕೂಡಿರುತ್ತವೆ. ಹೀಗಾಗಿ ಜನರು ಅವುಗಳಿಂದ ಪ್ರಭಾವಿತರಾಗಿ ಪುಳಕಿತಗೊಳ್ಳುವುದಿಲ್ಲ. ಇದರಿಂದ ಸಮ್ಮೇಳನಗಳು ಕಾಟಾಚಾರಕ್ಕೆ ಜರುಗುತ್ತವೆ ಎಂಬ ಭಾವನೆ ಮೂಡುತ್ತದೆ. ಕೆಲವು ವರ್ಷಗಳ ಹಿಂದಿನವರೆಗೂ ಸಮ್ಮೇಳನಗಳು ಭಾಷಾಭಿಮಾನ, ನಾಡು ಕಟ್ಟುವ ಅಂತಃಸತ್ವವನ್ನು ಹೊಂದಿದ್ದವು. ಆದ್ದರಿಂದ ಅಂದಿನ ಸಮ್ಮೇಳನಗಳಲ್ಲಿ ಕನ್ನಡಿಗರು ಅಭಿಮಾನಾಸಕ್ತಿಯಿಂದ ಭಾಗವಹಿಸಿ ಧನ್ಯರಾಗುತ್ತಿದ್ದರು.

ಇಂದಿನ ಕನ್ನಡಿಗರು ಇಂತಹ ಸಾಹಿತ್ಯ ಸಮ್ಮೇಳನಗಳ ಬಗೆಗೆ ನಿರಾಸಕ್ತಿಯನ್ನು ಹೊಂದಿರುವಂತಿದೆ. ಸಮ್ಮೇಳನದಲ್ಲಿ ಭಾಗವಹಿಸಲು ಹೆಸರು ನೋಂದಾಯಿಸುವವರ ಸಂಖ್ಯೆ ವರ್ಷದಿಂದ ವರ್ಷಕ್ಕೆ ಕಡಿಮೆಯಾಗುತ್ತಿರುವುದು ಇದಕ್ಕೆ ನಿದರ್ಶನ. ಇನ್ನು ಮುಂದೆ ಸಮ್ಮೇಳನಗಳು ಆಡಂಬರದ ಜಾತ್ರೆಯಾಗದಂತೆ ಎಚ್ಚರ ವಹಿಸುವುದು ಎಲ್ಲರ ಆದ್ಯ ಕರ್ತವ್ಯ.

ಪ್ರೊ. ಶಾಶ್ವತಸ್ವಾಮಿ ಮುಕ್ಕುಂದಿಮಠ, ಸಿಂಧನೂರು

ಜನಪ್ರತಿನಿಧಿಗಳಿಗೇಕೆ ಇಷ್ಟೊಂದು ನಿರಾಸಕ್ತಿ?

ಸಂಸದರ ನಿಧಿಯಡಿ ಕಾಮಗಾರಿಗಳನ್ನು ಕೈಗೊಳ್ಳಲು ಹಿಂದಿನ ಮೂರು ವರ್ಷಗಳಲ್ಲಿ ನಮ್ಮ ರಾಜ್ಯದವರೂ ಸೇರಿದಂತೆ ಕೆಲವು ಸಂಸದರು ಕೇಂದ್ರಕ್ಕೆ ಯಾವುದೇ ಶಿಫಾರಸು ಸಲ್ಲಿಸದಿರುವ ಕುರಿತ ವರದಿ (ಪ್ರ.ವಾ., ಆ. 10) ಓದಿ ಒಂದು ಕಡೆ ಆಶ್ಚರ್ಯವಾದರೆ, ಮತ್ತೊಂದು ಕಡೆ ಬೇಸರವಾಯಿತು. ಜನಪ್ರತಿನಿಧಿಗಳಲ್ಲಿ ಏಕೆ ಇಷ್ಟೊಂದು ನಿರಾಸಕ್ತಿ? ಜನೋಪಯೋಗಿ ಕಾರ್ಯಗಳನ್ನು ಮಾಡಲು ಆಸಕ್ತಿ ಇಲ್ಲದಿದ್ದರೆ ಚುನಾವಣೆಗೆ ಸ್ಪರ್ಧಿಸುವುದಾದರೂ ಏಕೆ? ಸಾರ್ವಜನಿಕ ಜೀವನವನ್ನು ಬಯಸುವುದಾದರೂ ಏಕೆ? ತಮ್ಮ ತಮ್ಮ ಉದ್ಯೋಗ, ವ್ಯವಹಾರಗಳನ್ನು ನೋಡಿಕೊಂಡು ಇರಬಹುದಲ್ಲವೇ?

ತಮಗೆ ಸಮಯ ಇಲ್ಲದಿದ್ದರೆ, ನಂಬಿಕೆಗೆ ಅರ್ಹರಾದ, ಸಾಮಾಜಿಕ ಕಳಕಳಿಯುಳ್ಳ ತಮ್ಮ ಆಪ್ತ ಅನುಯಾಯಿಗಳಿಗಾದರೂ ಸೂಚಿಸಿದರೆ, ಅವರು ಉಪಯುಕ್ತ ರೀತಿಯಲ್ಲಿ ನಿಧಿ ಬಳಕೆಯಾಗುವಂತೆ ನೋಡಿಕೊಳ್ಳಬಹುದು. ಅದುಬಿಟ್ಟು ಅನುದಾನವನ್ನು ವೃಥಾ ವ್ಯರ್ಥ ಮಾಡುವುದರಲ್ಲಿ ಯಾವ ಪ್ರಯೋಜನವಿದೆ? ಬರೀ ಅನವಶ್ಯಕ ವಿಚಾರಗಳಿಗೆ ತಲೆತೂರಿಸಿ ಕಾಲಹರಣ ಮಾಡುವ ಸಂಸದರಿಗೆ ವಾರ್ಷಿಕ ₹ 5 ಕೋಟಿ ಅನುದಾನವನ್ನು ಸದುಪಯೋಗಪಡಿಸಿಕೊಳ್ಳಲು ಸಮಯವಿಲ್ಲವೇ ಅಥವಾ ಮನಸ್ಸಿಲ್ಲವೇ? ಅಂತಹವರಿಗೆ ಮತ್ತ್ಯಾವ ಘನ ಉದ್ದೇಶ ಇರುತ್ತದೆ? ತಮಗೆ ಆಸಕ್ತಿ ಇಲ್ಲದಿದ್ದರೆ ಆಸಕ್ತಿ ಇರುವವರಿಗಾದರೂ ಅವರು ಅವಕಾಶ ಮಾಡಿಕೊಡಲಿ.

ಟಿ.ವಿ.ಬಿ.ರಾಜನ್, ಬೆಂಗಳೂರು

ಶಕ್ತಿ ಯೋಜನೆ: ಮೀಸಲಾತಿ ಪಾಲನೆಯಾಗಲಿ

'ಶಕ್ತಿ' ಯೋಜನೆಯನ್ನು ಆರಂಭಿಸುವಾಗ, ಸರ್ಕಾರಿ ಬಸ್‌ಗಳಲ್ಲಿ ಶೇ 50ರಷ್ಟು ಸೀಟುಗಳನ್ನು ಮಹಿಳೆಯರಿಗೆ ಮೀಸಲಿರಿಸುವುದಾಗಿ ಸಾರಿಗೆ ಸಚಿವರು ಹೇಳಿದ್ದರು. ಆದರೆ, ಅತಿ ಹೆಚ್ಚು ಮಹಿಳೆಯರು ಪ್ರಯಾಣಿಸುತ್ತಿರುವುದರಿಂದ ಈ ಮೀಸಲಾತಿ ಪಾಲನೆಯಾಗದೆ, ಬಹಳಷ್ಟು ಪುರುಷರು ನಿಂತುಕೊಂಡೇ ಪ್ರಯಾಣಿಸಬೇಕಾಗಿದೆ. ಹಿರಿಯ ನಾಗರಿಕರು, ಅಂಗವಿಕಲರಿಗೆ ಮೀಸಲಿರಿಸಿದ ಆಸನಗಳನ್ನೂ ಮಹಿಳಾ ಪ್ರಯಾಣಿಕರೇ ಆಕ್ರಮಿಸಿಕೊಳ್ಳುವುದರಿಂದ, ವಯೋಸಹಜ ಆರೋಗ್ಯ ಸಮಸ್ಯೆಗಳಿರುವ ಹಿರಿಯ ನಾಗರಿಕರು ತೊಂದರೆಗೆ ಒಳಗಾಗುತ್ತಿದ್ದಾರೆ. ಆದ್ದರಿಂದ ಮೀಸಲಾತಿಯನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಒಂದು ವೇಳೆ ಸೀಟುಗಳು ಖಾಲಿ ಇದ್ದಲ್ಲಿ ಯಾರು ಎಲ್ಲಿ ಬೇಕಾದರೂ ಕುಳಿತುಕೊಳ್ಳಬಹುದು ಎಂಬ ನಿರ್ದೇಶನವನ್ನು ಇಲಾಖೆಯು ನೀಡಬೇಕಾಗಿದೆ.

ಜಿ.ನಾಗೇಂದ್ರ ಕಾವೂರು, ಸಂಡೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಚುನಾವಣಾ ಆಯುಕ್ತರ ನೇಮಕಾತಿಗೆ ಮಸೂದೆ

ಕೇಂದ್ರಕ್ಕೇ ಪರಮಾಧಿಕಾರ

ಮುಖ್ಯ ಚುನಾವಣಾ ಆಯುಕ್ತ ಮತ್ತು ಇತರ ಚುನಾವಣಾ ಆಯುಕ್ತರ ನೇಮಕಾತಿಗೆ ಕಾನೂನಿನ ಚೌಕಟ್ಟು ರೂಪಿಸಲು ಮುಂದಾಗಿರುವ ಕೇಂದ್ರ ಸರ್ಕಾರವು, ಹೊಸದಾಗಿ ಮಸೂದೆಯೊಂದನ್ನು ಸಿದ್ಧಪಡಿಸಿದೆ. ಈ ಮಸೂದೆಯನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ. ಚುನಾವಣಾ ಆಯುಕ್ತರ ನೇಮಕಾತಿಯಲ್ಲಿ ಕೇಂದ್ರ ಸರ್ಕಾರಕ್ಕೇ ಪರಮಾಧಿಕಾರ ನೀಡುವ ರೀತಿಯಲ್ಲಿ ಈ ಮಸೂದೆ ಇದೆ ಎಂದು ವಿರೋಧ ಪಕ್ಷಗಳು ಆಕ್ಷೇಪ ವ್ಯಕ್ತಪಡಿಸಿವೆ

ಪ್ರಜಾವಾಣಿ ವಾರ್ತೆ

ಮುಖ್ಯ ಚುನಾವಣಾ ಆಯುಕ್ತರು ಮತ್ತು ಚುನಾವಣಾ ಆಯುಕ್ತರು (ನೇಮಕಾತಿ, ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಮಸೂದೆ-2023 ಅನ್ನು ರಾಜ್ಯಸಭೆಯಲ್ಲಿ ಮಂಡಿಸಲಾಗಿದೆ. ಭಾರತ ಸಂವಿಧಾನದ 324ನೇ ವಿಧಿ ಮತ್ತು ಉಪವಿಧಿಗಳ ಅಡಿಯಲ್ಲಿ ಚುನಾವಣಾ ಆಯೋಗದ ರಚನೆ, ಚುನಾವಣಾ ಆಯುಕ್ತರ ನೇಮಕಕ್ಕೆ ಅವಕಾಶ ಮಾಡಿಕೊಡಲಾಗಿದೆ. ಆದರೆ, ಆಯುಕ್ತರ ನೇಮಕಕ್ಕಾಗಿ ಈವರೆಗೆ ಯಾವುದೇ ಕಾನೂನು–ನಿಯಮಗಳನ್ನು ರೂಪಿಸಿಲ್ಲ. 1991ರ ಚುನಾವಣಾ ಆಯೋಗ (ಚುನಾವಣಾ ಆಯುಕ್ತರ ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಕಾಯ್ದೆಯ ಅಡಿಯಲ್ಲಿ ಜ್ಯೇಷ್ಠತೆ ಆಧಾರದಲ್ಲಿ ಚುನಾವಣಾ ಆಯುಕ್ತರನ್ನು ನೇಮಕ ಮಾಡಲಾಗುತ್ತಿತ್ತು. ಆ ಕಾಯ್ದೆಯು ಕರ್ತವ್ಯದ ನಿಬಂಧನೆಗಳನ್ನು ವಿವರಿಸುತ್ತದೆಯೇ ಹೊರತು, ನೇಮಕಾತಿ ಹೇಗೆ ನಡೆಯಬೇಕು ಎಂಬುದನ್ನು ಸ್ಪಷ್ಟಪಡಿಸುವುದಿಲ್ಲ.

ಚುನಾವಣಾ ಆಯುಕ್ತರನ್ನು ಹೇಗೆ ನೇಮಕ ಮಾಡಬೇಕು ಎಂಬುದನ್ನು ವಿವರಿಸುವ ಯಾವುದೇ ಸ್ಥಾಪಿತ ಕಾನೂನು ಇಲ್ಲದಿದ್ದ ಕಾರಣ, ನೇಮಕಾತಿಗಳ ಸಂದರ್ಭದಲ್ಲಿ ಆಕ್ಷೇಪ ವ್ಯಕ್ತವಾಗುತ್ತಿತ್ತು. ಈ ಕಾರಣದಿಂದಲೇ 2022ರ ನವೆಂಬರ್‌ನಲ್ಲಿ ಅರುಣ್ ಗೋಯಲ್ ಅವರನ್ನು ಚುನಾವಣಾ ಆಯುಕ್ತರಾಗಿ ನೇಮಕ ಮಾಡಿದಾಗ, ಸುಪ್ರೀಂ ಕೋರ್ಟ್‌ನಲ್ಲಿ ಅರ್ಜಿ ಸಲ್ಲಿಕೆಯಾಗಿತ್ತು. ತೀರ್ಪು ನೀಡಿದ್ದ ಸುಪ್ರೀಂ ಕೋರ್ಟ್, 'ಈ ಸಂಬಂಧ ಕಾನೂನು ರಚನೆಯಾಗುವವರೆಗೂ ಆಯ್ಕೆ ಸಮಿತಿಯು ಅಸ್ತಿತ್ವದಲ್ಲಿ ಇರಲಿದೆ ಮತ್ತು ಸಮಿತಿಯಲ್ಲಿ ಪ್ರಧಾನಿ, ವಿರೋಧ ಪಕ್ಷದ ನಾಯಕ ಮತ್ತು ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ ಇರಬೇಕು ಎಂದು ಹೇಳಿತ್ತು. ಆ ಆದೇಶ ಹೊರಬಿದ್ದ ಹಲವು ತಿಂಗಳ ನಂತರ ಕೇಂದ್ರ ಸರ್ಕಾರವು ಈ ಮಸೂದೆಯನ್ನು ರೂಪಿಸಿದೆ. ಆದರೆ, ಆಯ್ಕೆ ಸಮಿತಿಯಿಂದ ಮುಖ್ಯ ನ್ಯಾಯಮೂರ್ತಿಯನ್ನು ಹೊರಗಿಟ್ಟಿದೆ. ಬದಲಿಗೆ ಆ ಸ್ಥಾನಕ್ಕೆ ಸಚಿವರೊಬ್ಬರನ್ನು ಪ್ರಧಾನಿ ಶಿಫಾರಸು ಮಾಡಬಹುದು ಎಂದು ಸೇರಿಸಲಾಗಿದೆ. ಮಸೂದೆಯಲ್ಲಿ ಇರುವ ಹಲವು ಸೆಕ್ಷನ್‌ಗಳು ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರಗಳನ್ನು ನೀಡುತ್ತವೆ.

ಮುಖ್ಯ ನ್ಯಾಯಮೂರ್ತಿಗೆ ಕೊಕ್, ಪ್ರಧಾನಿಗೆ ಹೆಚ್ಚಿನ ಅಧಿಕಾರ

ಆಯ್ಕೆ ಸಮಿತಿ

ವಿವರ	ಸುಪ್ರೀಂ ಕೋರ್ಟ್ ಹೇಳಿದ್ದು	ಸರ್ಕಾರ ರಚಿಸಿರುವ ಮಸೂದೆ
ಮುಖ್ಯಸ್ಥ	ಪ್ರಧಾನಿ	ಪ್ರಧಾನಿ
ಸದಸ್ಯ1	ವಿರೋಧ ಪಕ್ಷದ ನಾಯಕ (ಅಧಿಕೃತ ವಿರೋಧ ಪಕ್ಷ ಇಲ್ಲದೇ ಇದ್ದರೆ, ವಿರೋಧಿ ಪಾಳಯದಲ್ಲಿನ ಅತ್ಯಂತ ದೊಡ್ಡ ಪಕ್ಷದ ನಾಯಕ)	ವಿರೋಧ ಪಕ್ಷದ ನಾಯಕ (ಅಧಿಕೃತ ವಿರೋಧ ಪಕ್ಷ ಇಲ್ಲದೇ ಇದ್ದರೆ, ವಿರೋಧಿ ಪಾಳಯದಲ್ಲಿನ ಅತ್ಯಂತ ದೊಡ್ಡ ಪಕ್ಷದ ನಾಯಕ)
ಸದಸ್ಯ2	ಸುಪ್ರೀಂ ಕೋರ್ಟ್‌ನ ಮುಖ್ಯ ನ್ಯಾಯಮೂರ್ತಿ	ಪ್ರಧಾನಿ ಶಿಫಾರಸು ಮಾಡುವ ಸಚಿವ, ಈ ಸಮಿತಿಯ ಸದಸ್ಯನಾಗುತ್ತಾನೆ

- ಈ ಸಮಿತಿಯು ಬಹುಮತದ ಆಧಾರದಲ್ಲಿ ಶಿಫಾರಸು ಮಾಡುತ್ತದೆ. ಸುಪ್ರೀಂ ಕೋರ್ಟ್ ಸೂಚಿಸಿದ್ದ ಆಯ್ಕೆ ಸಮಿತಿಯಲ್ಲಿ ಸರ್ಕಾರದ ಪರವಾಗಿ ಪ್ರಧಾನಿ, ವಿರೋಧ ಪಕ್ಷಗಳ ಪರವಾಗಿ ವಿರೋಧ ಪಕ್ಷಗಳ ನಾಯಕ ಇರುತ್ತಿದ್ದರು. ಆಡಳಿತ ಮತ್ತು ವಿರೋಧ ಪಕ್ಷ ಎರಡಕ್ಕೂ ಸೇರದ ಮುಖ್ಯ ನ್ಯಾಯಮೂರ್ತಿಯೂ ಸಮಿತಿಯಲ್ಲಿ ಇರುತ್ತಿದ್ದರು. ಹೀಗಾಗಿ ಸಮಿತಿಯ ಶಿಫಾರಸು ಪಕ್ಷಾತೀತವಾಗುವ ಸಾಧ್ಯತೆ ಇತ್ತು
- ಈಗ ಸರ್ಕಾರ ತರಲು ಹೊರಟಿರುವ ಕಾನೂನಿನ ಪ್ರಕಾರ ಸಮಿತಿಯಲ್ಲಿ ಸರ್ಕಾರದ ಪರವಾಗಿ ಇಬ್ಬರು ಸದಸ್ಯರು ಇರಲು ಅವಕಾಶವಿದೆ. ವಿರೋಧ ಪಕ್ಷದ ಪರವಾಗಿ ಒಬ್ಬರಷ್ಟೇ ಇದ್ದು, ಸಮಿತಿಯ ನಿರ್ಧಾರವು ಸರ್ಕಾರದ ಪರವಾಗಿಯೇ ಆಗುವ ಸಾಧ್ಯತೆ ಹೆಚ್ಚು. ವಿರೋಧ ಪಕ್ಷದ ನಾಯಕನ ಅಭಿಪ್ರಾಯಕ್ಕೆ ಮನ್ನಣೆ ದೊರೆಯದೇ ಹೋಗುತ್ತದೆ

ಶೋಧ ಸಮಿತಿಯ ಶಿಫಾರಸು ತಿರಸ್ಕರಿಸುವ ಅಧಿಕಾರ ಆಯ್ಕೆ ಸಮಿತಿಗೆ

ಚುನಾವಣಾ ಆಯುಕ್ತರು ಮತ್ತು ಮುಖ್ಯ ಚುನಾವಣಾ ಆಯುಕ್ತರ ನೇಮಕಾತಿಗಾಗಿ ಐವರನ್ನು ಶಿಫಾರಸು ಮಾಡುವ ಅಧಿಕಾರವನ್ನು ಶೋಧ ಸಮಿತಿಗೆ ಈ ಮಸೂದೆ ನೀಡುತ್ತದೆ. ಮಸೂದೆಯ 6ನೇ ಸೆಕ್ಷನ್‌ನಲ್ಲಿ ಈ ಅಧಿಕಾರಗಳನ್ನು ವಿವರಿಸಲಾಗಿದೆ. ಕೇಂದ್ರ ಸಂಪುಟ ಕಾರ್ಯದರ್ಶಿ ನೇತೃತ್ವದ ಸಮಿತಿಯು ಇದಾಗಿದ್ದು, ಭಾರತ ಸರ್ಕಾರದ ಕಾರ್ಯದರ್ಶಿ ರ‍್ಯಾಂಕ್‌ನ ಇಬ್ಬರು ಅಧಿಕಾರಿಗಳು ಈ ಸಮಿತಿಯ ಸದ್ಯಸರಾಗಿರುತ್ತಾರೆ.

ಚುನಾವಣಾ ಕರ್ತವ್ಯಗಳ ಬಗ್ಗೆ ಮತ್ತು ಚುನಾವಣೆಗಳನ್ನು ಆಯೋಜಿಸುವ ಬಗ್ಗೆ ಅರಿವು ಮತ್ತು ಅನುಭವ ಇರುವ ಐವರು ನಿವೃತ್ತ ಅಧಿಕಾರಿಗಳನ್ನು ಈ ಶೋಧ ಸಮಿತಿಯು ಶಿಫಾರಸು ಮಾಡುತ್ತದೆ. ಶೋಧ ಸಮಿತಿಯು ಶಿಫಾರಸು ಮಾಡಿದ ಹೆಸರುಗಳನ್ನು ಪ್ರಧಾನಿ ನೇತೃತ್ವದ ಆಯ್ಕೆ ಸಮಿತಿಯು ಪರಿಶೀಲಿಸುತ್ತದೆ. ಆ ಹೆಸರುಗಳಲ್ಲಿ ಸೂಕ್ತ ಎನಿಸಿದವರನ್ನು ಸಮಿತಿಯು ಆಯ್ಕೆ ಮಾಡುತ್ತದೆ.

ಆದರೆ, ಶೋಧ ಸಮಿತಿಗಿಂತಲೂ ಹೆಚ್ಚಿನ ಅಧಿಕಾರವನ್ನು ಈ ಮಸೂದೆಯ 8(2)ನೇ ಸೆಕ್ಷನ್ ಆಯ್ಕೆ ಸಮಿತಿಗೆ ನೀಡುತ್ತದೆ. ಶೋಧ ಸಮಿತಿ ಶಿಫಾರಸು ಮಾಡಿದ ವ್ಯಕ್ತಿಗಳನ್ನು ತಿರಸ್ಕರಿಸಿ, ಬೇರೆ ಯಾವುದೇ ವ್ಯಕ್ತಿಯನ್ನು ಚುನಾವಣಾ ಆಯುಕ್ತ ಮತ್ತು ಮುಖ್ಯ ಚುನಾವಣಾ ಆಯುಕ್ತರನ್ನಾಗಿ ನೇಮಕ ಮಾಡಿ ಎಂದು ಶಿಫಾರಸು ಮಾಡಬಹುದಾಗಿದೆ. ಶೋಧ ಸಮಿತಿಯ ಎಲ್ಲಾ ಅಧಿಕಾರ, ಶ್ರಮ ಮತ್ತು ಶಿಫಾರಸ್ಸಿಗೆ ಯಾವುದೇ ಮಾನ್ಯತೆ ಇಲ್ಲದಂತೆ ಮಾಡುವ ಅಧಿಕಾರವನ್ನು ಈ ಸೆಕ್ಷನ್, ಆಯ್ಕೆ ಸಮಿತಿಗೆ ನೀಡುತ್ತದೆ.


ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರ ಹುದ್ದೆಗೆ ಅರ್ಹತೆಗಳೇನು, ಆಯ್ಕೆ ಮತ್ತು ನೇಮಕಾತಿ ಪ್ರಕ್ರಿಯೆ ಏನು ಎಂಬುದನ್ನು ಈ ಮಸೂದೆಯಲ್ಲಿ ಸ್ಪಷ್ಟಪಡಿಸಿಲ್ಲ. ಬದಲಿಗೆ 'ಇಂತಹ ಪ್ರಕ್ರಿಯೆಗಳನ್ನು ಆಯ್ಕೆ ಸಮಿತಿಯೇ ರೂಪಿಸಿಕೊಳ್ಳಬಹುದು' ಎಂದು ಮಸೂದೆಯ 8(1)ನೇ ಸೆಕ್ಷನ್‌ನಲ್ಲಿ ಹೇಳಲಾಗಿದೆ. ಇದು ಸಹ ಕೇಂದ್ರ ಸರ್ಕಾರಕ್ಕೆ ಹೆಚ್ಚಿನ ಅಧಿಕಾರ ನೀಡುತ್ತದೆ.

'ಪ್ರಧಾನಿ ವಿರುದ್ಧವೂ ಕ್ರಮ ತೆಗೆದುಕೊಳ್ಳುವ ಆಯುಕ್ತ ಬೇಕು'

'ಚುನಾವಣೆಯ ಪರಿಶುದ್ಧತೆ'ಯನ್ನು ಕಾಪಾಡಿಕೊಳ್ಳುವ ಸಲುವಾಗಿ, ಮುಖ್ಯ ಚುನಾವಣಾ ಆಯುಕ್ತರ ಹಾಗೂ ಚುನಾವಣಾ ಆಯುಕ್ತರ ನೇಮಕಕ್ಕೆ ಸಮಿತಿ ರಚಿಸಬೇಕು' ಎಂದು ಸುಪ್ರೀಂ ಕೋರ್ಟ್ ಮಾರ್ಚ್ 2ರಂದು ತೀರ್ಪು ನೀಡಿತ್ತು. ನ್ಯಾಯಾಮೂರ್ತಿ ಕೆ.ಎಂ. ಜೋಸೆಫ್ ನೇತೃತ್ವದ ಐವರು ನ್ಯಾಯಾಮೂರ್ತಿಗಳ ಸಂವಿಧಾನ ಪೀಠ ಇಂಥ ದೂರಗಾಮಿ ಪರಿಣಾಮ ಹೊಂದಿರುವ ತೀರ್ಪು ನೀಡಿತ್ತು.

'ಚುನಾವಣೆಯಲ್ಲಿ ಪರಿಶುದ್ಧತೆಯನ್ನು ಕಾಪಾಡಿಕೊಳ್ಳದಿದ್ದರೆ, ಅದು ಗಂಭೀರ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ. ಹಲವು ವರ್ಷಗಳಿಂದ ಚುನಾವಣಾ ಪ್ರಕ್ರಿಯೆಯು ನಿರಂತರವಾಗಿ ದುರುಪಯೋಗ ಆಗುತ್ತಿತ್ತು, ಇದು ಪ್ರಜಾಪ್ರಭುತ್ವವನ್ನು ಸಮಾಧಿಯತ್ತ ಸಾಗಿಸುವ ದಾರಿಯಾಗಿದೆ' ಎಂದೂ ಹೇಳಿತ್ತು. ಈ ಅರ್ಜಿಯ ವಿಚಾರಣೆ ವೇಳೆ ಸಂವಿಧಾನ ಪೀಠವು ಹೇಳಿದ್ದ ಮಾತುಗಳಿವು...

- ಪ್ರಧಾನಿ ವಿರುದ್ಧ ದೂರು ಬಂದರೆ, ಅವರ ವಿರುದ್ಧವೂ ಕ್ರಮ ತೆಗೆದುಕೊಳ್ಳುವಂತಹ ಮುಖ್ಯ ಚುನಾವಣಾ ಆಯುಕ್ತರ ಅಗತ್ಯವಿದೆ
- ಮುಖ್ಯ ಚುನಾವಣಾ ಆಯುಕ್ತರ ನೇಮಕಕ್ಕೆ ಈಗ ಇರುವ ವ್ಯವಸ್ಥೆ ಅಡಿಯಲ್ಲಿ, ಕೇಂದ್ರದಲ್ಲಿ ಅಧಿಕಾರದಲ್ಲಿರುವ ಪಕ್ಷಗಳು 'ಹೌದಪ್ಪ' ಅಧಿಕಾರಿಗಳನ್ನೇ ಆಯುಕ್ತರಾಗಿ ನೇಮಕ ಮಾಡುತ್ತವೆ. ಅಂತಹವರು ಪ್ರಧಾನಿ ವಿರುದ್ಧ ಕ್ರಮ ತೆಗೆದುಕೊಳ್ಳುತ್ತಾರೆಯೇ? ಹೀಗಾಗಿ ಪ್ರಬಲ ಚುನಾವಣಾ ಆಯುಕ್ತರ ಅಗತ್ಯವಿದೆ
- ಪಕ್ಷಗಳು ಅವುಗಳ ಅಭ್ಯರ್ಥಿಗಳು ಮತ್ತು ಬಹುಮಟ್ಟಿಗೆ ಪ್ರಜಾಪ್ರಭುತ್ವದ ವಿಧಿಯು ಚುನಾವಣಾ ಆಯೋಗದ ಕೈಯಲ್ಲಿಯೇ ಇದೆ. ಆಯೋಗಕ್ಕೆ ನೆರವಾಗಲು ಹಲವು ಅಧಿಕಾರಿಗಳು ಇರಬಹುದು. ಆದರೆ, ಮುಖ್ಯವಾದ ನಿರ್ಧಾರಗಳನ್ನು ಆಯೋಗದ ಮುಖ್ಯಸ್ಥನ ಸ್ಥಾನದಲ್ಲಿ ಇರುವವರೇ ತೆಗೆದುಕೊಳ್ಳುತ್ತಾರೆ. ನಿರ್ಧಾರಗಳ ಹೊಣೆಗಾರಿಕೆಯು ಮುಖ್ಯ ಚುನಾವಣಾ ಆಯುಕ್ತ ಮತ್ತು ಚುನಾವಣಾ ಆಯುಕ್ತರದ್ದೇ ಆಗಿರುತ್ತದೆ
- ಕಾರ್ಯಾಂಗದ ಯಾವುದೇ ರೀತಿಯ ಹಸ್ತಕ್ಷೇಪಕ್ಕೆ ಆಯೋಗವು ಮಣಿಯದೆಯೇ ಕೆಲಸ ಮಾಡಬೇಕು. ಪ್ರಜಾಪ್ರಭುತ್ವದ ನೆಲೆಗಟ್ಟೇ ಆಗಿರುವ ಚುನಾವಣೆಯನ್ನು ಆಯೋಗವು ಮುಕ್ತ ಮತ್ತು ನ್ಯಾಯಸಮ್ಮತವಾಗಿ ನಡೆಸದೇ ಇದ್ದರೆ ಕಾನೂನುಸಮ್ಮತ ಆಳ್ವಿಕೆಯೇ ಸಾಧ್ಯವಾಗುವುದಿಲ್ಲ
- 2004ರ ನಂತರ ಯಾವ ಮುಖ್ಯ ಚುನಾವಣಾ ಆಯುಕ್ತರೂ ಆರು ವರ್ಷಗಳ ಪೂರ್ಣ ಅವಧಿಯವರೆಗೆ ಅಧಿಕಾರದಲ್ಲಿ ಇರಲಿಲ್ಲ. ಯುಪಿಎ ಅಧಿಕಾರದ 10 ವರ್ಷಗಳ ಅವಧಿಯಲ್ಲಿ ಆರು ಮಂದಿ ಮುಖ್ಯ ಚುನಾವಣಾ ಆಯುಕ್ತರು ಬದಲಾಗಿದ್ದಾರೆ. ಎನ್‌ಡಿಎ ಅವಧಿಯ ಎಂಟು ವರ್ಷಗಳಲ್ಲಿ ಎಂಟು ಮಂದಿ ಬದಲಾಗಿದ್ದಾರೆ
- ಅಧಿಕಾರದಲ್ಲಿರುವ ಎಲ್ಲಾ ಪಕ್ಷಗಳೂ ನಿವೃತ್ತಿ ಅಂಚಿನಲ್ಲಿರುವ, ಹೆಚ್ಚು ಅಧಿಕಾರದ ಅವಧಿ ದೊರೆಯದೇ ಇರುವವರನ್ನೇ ಈ ಹುದ್ದೆಗೆ ನೇಮಕ ಮಾಡಿವೆ
- ಮುಖ್ಯ ಚುನಾವಣಾ ಆಯುಕ್ತರಾಗಿದ್ದ ಟಿ.ಎನ್.ಶೇಷನ್ (1990ರ ಡಿಸೆಂಬರ್‌ನಿಂದ 1996ರ ಡಿಸೆಂಬರ್‌ವರೆಗೆ ಈ ಹುದ್ದೆಯಲ್ಲಿದ್ದರು) ಅವರಂತಹ ಪ್ರಬಲ ವ್ಯಕ್ತಿ ಈ ಹುದ್ದೆಗೆ ಬರಬೇಕು. ಸಮರ್ಥರ ಜತೆಗೆ ಪ್ರಬಲ ವ್ಯಕ್ತಿತ್ವ ಇರುವವರು ಮುಖ್ಯ ಚುನಾವಣಾ ಆಯುಕ್ತರಾಗುವ ಅಗತ್ಯವಿದೆ
- ಮುಖ್ಯ ಚುನಾವಣಾ ಆಯುಕ್ತರಾಗಿ ನೇಮಕವಾಗುವವರು ರಾಜಕೀಯ ಪ್ರಭಾವಗಳಿಂದ ಹೊರತಾಗಿರಬೇಕು ಮತ್ತು ಸ್ವತಂತ್ರವಾಗಿರಬೇಕು. ಪ್ರಧಾನಿ ವಿರುದ್ಧ ಆರೋಪಗಳು ಬಂದರೆ, ಆಯೋಗವು ಕ್ರಮ ತೆಗೆದುಕೊಳ್ಳುವಂತಿರಬೇಕು. ಆದರೆ ಆಯೋಗವು ಯಾವುದೇ ಕ್ರಮ ತೆಗೆದುಕೊಳ್ಳದ ದುರ್ಬಲ ಸಂಸ್ಥೆಯಂತಿದೆ





ಟಿ.ಎನ್.ಶೇಷನ್



'ಆಯುಕ್ತರ ನೇಮಕ: ಯಾಕಿಷ್ಟು ಆತುರ?'

1985 ಬ್ಯಾಚ್‌ನ ಐಎಎಸ್ ಅಧಿಕಾರಿ ಅರುಣ್ ಗೋಯಲ್ ಅವರು 2022ರ ನವೆಂಬರ್ 18ರಂದು ಸ್ವಯಂ ನಿವೃತ್ತಿ ಪಡೆದಿದ್ದರು. ಮರು ದಿನವೇ (ನ. 19) ಅರುಣ್ ಅವರು ಚನಾವಣಾ ಆಯುಕ್ತರಾಗಿ ನೇಮಕಗೊಳ್ಳುತ್ತಾರೆ. ಈ ಬಗ್ಗೆ ಅಂದು ನಡೆದ ವಿಚಾರಣೆಯಲ್ಲಿ ಸುಪ್ರೀಂ ಕೋರ್ಟ್ ಕೇಂದ್ರ ಸರ್ಕಾರಕ್ಕೆ ತೀಕ್ಷ್ಣ ಪ್ರಶ್ನೆಗಳನ್ನು ಕೇಳಿತ್ತು.


'24 ಗಂಟೆಗಳ ಒಳಗೆ ಮಿಂಚಿನ ವೇಗದಲ್ಲಿ ಕಡತಗಳು ವಿಲೇವಾರಿಯಾಗಿವೆ. ಮೇ ತಿಂಗಳಿನಿಂದಲೂ ಚುನಾವಣಾ ಆಯುಕ್ತರ ಹುದ್ದೆಯು ಖಾಲಿ ಇತ್ತು. ಸೂಪರ್‌ಫಾಸ್ಟ್ ರೀತಿಯಲ್ಲಿ, ಇಷ್ಟೊಂದು ಕಡಿಮೆ ಅವಧಿಯಲ್ಲಿ ಇಷ್ಟೆಲ್ಲಾ ಪ್ರಕ್ರಿಯೆ ನಡೆಸಲು ಕೇಂದ್ರ ಸರ್ಕಾರಕ್ಕೆ ಯಾವ ಕಾರಣ ಇತ್ತು' ಎಂದು ಕೇಳಿತ್ತು.

ಮುಖ್ಯ ಚುನಾವಣಾ ಆಯುಕ್ತ ರಾಜೀವ್ ಕುಮಾರ್ ಅವರ ಕಾರ್ಯಾವಧಿಯು 2025ರ ಫೆಬ್ರುವರಿಯಲ್ಲಿ ಮುಗಿಯಲಿದೆ. ರಾಜೀವ್ ಕುಮಾರ್ ನಂತರ ಅರುಣ್ ಗೋಯಲ್ ಅವರು ಮುಖ್ಯ ಚುನಾವಣಾ ಆಯುಕ್ತರಾಗಲಿದ್ದಾರೆ.

ಆಧಾರ: ಮುಖ್ಯ ಚುನಾವಣಾ ಆಯುಕ್ತರು ಮತ್ತು ಇತರ ಚುನಾವಣಾ ಆಯುಕ್ತರು (ನೇಮಕ, ಕರ್ತವ್ಯದ ನಿಬಂಧನೆಗಳು ಮತ್ತು ಅಧಿಕಾರಾವಧಿ) ಮಸೂದೆ–2023, ಪಿಟಿಐ, ಸುಪ್ರೀಂ ಕೋರ್ಟ್ ತೀರ್ಪು, ಸಂವಿಧಾನದ 324(2)ನೇ ವಿಧಿ

ನಾವು ನೋಡಿದ ಸಿನಿಮಾ

ರಜನಿ ಠುಸ್ ಪಟಾಕಿ



'ಜೈಲರ್' ಸಿನಿಮಾದಲ್ಲಿ ರಜನೀಕಾಂತ್

ಕೈಗೆ ಬಂದರೆ ಕನ್ನಡಕ, ಎದುರಾಳಿಗೆ ನಡುಕ. ಮೈತುಂಬಾ ಡಿಯೋಡರೆಂಟ್ ಪೂಸಿಕೊಂಡು ಹೊರಬಿದ್ದರೆ ಶಸ್ತ್ರಾಸ್ತ್ರ-ಗಳಿಗೆ ರಕ್ತತರ್ಪಣ ಖರೆ. ರಜನೀಕಾಂತ್ ಮಾತು ಕಡಿಮೆ, ಚಟುವಟಿಕೆ ಜಾಸ್ತಿ. ಅದಕ್ಕಿಂತ ಹೆಚ್ಚಾಗಿ ಹಿನ್ನೆಲೆ ಸಂಗೀತಕ್ಕೆ ಕೆಲಸವೋ ಕೆಲಸ.

ನಿರ್ದೇಶಕ ನೆಲ್ಸನ್ ವಿಡಿಯೋಗೇಮ್ ಪ್ರೇಮಿ ಇರಬಹುದು. ಹೀಗಾಗಿಯೇ ಅವರು ಏನೋ ಮಾಡಲು ಹೋಗಿ ಇನ್ನೇನೋ ಮಾಡುತ್ತಾರೆ. ಮಗನ ಕಳೆದುಕೊಂಡ ಒಂದು ಕಾಲದ ಜೈಲರ್ ಈ ಕಾಲದಲ್ಲೂ ಎಂಥ ಪಂಟರ್ ಎನ್ನುವುದು ಚಿತ್ರಕಥಾಹಂದರ. ರಜನೀಕಾಂತ್ ಸೂಪರ್‌ಸ್ಟಾರ್ ಮೆರುಗನ್ನು ತಿಕ್ಕುವ ಭರದಲ್ಲಿ ಚಿತ್ರಕಥೆಯ ಲಗಾಮನ್ನು ನಿರ್ದೇಶಕರು ಬಿಟ್ಟುಬಿಡುತ್ತಾರೆ. ಖಳರೆಲ್ಲ ಇದ್ದಕ್ಕಿದ್ದಹಾಗೆ ಬಫೂನುಗಳಾಗುತ್ತಾರೆ. ಇದನ್ನು 'ಡಾರ್ಕ್ ಕಾಮಿಡಿ' ಎಂದು ಜೀರ್ಣಿಸಿಕೊಳ್ಳಲೂ ಆಗದು.

ಚಿತ್ರದ ಪ್ರವೇಶಿಕೆ ಕುತೂಹಲ ಮೂಡಿಸುವಂತಿದೆ. ಮೊಮ್ಮಗನ ಜತೆ ತಣ್ಣಗೆ ಆಡುತ್ತಾ ಇರುವ ಅಜ್ಜ, ಅವನ ಪ್ರಾಮಾಣಿಕ ಪೊಲೀಸ್ ಅಧಿಕಾರಿ ಮಗ, ಶಾಂತಿನಿವಾಸದಂತೆ ಭಾಸವಾಗುವ ಮನೆ... ಇವನ್ನೆಲ್ಲ ತೋರುವ ಕಥೆಗೆ ಥಟ್ಟನೆ ಒಂದು ತಿರುವು ದೊರೆಯುತ್ತದೆ. ಅಜ್ಜ, ಜೈಲರ್ ಆಗಿದ್ದಾಗಿನ ತನ್ನ ರೌದ್ರರೂಪ ತಾಳುತ್ತಾನೆ. ಮಗನ ಇಲ್ಲವಾಗಿಸಿದ-ವರ ಸದೆಬಡಿಯುವ ಸಂಕಲ್ಪ. ತೆರೆ ಮೇಲೆಲ್ಲ ರಕ್ತದೋಕುಳಿ.

ಇದೊಂಥರ ಕಳ್ಳ–ಪೊಲೀಸ್ ಆಟ. ಅಲ್ಲಲ್ಲಿ ಮಜಾ, ಕಚಗುಳಿ ಇದ್ದರೂ ದ್ವಿತೀಯಾರ್ಧದಲ್ಲಿ ಕೇಸರೀಭಾತ್‌ನಲ್ಲಿ ಪದೇ ಪದೇ ಉಪ್ಪು ಸಿಕ್ಕಂತಾಗುತ್ತದೆ. ಪ್ರತಿಷ್ಠಿತ ದೇವಸ್ಥಾನವೊಂದರಿಂದ ಕಿರೀಟ ಕದಿಯುವ ಪ್ರಸಂಗವಂತೂ ಅತಿ ಬಾಲಿಶ.

ರಜನೀಕಾಂತ್ ತಮ್ಮ ಸ್ಟೈಲಿಷ್ ಆದ ಆಂಗಿಕ ಚಲನೆಗಳನ್ನು ಆಗೀಗ ತೋರುತ್ತಿರುತ್ತಾರೆ. ಅವರು ಸುಮ್ಮನೆ ಕೂತಿದ್ದರೂ ಯಾರು ಯಾರೋ ಎಲ್ಲಿಂದಲೋ ಖಳರನ್ನು ಇಲ್ಲವಾಗಿಸುವ ತಂತ್ರ ಒಂದು ಮಟ್ಟಕ್ಕೆ ಸರಿ. ಆದರೆ, ಅದೇ ಪುನರಾವರ್ತಿತವಾದಾಗ ಸವಕಲೆನಿಸುತ್ತದೆ.

ಶಿವರಾಜ್‌ಕುಮಾರ್ ಸಣ್ಣ ಪಾತ್ರದಲ್ಲಿ ಚಪ್ಪಾಳೆ ಗಿಟ್ಟಿಸಿಕೊಳ್ಳುತ್ತಾರೆ. ಜಾಕಿ ಶ್ರಾಫ್, ಮೋಹನ್‌ಲಾಲ್, ಮಕರಂದ್ ದೇಶಪಾಂಡೆ ಇವರೆಲ್ಲ ಚಿತ್ರದಲ್ಲಿ ಇದ್ದಾರಷ್ಟೆ. ನಿರ್ದೇಶಕರಿಗೆ ಅವರ ಪಾತ್ರಗಳನ್ನು ದುಡಿಸಿಕೊಳ್ಳಲು ಕೂಡ ಸಾಧ್ಯವಾಗಿಲ್ಲ. ತೆಲುಗಿನ ಹಾಸ್ಯನಟ ಸುನಿಲ್ ಪಾತ್ರಪೋಷಣೆ ಕಾರ್ಟೂನಿಷ್ ಆಗಿದೆ. 'ಕಾವಾಲಯ್ಯ' ಹಾಡು ಬಿಟ್ಟರೆ ತಮನ್ನಾ ಇರುವಿಕೆಗೆ ಏನೇನೂ ಅರ್ಥವಿಲ್ಲ. ಸ್ತ್ರೀ ಪಾತ್ರಗಳು ಸಿನಿಮಾದಲ್ಲಿ ಇರಬೇಕೆಂದು ಇವೆಯಷ್ಟೆ. ಸ್ವರ ಸಂಯೋಜಕ ಅನಿರುದ್ಧ್ ರವಿಚಂದರ್ ಹಾಗೂ ಛಾಯಾ-ಚಿತ್ರಗ್ರಾಹಕ ವಿಜಯ್ ಕಾರ್ತಿಕ್ ಕಣ್ಣನ್ ಕೆಲಸಗಳ ರುಜು ಎದ್ದುಕಾಣುತ್ತದೆ.

ಚಿತ್ರಕಥೆಯಲ್ಲಿ ಸೇಡಿನ ಪ್ರಹಸನ ಹಾಗೂ ಅಂತ್ಯದಲ್ಲಿ ಒಂದು ಹೇರಿದಂತಹ ಸಸ್ಪೆನ್ಸ್ ಇದೆ. ಅದರ ಹೊರತಾಗಿ ಗಟ್ಟಿಯಾದ ಏನನ್ನೂ ಚಿತ್ರ ಧ್ವನಿಸುವುದಿಲ್ಲ. ಖಳನಾಯಕ ವಿನಾಯಕನ್ ಅಟ್ಟಹಾಸ, ವಿಲಕ್ಷಣ ವರ್ತನೆ ಕಾಡುತ್ತದಷ್ಟೆ.

- ವಿಶಾಖ ಎನ್.

ಜೈಲರ್

(ತಮಿಳಿನಿಂದ ಕನ್ನಡಕ್ಕೆ ಡಬ್ ಆದ ಆವೃತ್ತಿ)

- **ನಿರ್ಮಾಣ: ಸನ್ ಪಿಕ್ಚರ್ಸ್**
- **ನಿರ್ದೇಶನ: ನೆಲ್ಸನ್**
- **ತಾರಾಗಣ:** ರಜನೀಕಾಂತ್, ವಿನಾಯಕನ್, ರಮ್ಯಾಕೃಷ್ಣ, ಶಿವರಾಜ್‌ಕುಮಾರ್, ಜಾಕಿ ಶ್ರಾಫ್, ಮೋಹನ್‌ಲಾಲ್, ಸುನಿಲ್.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ

9606038256

'ಜಮ್ಮು ಮತ್ತು ಕಾಶ್ಮೀರಕ್ಕೆ ಸಂವಿಧಾನದ 370ನೇ ವಿಧಿಯ ಅಡಿಯಲ್ಲಿ ವಿಶೇಷ ಸ್ಥಾನ ನೀಡಿದ್ದರಿಂದ, ಇಡೀ ಭಾರತಕ್ಕೆ ಅನ್ವಯವಾಗುತ್ತಿದ್ದ ಹಲವು ಕಾನೂನುಗಳು ಅಲ್ಲಿ ಅನ್ವಯವಾಗುತ್ತಿರಲಿಲ್ಲ. ಇದರಿಂದ ಜಮ್ಮು ಮತ್ತು ಕಾಶ್ಮೀರವು ಅಭಿವೃದ್ಧಿಯಲ್ಲಿ ತೀರಾ ಹಿಂದುಳಿದಿತ್ತು. ಆದರೆ ಈಗ ಜಮ್ಮು–ಕಾಶ್ಮೀರ ಅಭಿವೃದ್ಧಿಯಾಗುತ್ತಿದೆ' ಎಂದು ಹೇಳುವ ಪೋಸ್ಟ್‌ಗಳು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿವೆ. 2019ಕ್ಕೂ ಮುನ್ನ ಯಾವ ಹಕ್ಕುಗಳು ಮತ್ತು ಕರ್ತವ್ಯಗಳಿಂದ ಜಮ್ಮು ಮತ್ತು ಕಾಶ್ಮೀರದ ಜನತೆ ವಂಚಿತರಾಗಿದ್ದರು ಎಂಬುದನ್ನು ವಿವರಿಸುವ ಪಟ್ಟಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ.

- ಜಮ್ಮು– ಮತ್ತು ಕಾಶ್ಮೀರದಲ್ಲಿ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಅನ್ವಯವಾಗುತ್ತಿರಲಿಲ್ಲ. ಇದರಿಂದ ಅಲ್ಲಿನ ಮಕ್ಕಳಿಗೆ ಶಿಕ್ಷಣ ದೊರೆಯುತ್ತಿಲ್ಲ. ಶಾಲೆ ಮತ್ತು ಕಾಲೇಜಿಗೆ ಹೋಗದೇ ಇರುವುದರಿಂದ ಅವರು ಕಲ್ಲು ತೂರಾಟದಲ್ಲಿ ತೊಡಗಿದ್ದಾರೆ. ವಿಶೇಷ ಸ್ಥಾನ ತೆಗೆದುಹಾಕಿದ ನಂತರ ಕಡ್ಡಾಯ ಶಿಕ್ಷಣದ ಹಕ್ಕು ಅನ್ವಯವಾಗುತ್ತಿದೆ
- ಜಮ್ಮು–ಕಾಶ್ಮೀರದ ಬುಡಕಟ್ಟು ಜನರ ಹಕ್ಕುಗಳ ರಕ್ಷಣೆ ಮತ್ತು ಅಭಿವೃದ್ಧಿಗೆ ಯಾವುದೇ ಕಾನೂನು ಇರಲಿಲ್ಲ. ಭಾರತದಾದ್ಯಂತ ಜಾರಿಯಲ್ಲಿರುವ ಕಾನೂನುಗಳು ಅಲ್ಲಿ ಅನ್ವಯವಾಗದೇ ಇದ್ದುದ್ದರಿಂದ ಬುಡಕಟ್ಟು ಜನರು ಅಭಿವೃದ್ಧಿಯಲ್ಲಿ ಹಿಂದುಳಿದಿದ್ದಾರೆ. ವಿಶೇಷ ಸ್ಥಾನ ತೆಗೆದುಹಾಕಿದ ನಂತರ ಬುಡಕಟ್ಟು ಜನರ ಅಭಿವೃದ್ಧಿ ಸಾಧ್ಯವಾಗುತ್ತಿದೆ
- ಬಾಲ್ಯ ವಿವಾಹ ಕಾಯ್ದೆಯು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುತ್ತಿರಲಿಲ್ಲ. ಹೀಗಾಗಿ ಅಲ್ಲಿ ಬಾಲ್ಯ ವಿವಾಹ ಅವ್ಯಾಹತವಾಗಿ ನಡೆಯುತ್ತಿತ್ತು. ವಿಶೇಷ ಸ್ಥಾನ ತೆಗೆದುಹಾಕಿದ ನಂತರ ಬಾಲ್ಯ ವಿವಾಹ ಕಾಯ್ದೆ ಅನ್ವಯವಾಗುತ್ತಿದ್ದು, ಬಾಲ್ಯ ವಿವಾಹಕ್ಕೆ ತಡೆಬಿದ್ದಿದೆ
- ಜಮ್ಮು–ಕಾಶ್ಮೀರಕ್ಕೆ ಪಂಚಾಯಿತಿ ರಾಜ್ ಕಾಯ್ದೆ ಅನ್ವಯವಾಗುತ್ತಿರಲಿಲ್ಲ. ಹೀಗಾಗಿ ಇಲ್ಲಿಯವರೆಗೆ ಅಲ್ಲಿ ಪಂಚಾಯಿತಿ ಚುನಾವಣೆ ನಡೆಯುತ್ತಿರಲಿಲ್ಲ. ಚುನಾವಣೆ ನಡೆಯದೇ ಇರುವ ಕಾರಣಕ್ಕೆ, ರಾಜ್ಯದಲ್ಲಿ ಗ್ರಾಮಗಳ ಅಭಿವೃದ್ಧಿ ಸಾಧ್ಯವಾಗಿರಲಿಲ್ಲ. ವಿಶೇಷ ಸ್ಥಾನ ತೆಗೆದುಹಾಕಿದ ನಂತರ ಪಂಚಾಯಿತಿಗೆ ಮೊದಲ ಬಾರಿ ಚುನಾವಣೆ ನಡೆಸಲು ಸಾಧ್ಯವಾಗಿದೆ

2019ರ ಆಗಸ್ಟ್ 6ರಂದು 370ನೇ ವಿಧಿಗೆ ಸಂಬಂಧಿಸಿದಂತೆ ಸಾಂವಿಧಾನಿಕ ಆದೇಶವನ್ನು ಲೋಕಸಭೆಯಲ್ಲಿ ಮಂಡಿಸಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ, 'ಶಿಕ್ಷಣದ ಹಕ್ಕು, ಕ್ಷೇತ್ರ ಮರುವಿಂಗಡಣೆ ಕಾಯ್ದೆ, ಬಾಲ್ಯ ವಿವಾಹ ಕಾಯ್ದೆ, ಬುಡಕಟ್ಟು ಸಬಲೀಕರಣ ಕಾನೂನುಗಳು ಜಮ್ಮು ಮತ್ತು ಕಾಶ್ಮೀರಕ್ಕೆ ಅನ್ವಯವಾಗುವುದಿಲ್ಲ' ಎಂದು ಹೇಳಿದ್ದರು.

ಆದರೆ ಇವೆಲ್ಲವೂ ತಿರುಚಲಾದ ಮತ್ತು ತಪ್ಪು ಮಾಹಿತಿ.

ಇಂತಹ ಪೋಸ್ಟ್‌ಗಳಲ್ಲಿ ಉಲ್ಲೇಖಿಸಿರುವ ವಿಷಯಗಳ ಸತ್ಯಾಸತ್ಯತೆ ಪರಿಶೀಲಿಸಲು 'ಪ್ರಜಾವಾಣಿ' ಮುಂದಾಯಿತು. ಮೊದಲಿಗೆ 2019ರ ಆಗಸ್ಟ್ 6ರಂದು ಲೋಕಸಭೆಯಲ್ಲಿ ಅಮಿತ್ ಶಾ ಅವರು ಮಾಡಿದ್ದ ಭಾಷಣವನ್ನು ಪರಿಶೀಲಿಸಲಾಯಿತು. ಪಿಐಬಿಯು ಅದೇ ದಿನ ಹೊರಡಿಸಿರುವ ಪತ್ರಿಕಾ ಪ್ರಕಟಣೆಯಲ್ಲಿ ಶಾ ಅವರ ಭಾಷಣದ ಉಲ್ಲೇಖವಿದೆ. ಶಾ ಅವರದ್ದೆಂದು ಸಾಮಾಜಿಕ ಜಾಲತಾಣಗಳಲ್ಲಿ ಹೇಳಲಾದ ಮಾತುಗಳೆಲ್ಲವೂ ಪತ್ರಿಕಾ ಪ್ರಕಟಣೆಯಲ್ಲಿ ಇದ್ದವು. ಜಮ್ಮು–ಕಾಶ್ಮೀರದ ವಿಶೇಷ ಸ್ಥಾನ ರದ್ದಾಗುವವರೆಗೆ ಭಾರತದ ಎಲ್ಲಾ ಕಾಯ್ದೆಗಳು ಅಲ್ಲಿಗೆ ಅನ್ವಯವಾಗುತ್ತಿರಲಿಲ್ಲ. ಆದರೆ, ಜಮ್ಮು–ಕಾಶ್ಮೀರವು ತನ್ನದೇ ಸಂವಿಧಾನ ಹೊಂದಿತ್ತು ಮತ್ತು ಭಾರತದಲ್ಲಿ ಜಾರಿಯಾಗುವ ಬಹುತೇಕ ಕಾಯ್ದೆಗಳನ್ನು ಪ್ರತ್ಯೇಕವಾಗಿ ರಚಿಸಿಕೊಳ್ಳುತ್ತಿತ್ತು. ಶಿಕ್ಷಣ, ಕ್ಷೇತ್ರ ಮರುವಿಂಗಡಣೆ, ಬುಡಕಟ್ಟು ಜನರ ಸಬಲೀಕರಣ, ಬಾಲ್ಯ ವಿವಾಹ ವಿಚಾರಗಳಲ್ಲಿ ಜಮ್ಮು–ಕಾಶ್ಮೀರದಲ್ಲಿ ಪ್ರತ್ಯೇಕ ಕಾನೂನುಗಳು ಜಾರಿಯಲ್ಲಿದ್ದವು. ಹೀಗಾಗಿ ಶಾ ಅವರು ಹೇಳಿದ್ದಂತೆ, ಆ ಯಾವ ಹಕ್ಕುಗಳೂ ಜಮ್ಮು–ಕಾಶ್ಮೀರದಲ್ಲಿ ಲಭ್ಯವಿರಲಿಲ್ಲ ಎಂಬುದು ಸುಳ್ಳು.

- ಜಮ್ಮು ಮತ್ತು ಕಾಶ್ಮೀರದ ಸಂವಿಧಾನದ 20ನೇ ಸೆಕ್ಷನ್‌ನಲ್ಲಿ ಕಡ್ಡಾಯ ಮತ್ತು ಉಚಿತ ಶಿಕ್ಷಣಕ್ಕೆ ಆಸ್ಪದ ಮಾಡಿಕೊಡಲಾಗಿತ್ತು. 20(ಎ) ಸೆಕ್ಷನ್ ಅಡಿಯಲ್ಲಿ ರಾಜ್ಯದ ಪ್ರತಿಯೊಬ್ಬ ಶಾಶ್ವತ ನಿವಾಸಿಯೂ ವಿಶ್ವವಿದ್ಯಾಲಯ ಮಟ್ಟದ ಶಿಕ್ಷಣವನ್ನು ಕಡ್ಡಾಯವಾಗಿ ಮತ್ತು ಉಚಿತವಾಗಿ ಪಡೆಯಬೇಕು ಎಂದು ಹೇಳಲಾಗಿದೆ. ರಾಜ್ಯದಲ್ಲಿರುವ ಪ್ರತಿ ಮಗುವೂ 14 ವರ್ಷಗಳವರೆಗೆ ಕಡ್ಡಾಯ ಮತ್ತು ಉಚಿತ ಶಿಕ್ಷಣವನ್ನು ಪಡೆಯಬೇಕು ಎಂದು 20(ಬಿ) ಸೆಕ್ಷನ್ ಹೇಳುತ್ತದೆ
- ಜಮ್ಮು ಮತ್ತು ಕಾಶ್ಮೀರದಲ್ಲಿ ಬುಡಕಟ್ಟು ಸಮುದಾಯಗಳ ಅಭಿವೃದ್ಧಿಗಾಗಿ 1989ರಲ್ಲಿ 'ಜಮ್ಮು–ಕಾಶ್ಮೀರ ಪರಿಶಿಷ್ಟ ಬುಡಕಟ್ಟು ಆದೇಶ'ವನ್ನು ಜಾರಿಗೆ ತರಲಾಗಿತ್ತು. ಭಾರತದ ಇತರೆಡೆ ಅನ್ವಯವಾಗುತ್ತಿದ್ದ ಕಾನೂನಿನ ಅಡಿಯಲ್ಲೇ ಈ ಆದೇಶವನ್ನು ಜಾರಿಗೆ ತರಲಾಗಿತ್ತು
- ಬಾಲ್ಯವಿವಾಹವನ್ನು ತಡೆಯಲು 'ಜಮ್ಮು–ಕಾಶ್ಮೀರ ಶಿಶುವಿವಾಹ ತಡೆ ಕಾಯ್ದೆ–1985' ಅನ್ನು 1985ರಲ್ಲೇ ಜಾರಿಗೆ ತರಲಾಗಿತ್ತು. 2019ಕ್ಕೂ ಮುನ್ನ ಅಲ್ಲಿ ಬಾಲ್ಯವಿವಾಹಕ್ಕೆ ನಿಷೇಧ ಇರಲಿಲ್ಲ ಎಂಬುದು ಸುಳ್ಳು
- ಜಮ್ಮು–ಕಾಶ್ಮೀರ ಪಂಚಾಯಿತಿ ರಾಜ್ ಕಾಯ್ದೆಯನ್ನು 1989ರಲ್ಲಿ ಜಾರಿಗೆ ತರಲಾಗಿತ್ತು. ಆದರೆ, ಮೊದಲ ಪಂಚಾಯತಿ ಚುನಾವಣೆ ನಡೆದದ್ದು 2000ದಲ್ಲಿ. ಆನಂತರ ಹಲವು ಬಾರಿ ಚುನಾವಣೆ ನಡೆದಿದೆ. ಹಲವು ಚುನಾವಣೆಗಳ ಮಧ್ಯೆ ದೀರ್ಘಾವಧಿಯ ವಿಳಂಬವೂ ಆಗಿದೆ. 2018ರಲ್ಲೂ ಪಂಚಾಯಿತಿ ಚುನಾವಣೆ ನಡೆದಿತ್ತು. ಹೀಗಾಗಿ, 2019ಕ್ಕೂ ಮುನ್ನ ಚುನಾವಣೆಯೇ ನಡೆದಿರಲಿಲ್ಲ ಎಂಬುದು ಸುಳ್ಳು

ಗುಂಡಣ್ಣ



ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಶುಕ್ರವಾರ ಆಗಸ್ಟ್ 11, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ದಕ್ಷಿಣಾಯನ ವರ್ಷ ಋತು ತಿಥಿ: ಅಧಿಕ ಶ್ರಾವಣ ಕೃಷ್ಣ ಏಕಾದಶಿ ಅಹೋರಾತ್ರ ನಕ್ಷತ್ರ: ಮೃಗಶಿರಾ ಅಹೋರಾತ್ರ ಯೋಗ : ವ್ಯಾಘಾತ ಗಂ. 15-06 ಕರಣ: ಬವ ಗಂ. 17-46, ಕರ್ಕಾಟಕ ಮಾಸದ 25 ನೇ ದಿನ,
ಮಳೆನಕ್ಷತ್ರ: ಆಶ್ಲೇಷ 3. ರಾಹುಕಾಲ : ಬೆಳಿಗ್ಗೆ 10-30 - 12-00,
ಸೂರ್ಯೋದಯ : 06-21 ಸೂರ್ಯಾಸ್ತ : 06-51,
ಮುಸ್ಲಿಂ ದಿನಾಂಕ : 23 ಮೊಹರಮ್, ಅದೃಷ್ಟ ಸಂಖ್ಯೆ : 6, 5

ಮೇಷ: ಹೆಂಡತಿಗೋಸ್ಕರ ಅಥವಾ ಹೆಂಡತಿಯ ತವರು ಮನೆಗೋಸ್ಕರವಾಗಿ ಖರ್ಚು ಮಾಡಬೇಕಾದ ಪರಿಸ್ಥಿತಿ ಬರಬಹುದು. ಷೇರು ವ್ಯವಹಾರಗಳಿಂದ ನಿರೀಕ್ಷಿಸಿದ ಲಾಭ ಬರುವುದು. ಮಕ್ಕಳಿಗೆ ಜೀವನದ ಪಾಠ ಹೇಳುವಿರಿ.

ವೃಷಭ: ಜೀವನದಲ್ಲಿ ಅನಿರೀಕ್ಷಿತ ಬದಲಾವಣೆಗಳನ್ನು ಕಂಡುಕೊಳ್ಳುವ ಸ್ಥಿತಿ ಈ ದಿನ ಬರಲಿದೆ. ಹೊಸ ಮನೆಯನ್ನು ಭೋಗ್ಯಕ್ಕೆ ಕೊಡಲು ಮಾತುಕತೆ ನಡೆಯುವುದು. ವಿನೋದ ಸ್ವಭಾವ ಇತರರನ್ನು ಆಕರ್ಷಿಸುವುದು.

ಮಿಥುನ: ಪುರುಷ ಪ್ರಯತ್ನದ ಜೊತೆಯಲ್ಲಿ ದೇವರ ಅನುಗ್ರಹ ಯೋಜನೆಗೆ ಪುಷ್ಟಿ ಕೊಡುವುದು ಸಂತಸದ ವಿಚಾರ. ಗಮನಕ್ಕೆ ಬರುವ ತಪ್ಪುಗಳನ್ನು ಪುನ-ರಾವರ್ತನೆಯಾಗದಂತೆ ಗಮನಿಸಿ. ಸಾಲ ತೆಗೆದುಕೊಳ್ಳಬೇಡಿ.

ಕರ್ಕಾಟಕ: ಇಂಟೀರಿಯರ್ ಡೆಕೊರೇಟರ್ ಕೋರ್ಸ್ ಕಲಿಯುವಂತಹ ಆಸೆ ಹೊಂದಿದವರಿಗೆ ಶುಭ ಕಾಲ. ಸಂಬಂಧಗಳಿಗೆ ಅತಿಯಾಗಿ ಬೆಲೆ ಕೊಡುವ ನೀವು ಸಂಬಂಧಿಕರ ಮೊಸಳೆ ಕಣ್ಣೀರಿಗೆ ಮರುಳಾಗದಿರಿ.

ಸಿಂಹ: ಸಹೋದರಿಯ ಮದುವೆಯಂಥ ಸಂದರ್ಭಕ್ಕೆ ಆಪ್ತರೊಬ್ಬರು ನೆರವಿಗೆ ನಿಲ್ಲಲಿದ್ದಾರೆ. ವಿಚಾರಗಳನ್ನು ವಿವಾದಕ್ಕೊಳಗಾಗದಂತೆ ಅರ್ಥ ಮಾಡಿಸುವಲ್ಲಿ ಯಶಸ್ವಿಯಾಗುವಿರಿ. ಯೋಗಾಭ್ಯಾಸ ಮನಸ್ಸಿಗೆ ಹಿತವೆನಿಸುವುದು.

ಕನ್ಯಾ: ರಾಜಕೀಯ ವ್ಯಕ್ತಿಗಳಿಗೆ ಸ್ಥಾನ ಬಲಪಡಿಸುವ ಕಾರ್ಯದಲ್ಲಿ ಹಿರಿಯ ಅಧಿಕಾರಿಗಳಿಂದ ಉಪಯೋಗ ವಾಗಲಿದೆ. ಹೊಸ ಕೆಲಸ ಕಾರ್ಯಗಳ ಬಗ್ಗೆ ಮನೆಯವರೊಂದಿಗೆ ಸುದೀರ್ಘವಾದ ಮಾತುಕತೆ ನಡೆಸಿ.

ತುಲಾ: ಸಗಟು ಧಾನ್ಯ ವರ್ತಕರಿಗೆ ಈ ದಿನ ಜೋರಾದ ವಹಿವಾಟು ನಡೆದು ಲಾಭ ಬರುವುದು. ನಿಂತುಹೋದ ಕೆಲಸಗಳನ್ನು ಪುನಃ ಆರಂಭ ಮಾಡುವ ಬಗ್ಗೆ ಗಮನಹರಿಸಿ. ವಿಮಾ ಸಲಹೆಗಾರರು ಬಲವಂತ ಪಡಿಸಬೇಡಿ.

ವೃಶ್ಚಿಕ: ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಪುಣ್ಯದ ಕೆಲಸವೆಂದು ಭಾವಿಸಿ, ಹೊರತಾಗಿ ಪ್ರತಿಫಲವನ್ನು ಅಪೇಕ್ಷಿಸಬೇಡಿ. ನಿಮ್ಮ ಕ್ಷೇತ್ರದಲ್ಲಿ ಉಳಿ-ದುಕೊಳ್ಳಲೇಬೇಕಾದರೆ ಅವಿರತ ದುಡಿಮೆಯೊಂದೇ ಮಾರ್ಗ.

ಧನು: ಬಂಧುಗಳ ಮಾತು ಮನಸ್ಸನ್ನು ಗಾಯ ಮಾಡಲಿದೆ. ಅದರಿಂದಾಗಿ ಮನಸ್ಸು ನಿರಾಸಕ್ತಿಯ ಭಾವನೆಯಿಂದ ಕೂಡಿರುವಂತಾಗಲಿದೆ. ಕೆಲಸದ ಬಗ್ಗೆ ವಿಮರ್ಶಿಸಿ ನಂತರದಲ್ಲಿ ಕಾರ್ಯರೂಪಕ್ಕೆ ತನ್ನಿರಿ.

ಮಕರ: ಸರ್ಕಾರಿ ಇಲಾಖೆಯಲ್ಲಿ ಜೀವನ ನಡೆಸುತ್ತಿರುವವರಿಗೆ ಹಣದ ಆಸೆ ತೋರಿಸಿ ತಪ್ಪು ಕೆಲಸವನ್ನು ಮಾಡುವಂತೆ ಪ್ರಚೋದಿಸುವವರು ಎದುರಾಗಲಿ-ದ್ದಾರೆ. ಜನರ ಸಂಪರ್ಕ ಬೆಳೆಸಿಕೊಳ್ಳುವುದನ್ನು ಅಭ್ಯಾಸಮಾಡಿ.

ಕುಂಭ: ವಿವಾಹದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ವಿದ್ಯುತ್ ಉಪಕರಣಗಳ ಬಳಕೆಯಲ್ಲಿ ಜಾಗ್ರತೆ ವಹಿಸುವುದು ಉತ್ತಮ. ವಸ್ತುಗಳು ಪತ್ತೆಯಾಗಿ ಕೈ ಸೇರುವುದು.

ಮೀನ: ಆಯ್ಕೆ ಸರಿಯಾಗಿದ್ದು ಕೆಲಸಗಳನ್ನು ನಿರ್ಭಯವಾಗಿ ಮಾಡಿ ಮುಗಿಸುವಲ್ಲಿ ಯಶಸ್ವಿಯಾಗುವಿರಿ. ಲೇವಾದೇವಿ ವ್ಯವಹಾರದಲ್ಲಿ ವಿಚಾರಿಸಿ ತೀರ್ಮಾನ ಕೈಗೊಳ್ಳುವುದು ಉತ್ತಮ. ತಂದೆ ಮಾತನ್ನು ತಿರಸ್ಕರಿಸಬೇಡಿ.

ಪದಬಂಧ 5407


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಮರ್ಯಾದೆಯುಳ್ಳ ಆತ್ಮಗೌರವ (4)
3.ಕಿಡಿಯನ್ನು ಹಚ್ಚಿದ್ದಾನಲ್ಲಾ ಈ ತುಂಟ? (4)
5.ಈಕೆ ನೃತ್ಯ ಮಾಡುವವಳು (3)
6.ಅತಿಯಾದ ಬಯಕೆ (3)
8.ಕೈ ಕೊನೆಗಿಟ್ಟಾಗಿನ ಮಿಶ್ರಣ (3)
9.ಅಗಲುವಿಕೆಯನ್ನು ಹೀಗನ್ನಿ (3)
10.ಜಗಳ ಇಲ್ಲಿ ಕಾಣುತ್ತಿದೆ (3)
12.ಕುಣಿಯುತ್ತಾ ಹಾಕಿರುವ ಜೀರುಗಂಟು (3)
14.ಬರ ಆವರಿಸಿದಾಗ ಕಾಣಿಸಿರುವ ಮೃತದೇಹ (4)
15.ಶುರುವಿನಲ್ಲೇ ಪಡೆದುಕೊಂಡಿರುವ ಲಂಚ (4)

ಮೇಲಿಂದ ಕೆಳಕ್ಕೆ

1.ನಿರಂತರವಾದ್ದನ್ನು ಹೀಗೆನ್ನಿ (4)
2.ನಯವಾಗಿ ಹೊಳೆಯುವ ಅಕ್ಷಿ (3)
3.ವಾತಾಯನ ಇಲ್ಲಿದೆ (3)
4.ಯುದ್ಧಕ್ಕೆ ಹೆದರುವವ ತಿರುಗಿದ್ದಾನಲ್ಲಾ? (4)
7.ಕೈಯಿಂದಲೇ ಪ್ರಾರಂಭಗೊಂಡಿರುವ ಉತ್ಸವ (3)
8.ಕಬ್ಬಿಣದ ಭಾರೀ ಪೆಟ್ಟಿಗೆ (3)
9.ಹಾಸ್ಯಗಾರ ಇಲ್ಲಿದ್ದಾನೆ (4)
11.ಕತ್ತು ಕೊನೆಗಿಟ್ಟು ರೂಪಿಸಿದ ಸಂಚು (4)
12.ವಠಾರದವರ ಬಳಿಯಿರುವ ಕೊಡಲಿ (3)
13.ಮಣ್ಣು ಬೆರೆತ ನೀರು (3)



5406ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
2.ರಜತೋತ್ಸವ
4.ಪಾತಕ 5.ನಡುಕ
9.ತೋಟಿ 10.ವಾದಕ
11.ತಾತ 12.ಕಮ್ಮತ
15.ಮದನ 16.ಮನರಂಜನೆ

ಮೇಲಿಂದ ಕೆಳಕ್ಕೆ:
1.ಸಂತೋಷ 2.ರಕ
3.ವನ 4.ಪಾರಿತೋಷಕ
6.ಕರತಾಡನ 7.ಸಂವಾದ
8.ಪಾಕಡ 13.ತಮ
14.ಆರಂಬ 15.ಮನೆ

ಸುಡೊಕು 5793

	7	6		4				9
5			6		9		4	2
	9			7		3		
7	8			2			5	3
			4	9	5			7
6		5		8			2	
		7					9	5
	5				7			
9				5	8	2		4


ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5792 ಸುಡೊಕು

2	3	9	8	5	7	1	6	4
8	6	4	1	3	2	7	5	9
5	1	7	4	9	6	2	8	3
7	9	8	2	4	5	6	3	1
4	5	1	6	8	3	9	2	7
3	2	6	9	7	1	5	4	8
6	7	2	3	1	4	8	9	5
9	4	5	7	6	8	3	1	2
1	8	3	5	2	9	4	7	6

ಷೇರುಪೇಟೆ ವಹಿವಾಟು 307



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	19,632
ಇಂದಿನ ಅಂತ್ಯ	19,543
▼	89
ದಿನದ ಕನಿಷ್ಠ	19,495

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ




ಬೆಂಗಳೂರು
100 ಮೊಟ್ಟೆಗೆ ₹490
12 ಮೊಟ್ಟೆಗೆ ₹68
ಮೈಸೂರು
100 ಮೊಟ್ಟೆಗೆ ₹495

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)
₹305-582
ದ್ವಿತಳಿ (ಬಿ.ವಿ)
₹341-655

ಎನ್.ಆರ್.ಪುರ ರಬ್ಬರ್



(ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹146
ಆರ್‌ಎಸ್‌ಎಸ್-5 ₹140
ಗುಡ್ ಲಾಟ್ ₹123

ಕಾಳುಮೆಣಸಿನ ದರ ಏರಿಕೆ

• ಕೆ.ಎಸ್.ಗಿರೀಶ



ಕಾಳುಮೆಣಸು ಹಾಗೂ ಏಲಕ್ಕಿ

ಮಡಿಕೇರಿ: ಕಾಳುಮೆಣಸಿನ ದರ ಕೆಲವು ದಿನಗಳಿಂದ ನಿರಂತರವಾಗಿ ಏರಿಕೆ ಕಾಣುತ್ತಿದೆ. ಮಾರ್ಚ್ ತಿಂಗಳಿಂದ ಜುಲೈ 25ರವರೆಗೆ ಕೆ.ಜಿಗೆ ₹400 ಇದ್ದ ದರ ಈಗ ₹600–620ಕ್ಕೆ ತಲುಪಿದೆ. 'ಇನ್ನಷ್ಟು ಹೆಚ್ಚುವ ನಿರೀಕ್ಷೆ ಇದೆ' ಎಂದು ವ್ಯಾಪಾರಸ್ಥರು ಹೇಳುತ್ತಾರೆ.

ಕಾಳುಮೆಣಸು ಬೆಳೆಯುವುದರಲ್ಲಿ ದೇಶದಲ್ಲಿ ಕರ್ನಾಟಕವು ಮೊದಲ ಸ್ಥಾನ ಪಡೆದಿದೆ. 2022–23ನೇ ಸಾಲಿನಲ್ಲಿ ದೇಶದಲ್ಲಿ ಒಟ್ಟು ಉತ್ಪಾದನೆಯಾದ 64 ಸಾವಿರ ಟನ್ ಕಾಳುಮೆಣಸಿನಲ್ಲಿ 36 ಸಾವಿರ ಟನ್ ಇಲ್ಲಿನದ್ದೇ ಆಗಿತ್ತು. 2016ರ ನಂತರ ದರ ಇಳಿದು ಬೆಳೆಗಾರರು ನಿರಾಶರಾಗಿದ್ದರು. ಕಾರ್ಮಿಕರ ಕೊರತೆ, ಅಧಿಕ ಕೂಲಿ ದರದಿಂದ ಅತೀವ ನಷ್ಟ ಅನುಭವಿಸಿದ್ದರು. ಸದ್ಯ, ಬೆಲೆ ಏರಿಕೆಯು ಬೆಳೆಗಾರರಲ್ಲಿ ಸಂತಸ ತರಿಸಿದೆ.

ಈ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಗೋಣಿಕೊಪ್ಪಲಿನ ಕಾಳುಮೆಣಸು ಖರೀದಿದಾರ ಸುಬ್ಬಯ್ಯ, 'ಕೆಲ ದಿನಗಳಿಂದ ದರ ಕೆ.ಜಿಗೆ ₹600 ದಾಟಿದೆ. 2016ರಲ್ಲಿ ₹700 ದಾಟಿತ್ತು. ಕೊಚ್ಚಿ ಮಾರುಕಟ್ಟೆಯಲ್ಲಿ ಬೆಲೆ ಏರುಗತಿಯಲ್ಲಿರುವುದರಿಂದ ಇಲ್ಲೂ ಹೆಚ್ಚಾಗಿದೆ. ಆದರೆ, ಕಳೆದ ವರ್ಷಕ್ಕೆ ಹೋಲಿಸಿದರೆ ಪೂರೈಕೆ ಕಡಿಮೆ ಇದೆ' ಎಂದರು.

ಮಡಿಕೇರಿಯ ಕಾಳುಮೆಣಸು ಮತ್ತು ಏಲಕ್ಕಿ ಮಾರಾಟಗಾರ ಹಮೀದ್ ಪ್ರತಿಕ್ರಿಯಿಸಿ, 'ಈ ಬಾರಿ ಏಲಕ್ಕಿ ಬೆಲೆಯೂ ಕೆ.ಜಿಗೆ ₹500ರವರೆಗೂ ಹೆಚ್ಚಾಗಿದೆ' ಎಂದರು.

ಹಣದುಬ್ಬರ ಇನ್ನಷ್ಟು ಹೆಚ್ಚುವ ಸೂಚನೆ ನೀಡಿದ ಭಾರತೀಯ ರಿಸರ್ವ್ ಬ್ಯಾಂಕ್

ರೆಪೊ ಯಥಾಸ್ಥಿತಿ, ಬಿಗಿ ನಿಲುವಿನ ಸೂಚನೆ

ಮುಂಬೈ (ಪಿಟಿಐ): ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಹಣಕಾಸು ನೀತಿ ಸಮಿತಿಯು (ಎಂಪಿಸಿ) ರೆಪೊ ದರವನ್ನು ಸತತ ಮೂರನೆಯ ಬಾರಿಯೂ ಯಥಾಸ್ಥಿತಿಯಲ್ಲಿ ಉಳಿಸಿಕೊಂಡಿದೆ. ಆದರೆ, ಆಹಾರ ವಸ್ತುಗಳ ಬೆಲೆ ಏರಿಕೆಯು ಒಟ್ಟು ಹಣದುಬ್ಬರ ದರವನ್ನು ಹೆಚ್ಚಿಸುತ್ತ ಸಾಗಿದರೆ ಮುಂದಿನ ದಿನಗಳಲ್ಲಿ ಇನ್ನಷ್ಟು ಬಿಗಿ ನಿಲುವನ್ನು ತಾಳುವ ಸೂಚನೆಯನ್ನು ಆರ್‌ಬಿಐ ನೀಡಿದೆ.

ರೆಪೊ ದರವನ್ನು ಶೇಕಡ 6.50ರಲ್ಲಿ ಉಳಿಸಿಕೊಳ್ಳುವ ತೀರ್ಮಾನವನ್ನು ಆರು ಸದಸ್ಯರ ಎಂಪಿಸಿ ಒಮ್ಮತದಿಂದ ಕೈಗೊಂಡಿದೆ. 'ಚಿಲ್ಲರೆ ಹಣದುಬ್ಬರ ಪ್ರಮಾಣವು ಶೇಕಡ 4ಕ್ಕಿಂತ ಕಡಿಮೆ ಮಟ್ಟದಲ್ಲಿ ಸ್ಥಿರವಾಗಬೇಕಿದೆ. ಹಣದುಬ್ಬರದ ಹೆಚ್ಚಳವು ಬಹುಕಾಲ ಮುಂದುವರಿದರೆ ಹೊಸದಾಗಿ ಕ್ರಮ ತೆಗೆದುಕೊಳ್ಳಬೇಕಾಗುತ್ತದೆ' ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ಹೇಳಿದ್ದಾರೆ.

ಆಹಾರ ವಸ್ತುಗಳ ಬೆಲೆಯಲ್ಲಿ ಈಚೆಗೆ ಕಂಡುಬಂದಿರುವ ಹೆಚ್ಚಳವು ಹಣದುಬ್ಬರದ ವಿಚಾರವಾಗಿ ಅನಿಶ್ಚಿತತೆಗೆ ಕಾರಣವಾಗಿದೆ. ಹವಾಮಾನ ಏರುಪೇರು, ಮಾರುಕಟ್ಟೆಯಲ್ಲಿ ಸರ್ಕಾರದ ಮಧ್ಯಪ್ರವೇಶ ಹಾಗೂ ಜಾಗತಿಕ ಮಟ್ಟದಲ್ಲಿ ಆಹಾರ ವಸ್ತುಗಳ ಪೂರೈಕೆಯಲ್ಲಿನ ವ್ಯತ್ಯಯವು ಚಿಲ್ಲರೆ ಹಣದುಬ್ಬರ ದರದ ಮೇಲೆ ಪ್ರಭಾವ ಬೀರುವ ನಿರೀಕ್ಷೆ ಇದೆ.

ಬ್ಯಾಂಕಿಂಗ್ ವ್ಯವಸ್ಥೆಯಲ್ಲಿನ ನಗದನ್ನು ಕಡಿಮೆ ಮಾಡುವ ಉದ್ದೇಶದಿಂದ ಆರ್‌ಬಿಐ, ಶೇಕಡ 10ರಷ್ಟು ಹೆಚ್ಚುವರಿ ನಗದು ಮೀಸಲು ಅನುಪಾತವನ್ನು (ಐ–ಸಿಆರ್‌ಆರ್) ಬ್ಯಾಂಕ್‌ಗಳು ಅಳವಡಿಸಿಕೊಳ್ಳಬೇಕು ಎಂದು ಹೇಳಿದೆ. ₹2,000 ಮುಖಬೆಲೆಯ ನೋಟುಗಳು ಬ್ಯಾಂಕಿಂಗ್ ವ್ಯವಸ್ಥೆಗೆ ಮರಳುತ್ತಿರುವುದರಿಂದ ಆಗಿರುವ ಹೆಚ್ಚುವರಿ ನಗದು ಸಂಗ್ರಹವನ್ನು ಕಡಿಮೆ ಮಾಡಲು ಈ ಕ್ರಮವು ನೆರವಾಗಲಿದೆ. ಐ–ಸಿಆರ್‌ಆರ್ ಪ್ರಮಾಣದ ಬಗ್ಗೆ ಆರ್‌ಬಿಐ ಸೆಪ್ಟೆಂಬರ್ 8ರಂದು ಅಥವಾ ಅದಕ್ಕೂ ಮೊದಲು ಪುನರವಲೋಕನ ನಡೆಸಲಿದೆ.

ಈ ಕ್ರಮವು ಬ್ಯಾಂಕಿಂಗ್ ವ್ಯವಸ್ಥೆಯಿಂದ ₹1 ಲಕ್ಷ ಕೋಟಿ ಆರ್‌ಬಿಐ ಕಡೆ ಹರಿಯುವಂತೆ ಮಾಡಲಿದೆ. ಇದರಿಂದಾಗಿ ಸಾಲ ನೀಡಿಕೆ ಮೇಲೆ ಕೆಟ್ಟ ಪರಿಣಾಮವೇನೂ ಆಗದು ಎಂದು ದಾಸ್ ಹೇಳಿದ್ದಾರೆ.

ಪ್ರಸಕ್ತ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ ಚಿಲ್ಲರೆ ಹಣದುಬ್ಬರ ದರದ ಅಂದಾಜನ್ನು ಆರ್‌ಬಿಐ ಶೇ 5.4ಕ್ಕೆ ಹೆಚ್ಚಿಸಿದೆ. ಈ ಮೊದಲು ಇದು ಶೇ 5.1 ಆಗಿತ್ತು. ಪ್ರಸಕ್ತ ಹಣಕಾಸು ವರ್ಷದಲ್ಲಿ ದೇಶದ ಜಿಡಿಪಿ ಶೇ 6.5ರಷ್ಟು ಬೆಳವಣಿಗೆ ಕಾಣಲಿದೆ ಎಂದು ಈ ಹಿಂದೆ ಮಾಡಿದ್ದ ಅಂದಾಜನ್ನು ಆರ್‌ಬಿಐ ಪರಿಷ್ಕರಿಸಿಲ್ಲ.

'ತರಕಾರಿ ಬೆಲೆ ಏರಿಕೆಯು ಬಹಳ ಬೇಗ ಕಡಿಮೆ ಆಗಬಹುದು. ಆದರೆ ಎಲ್–ನಿನೊ ಪರಿಣಾಮ ಮತ್ತು ಜಾಗತಿಕ ಮಾರುಕಟ್ಟೆಗಳಲ್ಲಿ ಆಹಾರ ವಸ್ತುಗಳ ಬೆಲೆ ಮೇಲೆ ಸೂಕ್ಷ್ಮ ನಿಗಾ ಇರಿಸಬೇಕಿದೆ' ಎಂದು ಹೇಳಿದ್ದಾರೆ.

ಸಾಲ: ಸ್ಥಿರ ಬಡ್ಡಿ ವ್ಯವಸ್ಥೆ ಆಯ್ಕೆಗೆ ಅವಕಾಶ

ರೆಪೊ ದರಕ್ಕೆ ಹೊಂದಿಕೊಂಡಿರುವ ಸಾಲದ ಮೇಲಿನ ಬಡ್ಡಿ ದರದಲ್ಲಿ ಬದಲಾವಣೆಗಳ ವಿಚಾರವಾಗಿ ಪಾರದರ್ಶಕ ವ್ಯವಸ್ಥೆಯೊಂದು ಜಾರಿಗೆ ಬರಬೇಕು ಎಂದು ಎಂಪಿಸಿ ತೀರ್ಮಾನಿಸಿದೆ.

ಸಾಲ ಪಡೆದವರಿಗೆ ಇದು, ನಿಶ್ಚಿತ ಬಡ್ಡಿ ದರದ ವ್ಯವಸ್ಥೆಯನ್ನು ಆಯ್ಕೆ ಮಾಡಿಕೊಳ್ಳಲು ಹಾಗೂ ಸಾಲವನ್ನು ಅವಧಿಗೆ ಮೊದಲೇ ತೀರಿಸಿಲು ಅವಕಾಶ ಮಾಡಿಕೊಡಲಿದೆ. ಇದರ ವಿಚಾರವಾಗಿ ಮಾರ್ಗಸೂಚಿಗಳನ್ನು ಶೀಘ್ರದಲ್ಲಿಯೇ ಹೊರಡಿಸಲಾಗುತ್ತದೆ.

ಗೃಹಸಾಲ, ವಾಹನ ಸಾಲ ಹಾಗೂ ಇತರ ಬಗೆಯ ಸಾಲ ಪಡೆದವರಿಗೆ ಇದು ಅನುಕೂಲ ಕಲ್ಪಿಸಬಹುದು ಎಂದು ನಿರೀಕ್ಷಿಸಲಾಗಿದೆ. ರೆಪೊ ದರದಲ್ಲಿನ ಏರಿಕೆಯ ಪರಿಣಾಮವಾಗಿ ಈ ಸಾಲಗಳ ಬಡ್ಡಿ ಕೂಡ ಹೆಚ್ಚಾಗಿದೆ.

ಕೆಲವು ಹಣಕಾಸು ಸಂಸ್ಥೆಗಳು ಸಾಲ ಪಡೆದವರಿಗೆ ಸರಿಯಾಗಿ ಮಾಹಿತಿ ನೀಡದೆ, ಅವರ ಸಮ್ಮತಿಯನ್ನು ಸೂಕ್ತ ರೀತಿಯಲ್ಲಿ ಪಡೆಯದೆ ಸಾಲದ ಅವಧಿಯನ್ನು ಅತಿಯಾಗಿ ಹೆಚ್ಚಿಸಿರುವ ನಿದರ್ಶನಗಳು ಕಂಡುಬಂದಿವೆ ಎಂದು ದಾಸ್ ಹೇಳಿದ್ದಾರೆ.


ಟೊಮೆಟೊ ಕೆ.ಜಿಗೆ ₹53ಕ್ಕೆ ಇಳಿಕೆ

ಪ್ರಜಾವಾಣಿ ವಾರ್ತೆ

ಕೋಲಾರ: ಸ್ಥಳೀಯ ಎಪಿಎಂಸಿ ಮಾರುಕಟ್ಟೆಯಲ್ಲಿ ಗುರುವಾರ ನಡೆದ ಹರಾಜಿನಲ್ಲಿ 15 ಕೆ.ಜಿ ಟೊಮೆಟೊ ಬಾಕ್ಸ್ ಕೇವಲ ₹800ಕ್ಕೆ ಮಾರಾಟವಾಗಿದೆ.

ಟೊಮೆಟೊ ಮಂಡಿಯಲ್ಲಿ ಬುಧವಾರದ ಹರಾಜಿನಲ್ಲಿ ₹1,100ಕ್ಕೆ ಮಾರಾಟವಾಗಿತ್ತು. ಒಂದೇ ದಿನದ ಅಂತರದಲ್ಲಿ ₹300 ಕುಸಿದಿದೆ. ಒಂದೂವರೆ ತಿಂಗಳಲ್ಲಿ ಇದೇ ಮೊದಲ ಬಾರಿ ಒಂದು ಸಾವಿರದೊಳಗಿನ ಮೊತ್ತಕ್ಕೆ ಹರಾಜಾಗಿದೆ.

ರೈತರಿಗೆ ಕೆ.ಜಿಗೆ ಸರಾಸರಿ ₹53 ಲಭಿಸಿದೆ. ಜುಲೈ 31ರ ಹರಾಜಿನಲ್ಲಿ ಗರಿಷ್ಠ ₹2,700ಕ್ಕೆ ಮಾರಾಟವಾಗಿ ಸಾರ್ವಕಾಲಿಕ ದಾಖಲೆ ನಿರ್ಮಿಸಿತ್ತು.



ಕರ್ನಾಟಕ ಸ್ಟೇಟ್ ಮಾರ್ಕೆಟಿಂಗ್ ಕಮ್ಯುನಿಕೇಷನ್ ಆ್ಯಂಡ್ ಅಡ್ವರ್ಟೈಸಿಂಗ್ ಲಿಮಿಟೆಡ್ ಕಂಪನಿಯು 'ಮುಖ್ಯಮಂತ್ರಿಯವರ ಪರಿಹಾರ ನಿಧಿ'ಗೆ ನೀಡಿದ ₹1 ಕೋಟಿಯ ಚೆಕ್‌ಅನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಕಂಪನಿಯ ಅಧ್ಯಕ್ಷ, ಸಚಿವ ಎಂ.ಬಿ. ಪಾಟೀಲ ಅವರು ನೀಡಿದರು. ಈ ಸಂದರ್ಭದಲ್ಲಿ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಧಾನ ಕಾರ್ಯದರ್ಶಿ ಎಸ್. ಸೆಲ್ವಕುಮಾರ್, ಕಂಪನಿಯ ವ್ಯವಸ್ಥಾಪಕ ನಿರ್ದೇಶಕ ಸಿದ್ದಲಿಂಗಪ್ಪ ಬಿ. ಪೂಜಾರಿ, ಉಪ ಪ್ರಧಾನ ವ್ಯವಸ್ಥಾಪಕ ಪಿ.ಎಸ್. ನಂದೀಶ, ಲೆಕ್ಕಪತ್ರ ವಿಭಾಗದ ವ್ಯವಸ್ಥಾಪಕಿ ರಶ್ಮಿ ಯಾದಟಿ, ಉಪ ನಿರ್ದೇಶಕಿ ಲತಾ ನಾಯ್ಕ ಇದ್ದರು.

ಯುಪಿಐ ಲೈಟ್ ಪಾವತಿ ಮಿತಿ ₹500ಕ್ಕೆ ಏರಿಕೆ

ಒಂದನೇ ಪುಟದಿಂದ

ಯುಪಿಐ ಲೈಟ್ ವಾಲೆಟ್ ಮೂಲಕ ಹಣ ಪಾವತಿ ಮಾಡುವಾಗ ಎರಡು ಹಂತಗಳ ಸುರಕ್ಷತೆ ಇಲ್ಲದೇ ಇರುವುದರಿಂದ (ಅಂದರೆ, ಬಳಕೆದಾರರು ನಾಲ್ಕು ಅಥವಾ ಆರು ಅಂಕಿಗಳ ಪಾಸ್‌ವರ್ಡ್ ನಮೂದಿಸುವ ಅಗತ್ಯ ಇಲ್ಲ) ಯುಪಿಐ ಲೈಟ್ ವಾಲೆಟ್‌ನಲ್ಲಿ ಇರಿಸಬಹುದಾದ ಮೊತ್ತದಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ. ಅದನ್ನು ₹2 ಸಾವಿರದಲ್ಲಿಯೇ ಉಳಿಸಿಕೊಳ್ಳಲಾಗಿದೆ ಎಂದು ಆರ್‌ಬಿಐ ತಿಳಿಸಿದೆ.

ಇಂಟರ್ನೆಟ್ ಸಂಪರ್ಕ ಇಲ್ಲದಿದ್ದಾಗಲೂ ಯುಪಿಐ ಲೈಟ್ ಮೂಲಕ ಹಣ ಪಾವತಿ ಮಾಡಲು ಅನುಕೂಲ ಆಗುವಂತಹ ವ್ಯವಸ್ಥೆಯನ್ನು ರೂಪಿಸಲು ಆರ್‌ಬಿಐ ಮುಂದಾಗಿದೆ. ಇಂಟರ್ನೆಟ್ ಸಂಪರ್ಕ ದುರ್ಬಲ ಆಗಿದ್ದಾಗ ಅಥವಾ ಸಂಪರ್ಕವೇ ಇಲ್ಲದಿದ್ದಾಗ ಯುಪಿಐ ಲೈಟ್‌ನಲ್ಲಿ 'ನಿಯರ್ ಫೀಲ್ಡ್ ಕಮ್ಯುನಿಕೇಷನ್' (ಎನ್‌ಎಫ್‌ಸಿ) ತಂತ್ರಜ್ಞಾನವನ್ನು ಬಳಸಿ ಹಣ ಪಾವತಿಸುವ ಆಯ್ಕೆ ಲಭ್ಯವಾಗಲಿದೆ.

ಯುಪಿಐ ಪಾವತಿಯಲ್ಲಿ ಕೃತಕ ಬುದ್ಧಿಮತ್ತೆ (ಎ.ಐ.) ತಂತ್ರಜ್ಞಾನ ಬಳಕೆ ಮಾಡುವುದನ್ನು ಸಹ ಆರ್‌ಬಿಐ ಪ್ರಸ್ತಾಪಿಸಿದೆ. ಯುಪಿಐನಲ್ಲಿ 'ಕಾನ್ವರ್ಸೇಷನಲ್ ಪೇಮೆಂಟ್ಸ್' (ಚಾಟ್ ಅಥವಾ ಸಂದೇಶ ರವಾನಿಸುವ ಮೂಲಕ ಪಾವತಿ) ಸೌಲಭ್ಯ ಬಳಕೆಗೆ ಬರಲಿದೆ.

ಈ ಸೌಲಭ್ಯದಲ್ಲಿ ಬಳಕೆದಾರನು ಹಣ ವರ್ಗಾವಣೆಯನ್ನು ಎಐ–ವ್ಯವಸ್ಥೆಯ ಮೂಲಕ ನಿರ್ವಹಿಸಬಹುದಾಗಿದೆ. ಸ್ಮಾರ್ಟ್‌ಫೋನ್ ಮತ್ತು ಫೀಚರ್ ಫೋನ್‌ಗಳಲ್ಲಿಯೂ ಈ ಆಯ್ಕೆ ಲಭ್ಯವಾಗುವಂತೆ ಮಾಡಲಾಗುವುದು. ಆರಂಭದಲ್ಲಿ ಹಿಂದಿ ಮತ್ತು ಇಂಗ್ಲಿಷ್ ಭಾಷೆಗಳಲ್ಲಿ ಇದು ಲಭ್ಯವಿರಲಿದೆ. ಕ್ರಮೇಣ ಭಾರತದ ಇತರ ಭಾಷೆಗಳಲ್ಲಿಯೂ ಬಳಕೆಗೆ ಲಭ್ಯವಾಗಿದೆ. ಈ ಕುರಿತು ಎನ್‌ಪಿಸಿಐಗೆ ಶೀಘ್ರವೇ ಸೂಚನೆಗಳನ್ನು ನೀಡಲಾಗುವುದು ಎಂದು ಆರ್‌ಬಿಐ ಗವರ್ನರ್ ಶಕ್ತಿಕಾಂತ ದಾಸ್ ತಿಳಿಸಿದ್ದಾರೆ.

ಎಲ್‌ಐಸಿ ಲಾಭ ₹9,544 ಕೋಟಿ

ನವದೆಹಲಿ (ಪಿಟಿಐ): ಭಾರತೀಯ ಜೀವ ವಿಮಾ ನಿಗಮದ (ಎಲ್‌ಐಸಿ) ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಹಲವುಪಟ್ಟು ಹೆಚ್ಚಾಗಿ ₹9,544 ಕೋಟಿಗೆ ತಲುಪಿದೆ.

ಸರ್ಕಾರಿ ಸ್ವಾಮ್ಯದ ಎಲ್‌ಐಸಿ ನಿವ್ವಳ ಲಾಭವು ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹683 ಕೋಟಿ ಆಗಿತ್ತು. ಒಟ್ಟು ವರಮಾನ ₹1.68 ಲಕ್ಷ ಕೋಟಿಯಿಂದ ₹1.88 ಲಕ್ಷ ಕೋಟಿಗೆ ಏರಿಕೆ ಆಗಿದೆ ಎಂದು ಷೇರುಪೇಟೆಗೆ ಮಾಹಿತಿ ನೀಡಿದೆ.

ಹೂಡಿಕೆಗಳಿಂದ ಬರುವ ನಿವ್ವಳ ವರಮಾನವು ₹69,571 ಕೋಟಿಯಿಂದ ₹90,309 ಕೋಟಿಗೆ ಏರಿಕೆ ಕಂಡಿದೆ. ವಸೂಲಾಗದ ಸಾಲದ ಸರಾಸರಿ ಪ್ರಮಾಣವು (ಜಿಎನ್‌ಪಿಎ) ಶೇ 5.84ರಿಂದ ಶೇ 2.48ಕ್ಕೆ ಇಳಿಕೆ ಕಂಡಿದೆ ಎಂದು ಕಂಪನಿಯು ತಿಳಿಸಿದೆ.

ಇಪಿಎಫ್‌ಒ: ಇಟಿಎಫ್‌ನಲ್ಲಿ ₹13,017 ಕೋಟಿ ಹೂಡಿಕೆ

ನವದೆಹಲಿ (ಪಿಟಿಐ): ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜೂನ್ ತ್ರೈಮಾಸಿಕದಲ್ಲಿ ವಿನಿಮಯ ವಹಿವಾಟು ನಿಧಿಗಳಲ್ಲಿ (ಇಟಿಎಫ್) ₹13,017 ಕೋಟಿ ಹೂಡಿಕೆ ಮಾಡಿದೆ. ಕಾರ್ಮಿಕ ಖಾತೆ ರಾಜ್ಯ ಸಚಿವ ರಾಮೇಶ್ವರ ತೆಲಿ ಅವರು ಗುರುವಾರ ರಾಜ್ಯಸಭೆಗೆ ಈ ಮಾಹಿತಿ ನೀಡಿದ್ದಾರೆ.

ಇಪಿಎಫ್‌ಒ 2020–21ರಲ್ಲಿ ₹32,071 ಕೋಟಿ, 2021–22ರಲ್ಲಿ ₹43,568 ಕೋಟಿ ಹಾಗೂ 2022–23ರಲ್ಲಿ ₹53,081 ಕೋಟಿಯನ್ನು ಇಟಿಎಫ್‌ಗಳಲ್ಲಿ ಹೂಡಿಕೆ ಮಾಡಿದೆ ಎಂದು ಅವರು ತಿಳಿಸಿದ್ದಾರೆ.



ಏರ್ ಇಂಡಿಯಾದ ಹೊಸ ಲೋಗೊ ಅನಾವರಣ ಕಾರ್ಯಕ್ರಮದಲ್ಲಿ ಟಾಟಾ ಸನ್ಸ್ ಅಧ್ಯಕ್ಷ ಎನ್. ಚಂದ್ರಶೇಖರನ್ ಮಾತನಾಡಿದರು –ಪಿಟಿಐ ಚಿತ್ರ

ಏರ್ ಇಂಡಿಯಾದ ಹೊಸ ಲೋಗೊ

ನವದೆಹಲಿ (ಪಿಟಿಐ): ಟಾಟಾ ಸಮೂಹದ ಒಡೆತನದ ಏರ್ ಇಂಡಿಯಾ ವಿಮಾನಯಾನ ಕಂಪನಿಯು ಹೊಸ ಲೋಗೊ ಮತ್ತು ವಿಮಾನದ ಬಣ್ಣವನ್ನು ಗುರುವಾರ ಅನಾವರಣ ಮಾಡಿದೆ.

ಏರ್ ಇಂಡಿಯಾವನ್ನು ಸ್ವಾಧೀನಪಡಿಸಿಕೊಂಡ ಬಳಿಕ ಟಾಟಾ ಸಮೂಹವು ಅದಕ್ಕೆ ಹೊಸ ರೂಪ ಕೊಡುವ ಭಾಗವಾಗಿ ಈ ಕ್ರಮ ಕೈಗೊಂಡಿದೆ. ಕಂಪನಿಯ ಹೊಸ ಲೋಗೊ ಮಿತಿಯಿರದ ಸಾಧ್ಯತೆಗಳು, ಪ್ರಗತಿಶೀಲತೆ ಹಾಗೂ ಮುನ್ನೋಟದ ಕುರಿತು ಸಂಸ್ಥೆಯ ವಿಶ್ವಾಸವನ್ನು ಸೂಚಿಸುತ್ತದೆ ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹಂಗಾಮಿ ಪ್ರಧಾನಿ ಆಯ್ಕೆ ಪ್ರಕ್ರಿಯೆ: ರಿಯಾಜ್ ಜೊತೆ ಷರೀಫ್ ಚರ್ಚೆ

ಪಾಕ್ 'ನ್ಯಾಷನಲ್ ಅಸೆಂಬ್ಲಿ' ವಿಸರ್ಜನೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ 'ನ್ಯಾಷನಲ್ ಅಸೆಂಬ್ಲಿ' (ಸಂಸತ್ತಿನ ಕೆಳಮನೆ)ಯನ್ನು ಅಧ್ಯಕ್ಷ ಆರಿಫ್ ಅಲ್ವಿ ಬುಧವಾರ ರಾತ್ರಿ ಅಧಿಕೃತವಾಗಿ ವಿಸರ್ಜಿಸಿದ್ದಾರೆ. ಇದರ ಬೆನ್ನಿಗೇ, ಹಂಗಾಮಿ ಪ್ರಧಾನಿ ಆಯ್ಕೆ ಪ್ರಕ್ರಿಯೆ ಆರಂಭವಾಗಿದೆ.

'ನ್ಯಾಷನಲ್ ಅಸೆಂಬ್ಲಿ'ಯ ವಿರೋಧ ಪಕ್ಷದ ನಾಯಕ, ಪಿಟಿಐ ನ (ಪಾಕಿಸ್ತಾನ್ ತೆಹ್ರೀಕ್ –ಇ ಇನ್ಸಾಫ್)ರಾಜಾ ರಿಯಾಜ್ ಅವರೊಂದಿಗೆ ಪ್ರಧಾನಿ ಶೆಹಬಾಜ್ ಷರೀಫ್ ಹಂಗಾಮಿ ಪ್ರಧಾನಿ ಆಯ್ಕೆಗಾಗಿ ತಮ್ಮ ನಿವಾಸದಲ್ಲಿ ಗುರುವಾರ ಮಾತುಕತೆ ನಡೆಸಿದರು.



ಶೆಹಬಾಜ್ ಷರೀಫ್

ಸಭೆ ಬಳಿಕ ಮಾಧ್ಯಮಗಳ ಜತೆ ಮಾತನಾಡಿದ ರಿಯಾಜ್, 'ನನ್ನ ತಲೆಯಲ್ಲಿ ಮೂವರ ಹೆಸರುಗಳಿವೆ' ಎಂದಷ್ಟೇ ಹೇಳಿದರು.

ನಿವೃತ್ತ ರಾಜತಾಂತ್ರಿಕ ಅಧಿಕಾರಿ ಜಲೀಲ್ ಅಬ್ಬಾಸ್ ಜಿಲಾನಿ, ನಿವೃತ್ತ ಮುಖ್ಯನ್ಯಾಯಮೂರ್ತಿ ತಸ್ಸದುಖ್ ಹುಸೇನ್ ಜಿಲಾನಿ (ಪಾಕಿಸ್ತಾನ್ ಪೀಪಲ್ ಪಾರ್ಟಿಯ ಶಿಫಾರಸು), ಸಿಂಧ್ ಪ್ರಾಂತ್ಯದ ಕಮ್ರಾನ್ ತಿಸ್ಸೋರಿ (ಮುತ್ತಹಿದಾ ಕ್ವಾಮಿ ಮೂವ್‌ಮೆಂಟ್ ಪಾಕಿಸ್ತಾನದ ಶಿಫಾರಸು) ಅವರ ಹೆಸರುಗಳು ಪ್ರಸ್ತಾಪವಾಗಿವೆ ಎಂದು ಸ್ಥಳೀಯ ಮಾಧ್ಯಮಗಳು ವರದಿ ಮಾಡಿವೆ. ಆದರೆ 'ಪಾಕಿಸ್ತಾನ್ ಮುಸ್ಲಿಮ್ ಲೀಗ್–ನವಾಜ್' ಪಕ್ಷದಿಂದ ಈ ವರೆಗೆ ಬಹಿರಂಗವಾಗಿ ಯಾವ ಹೆಸರೂ ಘೋಷಣೆಯಾಗಿಲ್ಲ.

ಹಂಗಾಮಿ ಪ್ರಧಾನಿಯ ಆಯ್ಕೆಗೆ ಪ್ರಧಾನಿ ಮತ್ತು ವಿರೋಧ ಪಕ್ಷಗಳ ನಾಯಕರಿಗೆ ಮೂರು ದಿನ ಸಮಯಾವಕಾಶ ಇರಲಿದೆ. ಅಲ್ಲಿಯ ವರೆಗೆ ಶೆಹಬಾಜ್ ಷರೀಫ್ ಪ್ರಧಾನಿಯಾಗಿ ಮುಂದುವರಿಯಲಿದ್ದಾರೆ.

ಈ ಅವಧಿಯಲ್ಲಿ ಪ್ರಧಾನಿ ಮತ್ತು ವಿರೋಧ ಪಕ್ಷಗಳ ನಾಯಕರು ಒಮ್ಮತಕ್ಕೆ ಬಾರದೇ ಹೋದರೆ, ಸ್ಪೀಕರ್ ಅವರಿಂದ ರಚಿಸಲಾಗುವ ಸಮಿತಿಗೆ ಈ ವಿಷಯ ರವಾನೆಯಾಗುತ್ತದೆ. ಆ ಸಮಿತಿಯೂ ಮೂರು ದಿನಗಳ ಒಳಗೆ ಹಂಗಾಮಿ ಪ್ರಧಾನಿಯನ್ನು ಆಯ್ಕೆ ಮಾಡದೇ ಹೋದರೆ, ಆಗ ಮಧ್ಯಪ್ರವೇಶ ಮಾಡಲಿರುವ ಚುನಾವಣಾ ಆಯೋಗ, ಪ್ರಧಾನಿ ಮತ್ತು ವಿರೋಧ ಪಕ್ಷಗಳ ನಾಯಕರು ಶಿಫಾರಸು ಮಾಡಿರುವ ಯಾರಾದರೂ ಒಬ್ಬರನ್ನು ಹಂಗಾಮಿಯನ್ನಾಗಿ ನೇಮಿಸುತ್ತದೆ.

ನಿಯಮಗಳ ಪ್ರಕಾರ ಇನ್ನು 90 ದಿನಗಳಲ್ಲಿ ಪಾಕಿಸ್ತಾನದ ನ್ಯಾಷನಲ್ ಅಸೆಂಬ್ಲಿಗೆ ಸಾರ್ವತ್ರಿಕ ಚುನಾವಣೆಗಳು ನಡೆಯಬೇಕು.

ಮುಂಬೈ ಧಾರಣೆ

ಶೇಂಗಾ

10-8-2023

ಜಾವಾ 70/80(ಹೊಸ)	13400-13500
ಜಾವಾ 80/90(ಹೊಸ)	12000-12100
ದಪ್ಪ ಮಧ್ಯಪ್ರದೇಶ(ಹೊಸ)	13000-13100
ದಪ್ಪ ಗುಜರಾತ್(ಹೊಸ)	14300-14400

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1870(1870)
ಒಂದು ವಾರದ ಡೆಲಿವರಿ	1865(1865)
ಸೋಯಾ ಕಚ್ಚಾ	900(900)
ಪಾಮ್ ವಾರದ ಡೆಲಿವರಿ	848(850)
ಸೂರ್ಯಕಾಂತಿ ಎಣ್ಣೆ ಕಚ್ಚಾ	900(900)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ
58,750(58,850)
ಬೆಳ್ಳಿ ಕೆ.ಜಿ 70,150(70,150)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ವಿಮಾ ಕಂಪನಿಗಳಿಗೆ ವಂಚನೆ: ಭಾರತ ಸಂಜಾತನ ವಿರುದ್ಧ ದೂರು

ಸಿಂಗಪುರ (ಪಿಟಿಐ): ಎರಡು ವಿಮಾ ಕಂಪನಿಗಳಿಗೆ ವಂಚಿಸಿದ ಆರೋಪದಲ್ಲಿ ಭಾರತೀಯ ಸಂಜಾತ ವ್ಯಕ್ತಿಯ ವಿರುದ್ಧ ಇಲ್ಲಿನ ನ್ಯಾಯಾಲಯದಲ್ಲಿ ದೂರು ದಾಖಲಾಗಿದೆ.

ಸಹಾ ರಂಜಿತ್ ಚಂದ್ರ (48) ಎಂಬುವವರು ಇಬ್ಬರು ವಿದೇಶಿ ಕಾರ್ಮಿಕರಿಗೆ ಅಂದಾಜು ₹47.30 ಲಕ್ಷ ವಿಮಾ ಹಣ ವಿತರಿಸುವ ಸಂಬಂಧ ಎರಡು ವಿಮಾ ಕಂಪನಿಗಳಿಗೆ ವಂಚಿಸಿದ್ದಾರೆ ಎಂದು ಆರೋಪಿಸಲಾಗಿದೆ.

ಹಲವು ಕಂಪನಿಗಳ ನಿರ್ದೇಶಕರಾಗಿರುವ ರಂಜಿತ್ ಚಂದ್ರ ಅವರು 2020 ಜುಲೈ ಮತ್ತು ಫೆಬ್ರುವರಿ 2021ರ ನಡುವೆ ವೈಟ್‌ಫೀಲ್ಡ್ ಲಾ ಕಾರ್ಪೊರೇಶನ್‌ನ ಆಗಿನ ನಿರ್ದೇಶಕರಾಗಿದ್ದ ವಕೀಲ ಚಾರ್ಲ್ಸ್ ಯೋ ಯಾವೊ ಹುಯಿ ಎಂಬುವವರ ಹೆಸರಿನಲ್ಲಿ ವಂಚನೆ ಮಾಡಿದ್ದಾರೆ ಎಂದು ವಿವರಿಸಿದ್ದಾರೆ. ಚಾರ್ಲ್ಸ್ ವಿರುದ್ಧವೂ ಕ್ರಿಮಿನಲ್ ಪ್ರಕರಣ ದಾಖಲಾಗಿದ್ದು, ತಲೆಮರೆಸಿಕೊಂಡಿರುವ ಅವರ ವಿರುದ್ಧ 2022 ಆಗಸ್ಟ್‌ನಲ್ಲಿ ಬಂಧನ ವಾರಂಟ್ ಹೊರಡಿಸಲಾಗಿತ್ತು.

ಸರ್ಕಾರಿ ಅಧಿಕಾರಿಗಳಿಗೆ ತಪ್ಪು ಮಾಹಿತಿ ನೀಡಿದ ಪ್ರಕರಣದಲ್ಲೂ ರಂಜಿತ್ ಚಂದ್ರ ಆರೋಪಿಯಾಗಿದ್ದಾರೆ. ಈ ಪ್ರಕರಣದಲ್ಲಿ ರಂಜಿತ್ ಚಂದ್ರ ಅವರು ದೋಷಿ ಎಂದು ಸಾಬೀತಾದರೆ ಅವರಿಗೆ 10 ವರ್ಷಗಳ ಜೈಲು ಶಿಕ್ಷೆ ಹಾಗೂ ದಂಡ ವಿಧಿಸುವ ಸಾಧ್ಯತೆ ಇದೆ ಎಂದು ಮೂಲಗಳು ಹೇಳಿವೆ.

ಶೈಕ್ಷಣಿಕ ದಾಖಲೆ ತಿರುಚಿದ ನೇಪಾಳಿ ಸಂಸದನ ಬಂಧನ

ಕಠ್ಮಂಡು: ಶೈಕ್ಷಣಿಕ ದಾಖಲೆ ತಿರುಚಿದ ಆರೋಪದ ಮೇಲೆ ನೇಪಾಳದ ಆಡಳಿತಾರೂಢ 'ನೇಪಾಳಿ ಕಾಂಗ್ರೆಸ್ ಪಕ್ಷ'ದ ಸಂಸದ ಸುನಿಲ್ ಶರ್ಮ ಅವರನ್ನು ಕೇಂದ್ರ ತನಿಖಾ ದಳ (ಸಿಐಬಿ)ದ ಪೊಲೀಸರು ಕಠ್ಮಂಡುವಿನಲ್ಲಿ ಗುರುವಾರ ಬಂಧಿಸಿದ್ದಾರೆ.

ಶರ್ಮ ಅವರ 10+ ತರಗತಿಯ ಪ್ರಮಾಣ ಪತ್ರ ನಕಲಿ ಎಂದು ಗೊತ್ತಾದ ಹಿನ್ನೆಲೆಯಲ್ಲಿ ಅವರನ್ನು ಬಂಧಿಸಲಾಗಿದೆ. ಮೊರಂಗ್–3 ಕ್ಷೇತ್ರದಿಂದ ಶರ್ಮ ಅವರು ಜನಪ್ರತಿನಿಧಿ ಸಭೆಗೆ ಆಯ್ಕೆಯಾಗಿದ್ದರು. ನೇಪಾಳಿ ಕಾಂಗ್ರೆಸ್‌ನ ಹಿರಿಯ ನಾಯಕ ಶೇಖರ್ ಕೊಯಿರಾಲ ಬಣದಲ್ಲಿ ಶರ್ಮ ಗುರುತಿಸಿಕೊಂಡಿದ್ದರು. ಬಂಧನದ ಬಗ್ಗೆ ಸ್ಪೀಕರ್‌ಗೆ ಮಾಹಿತಿ ನೀಡಿರುವುದಾಗಿ ಪೊಲೀಸರು ಹೇಳಿದ್ದಾರೆ.

'ಭಾರತ ನಮ್ಮ ಪ್ರಮುಖ ಪಾಲುದಾರ'

ಲಂಡನ್ (ಪಿಟಿಐ): 'ನಿಯಮಾಧಾರಿತ ಅಂತರರಾಷ್ಟ್ರೀಯ ಆದೇಶಗಳನ್ನು ಪಾಲನೆಯ ಗುರಿಸಾಧಿಸುವ ವಿಷಯದಲ್ಲಿ ಭಾರತವನ್ನು ನಮ್ಮ ಪ್ರಮುಖ ಪಾಲುದಾರರನ್ನಾಗಿ ನೋಡುತ್ತೇವೆ' ಎಂದು ಬ್ರಿಟನ್‌ನ ರಕ್ಷಣಾ ಸಚಿವಾಲಯ ಹೇಳಿದೆ.

ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಬ್ರಿಟನ್‌ಗೆ ಭೇಟಿ ನೀಡಿದ್ದು, ಈ ವೇಳೆ ಇಲ್ಲಿನ ಹಾರ್ಸ್ ಗಾರ್ಡ್ಸ್ ಪರೇಡ್‌ನಲ್ಲಿ ಅವರಿಗೆ ಗಾರ್ಡ್ ಆಫ್ ಆನರ್ ಸಮಾರಂಭದಲ್ಲಿ ಸಚಿವಾಲಯ ಈ ಹೇಳಿಕೆ ನೀಡಿದೆ. ಸ್ಯಾಂಡ್‌ಹರ್ಸ್ಟ್‌ನಲ್ಲಿರುವ ರಾಯಲ್ ಮಿಲಿಟರಿ ಅಕಾಡೆಮಿಯಲ್ಲಿ ಗಾರ್ಡ್ ಆಫ್ ಆನರ್ ಪಡೆದ ಮೊದಲ ಭಾರತೀಯ ಸಶಸ್ತ್ರ ಪಡೆಗಳ ಪ್ರತಿನಿಧಿಯಾಗಿ ಭಾಗವಹಿಸಿದ ಕೀರ್ತಿ ಮನೋಜ್ ಪಾಂಡೆ ಅವರಿಗೆ ಸಲ್ಲುತ್ತದೆ.



ಭಾರತದ ಸೇನಾ ಮುಖ್ಯಸ್ಥ ಜನರಲ್ ಮನೋಜ್ ಪಾಂಡೆ ಅವರು ಹಾರ್ಸ್ ಗಾರ್ಡ್ ಪರೇಡ್‌ನಲ್ಲಿ ಗುರುವಾರ ಗಾರ್ಡ್ ಆಫ್ ಆನರ್ ಸ್ವೀಕರಿಸಿದರು –ಪಿಟಿಐ ಚಿತ್ರ

ಪರಮಾಣು ಇಂಧನ ಮಾರಾಟ: ರಷ್ಯಾಕ್ಕೆ ಆದಾಯ

ವಾಷಿಂಗ್ಟನ್ (ಎಪಿ): ಉಕ್ರೇನ್ ವಿರುದ್ಧದ ಸೇನಾ ಕಾರ್ಯಾಚರಣೆಗೆ ಪ್ರತಿಯಾಗಿ ಅಮೆರಿಕ ಮತ್ತು ಐರೋಪ್ಯ ಮಿತ್ರ ರಾಷ್ಟ್ರಗಳು ರಷ್ಯಾ ವಿರುದ್ಧ ಹಲವು ನಿರ್ಬಂಧಗಳನ್ನು ವಿಧಿಸಿವೆಯಾದರೂ, ಪರಮಾಣು ಇಂಧನ ಮತ್ತು ಉತ್ಪನ್ನಗಳನ್ನು ಭಾರಿ ಪ್ರಮಾಣದಲ್ಲಿ ಆಮದು ಮಾಡಿಕೊಳ್ಳುತ್ತಿವೆ. ಪರಿಣಾಮವಾಗಿ ಯುದ್ಧ ಮುನ್ನಡೆಸಲು ಹಣದ ಕೊರತೆ ಎದುರಿಸುತ್ತಿರುವ ರಾಷ್ಟ್ರಕ್ಕೆ ನೂರಾರು ಮಿಲಿಯನ್ ಡಾಲರ್‌ಗಳ ಆದಾಯ ಪಾಶ್ಚಾತ್ಯ ರಾಷ್ಟ್ರಗಳಿಂದಲೇ ಲಭ್ಯವಾಗುತ್ತಿದೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	750-800
ನಡುಗೋಲು	900-950
ರಾಶಿ	1000-1100
ರಾಶಿ ಉತ್ತಮ	1150-1200
ಹೆರಕಿದ್ದು	1600-1700
ಹಸಿರು ಸಾಧಾರಣ	1200-1250
ಹಸಿರು ಉತ್ತಮ	1600-1700
ಹಸಿರು ಅತಿ ಉತ್ತಮ	1900-2000
ಕಾಳುಮೆಣಸು	610
ಅಡಿಕೆ	
ಚಿತ್ರದುರ್ಗ	
ಅಪಿ	50619-51029
ಬೆಟ್ಟೆ	40149-40599
ಕೆಂಪುಗೋಟು	32409-32810
ರಾಶಿ	50139-50569
ಕುಮಟಾ	
ಚಿಪ್ಪು	27679-35399
ಕೋಕ	22099-34369
ಹಳೆಚಾಲಿ	38519-42131
ಹೊಸಚಾಲಿ	39300-42119
ಸಾಗರ	
ಬಿಳಿಗೋಟು	14510-34099
ಚಾಲಿ	33121-40099
ಕೋಕ	18399-37001
ಕೆಂಪುಗೋಟು	28989-40009
ರಾಶಿ	36699-51509
ಸಿಪ್ಪೆಗೋಟು	11369-22930
ಶಿವಮೊಗ್ಗ	
ಬೆಟ್ಟೆ	45009-54240
ಗೊರಬಲು	18050-40669
ರಾಶಿ	40009-53399
ಸರಕು	57869-79800
ಸಿದ್ದಾಪುರ	
ಬಿಳಿಗೋಟು	30699-35699
ಚಾಲಿ	38299-42250
ಕೋಕ	29619-35399
ಕೆಂಪುಗೋಟು	33899-35899
ರಾಶಿ	44109-50499
ತಟ್ಟಿಬೆಟ್ಟೆ	37889-42109
ಶಿರಸಿ	
ಬೆಟ್ಟೆ	40699-47669
ಬಿಳಿಗೋಟು	30899-36898
ಚಾಲಿ	37500-43299
ಕೆಂಪುಗೋಟು	28686-38688
ರಾಶಿ	46299-51699
ಯಲ್ಲಾಪುರ	
ಬಿಳಿಗೋಟು	28899-36800
ಚಾಲಿ	39025-42599
ಕೋಕ	19899-35912
ಕೆಂಪುಗೋಟು	29699-36735
ರಾಶಿ	48069-54199

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	14000	14000	13850	160.75 ಸೆಂಟ್ಸ್
ಎಸಿ	7140	6800	6950	
ಆರ್‌ಪಿ	10200	10300	10250	ಲಂಡನ್
ಆರ್‌ಸಿ	6230	250	6000	2679 ಡಾಲರ್ಸ್

ಖಾದ್ಯ ತೈಲ ಮುಂಬೈ

(10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1860 (1860)
ಸೋಯಾ (ರಿಫೈನ್ಡ್)	₹950 (950)
ಸೂರ್ಯಕಾಂತಿ (ರಿಫೈನ್ಡ್)	₹965 (965)
ಪಾಮೋಲಿನ್	₹850 (852)

ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ: ಇಂದು ಜಪಾನ್ ವಿರುದ್ಧ ಸೆಣಸು

ಫೈನಲ್‌ನತ್ತ ಭಾರತ ಚಿತ್ತ



ಭಾರತ ತಂಡದ ನಾಯಕ ಹರ್ಮನ್‌ಪ್ರೀತ್ ಸಿಂಗ್ (ಮಧ್ಯದಲ್ಲಿ) ಅವರು ಸೆಮಿಫೈನಲ್‌ನಲ್ಲೂ ಮಿಂಚುವ ವಿಶ್ವಾಸದಲ್ಲಿದ್ದಾರೆ –ಎಎಫ್‌ಪಿ ಚಿತ್ರ

ಚೆನ್ನೈ (ಪಿಟಿಐ): ಏಷ್ಯನ್ ಚಾಂಪಿಯನ್ಸ್ ಟ್ರೋಫಿ ಹಾಕಿ ಟೂರ್ನಿಯ ಫೈನಲ್ ಮೇಲೆ ಕಣ್ಣಿಟ್ಟಿರುವ ಭಾರತ ತಂಡ, ಶುಕ್ರವಾರ ನಡೆಯಲಿರುವ ಸೆಮಿಫೈನಲ್‌ನಲ್ಲಿ ಜಪಾನ್ ತಂಡವನ್ನು ಎದುರಿಸಲಿದೆ.

ಪೂರ್ಣ 60 ನಿಮಿಷಗಳ ಆಟದುದ್ದಕ್ಕೂ ಆಕ್ರಮಣಕಾರಿ ಮನೋಭಾವ ಮತ್ತು ವೇಗವನ್ನು ಕಾಯ್ದುಕೊಳ್ಳುವ ಜತೆಯಲ್ಲೇ ಗೋಲು ಗಳಿಸಲು ಲಭಿಸುವ ಅವಕಾಶವನ್ನು ಸಮರ್ಥವಾಗಿ ಬಳಸಿಕೊಳ್ಳುವ ಗುರಿಯನ್ನು ಆತಿಥೇಯ ತಂಡ ಇಟ್ಟುಕೊಂಡಿದೆ.

ರೌಂಡ್–ರಾಬಿನ್ ಲೀಗ್ ಹಂತದಲ್ಲಿ ಅಜೇಯ ಓಟದ ಮೂಲಕ ಪಾಯಿಂಟ್ ಪಟ್ಟಿಯಲ್ಲಿ ಅಗ್ರಸ್ಥಾನ ಗಳಿಸಿದ್ದ ಭಾರತ ತಂಡ ಶುಕ್ರವಾರದ ಪಂದ್ಯದಲ್ಲಿ ಗೆಲ್ಲುವ 'ಫೇವರಿಟ್' ಎಂಬುದರಲ್ಲಿ ಅನುಮಾನವಿಲ್ಲ.

ಆದರೂ ಹರ್ಮನ್‌ಪ್ರೀತ್ ಸಿಂಗ್ ಬಳಗ ಜಪಾನ್ ಬಗ್ಗೆ ಎಚ್ಚರದಿಂದ ಇರಬೇಕಾಗುತ್ತದೆ. ಏಕೆಂದರೆ ಭಾರತಕ್ಕೆ ಈ ಟೂರ್ನಿಯಲ್ಲಿ ಸೋಲಿಸಲು ಆಗದಿರುವ ತಂಡ ಜಪಾನ್ ಮಾತ್ರ. ಲೀಗ್ ಹಂತದಲ್ಲಿ ಉಭಯ ತಂಡಗಳು ಎದುರಾಗಿದ್ದಾಗ 1–1 ಡ್ರಾ ಆಗಿತ್ತು.

ವಿಶ್ವ ರ‍್ಯಾಂಕಿಂಗ್‌ನಲ್ಲಿ ಇವೆರಡು ತಂಡಗಳ ನಡುವೆ ಭಾರಿ ಅಂತರವಿದೆ. ಭಾರತ ನಾಲ್ಕನೇ ಸ್ಥಾನದಲ್ಲಿದ್ದರೆ, ಜಪಾನ್ ತಂಡ 19ನೇ ರ‍್ಯಾಂಕ್ ಹೊಂದಿದೆ. ಆದರೆ 2021ರಲ್ಲಿ ಢಾಕಾದಲ್ಲಿ ನಡೆದಿದ್ದ ಟೂರ್ನಿಯ ಲೀಗ್ ಹಂತದಲ್ಲಿ ಜಪಾನ್ ತಂಡವನ್ನು 6–0 ರಿಂದ ಮಣಿಸಿದ್ದರೂ, ಸೆಮಿಫೈನಲ್‌ನಲ್ಲಿ 3–5 ರಿಂದ ಸೋತಿದ್ದನ್ನು ಆತಿಥೇಯರು ಮರೆಯಬಾರದು.

ಭಾರತ ತಂಡ ಈ ಟೂರ್ನಿಯಲ್ಲಿ ಒಟ್ಟು 20 ಗೋಲುಗಳನ್ನು ಗಳಿಸಿದೆಯಾದರೂ, ಜಪಾನ್ ವಿರುದ್ಧದ ಲೀಗ್ ಪಂದ್ಯದಲ್ಲಿ ಗೋಲು ಗಳಿಸುವ ಸಾಕಷ್ಟು ಅವಕಾಶಗಳನ್ನು ಹಾಳುಮಾಡಿಕೊಂಡಿತ್ತು. ಅದೇ ತಪ್ಪು ಪುನರಾವರ್ತನೆಯಾಗದಂತೆ ಎಚ್ಚರವಹಿಸಬೇಕಿದೆ. ಆ ಪಂದ್ಯದಲ್ಲಿ ಭಾರತಕ್ಕೆ 15 ಪೆನಾಲ್ಟಿ ಕಾರ್ನರ್ ಅವಕಾಶಗಳು ಲಭಿಸಿದ್ದರೂ, ಒಂದನ್ನು ಮಾತ್ರ ಗೋಲಾಗಿ ಪರಿವರ್ತಿಸಿತ್ತು.

ಪಂದ್ಯದ ಎಲ್ಲ ನಾಲ್ಕು ಕ್ವಾರ್ಟರ್‌ಗಳಲ್ಲೂ ಆಟಗಾರರು ಪ್ರದರ್ಶನದಲ್ಲಿ ಸ್ಥಿರತೆ ಕಾಪಾಡಿಕೊಳ್ಳುವುದು ಮುಖ್ಯ. ಪಾಕಿಸ್ತಾನ ವಿರುದ್ಧದ ಕೊನೆಯ ಲೀಗ್ ಪಂದ್ಯದಲ್ಲಿ ಭಾರತದ ಆಟಗಾರರು ಆರಂಭದಿಂದ ಕೊನೆಯವರೆಗೂ ಒಂದೇ ಲಯ ಕಾಪಾಡಿಕೊಂಡಿದ್ದರು.

ಜಪಾನ್ ತಂಡ ಲೀಗ್ ಹಂತದಲ್ಲಿ ಒಂದು ಪಂದ್ಯವನ್ನು ಮಾತ್ರ (ಚೀನಾ ವಿರುದ್ಧ) ಗೆದ್ದುಕೊಂಡಿತ್ತು. ಒಂದರಲ್ಲಿ ಸೋತಿದ್ದರೆ, ಎರಡು ಪಂದ್ಯಗಳನ್ನು ಡ್ರಾ ಮಾಡಿಕೊಂಡಿತ್ತು.

ಇನ್ನೊಂದು ಸೆಮಿಫೈನಲ್‌ನಲ್ಲಿ ಮಲೇಷ್ಯಾ ಮತ್ತು ಕೊರಿಯಾ ತಂಡಗಳು ಎದುರಾಗಲಿವೆ. ಐದು ಮತ್ತು ಆರನೇ ಸ್ಥಾನ ನಿರ್ಣಯಿಸಲು ನಡೆಯುವ ಪಂದ್ಯದಲ್ಲಿ ಪಾಕಿಸ್ತಾನ– ಚೀನಾ ಸೆಣಸಾಟ ನಡೆಸಲಿವೆ.

ಇಂದಿನ ಪಂದ್ಯಗಳು

5/6 ನೇ ಸ್ಥಾನ

ಪಾಕಿಸ್ತಾನ–ಚೀನಾ (ಮಧ್ಯಾಹ್ನ 3.30)

ಸೆಮಿಫೈನಲ್

ಮಲೇಷ್ಯಾ–ದಕ್ಷಿಣ ಕೊರಿಯಾ (ಸಂಜೆ 6)

ಭಾರತ–ಜಪಾನ್ (ರಾತ್ರಿ 8.30)

ಚೆಸ್: ಐದನೇ ಸುತ್ತಿಗೆ ಅರ್ಜುನ್, ವಿದಿತ್

ಬಾಕು (ಅಜರ್‌ಬೈಜಾನ್): ಭಾರತದ ವಿದಿತ್ ಸಂತೋಷ್ ಗುಜರಾತಿ ಮತ್ತು ಅರ್ಜುನ್ ಎರಿಗೇಶಿ ಅವರು ಇಲ್ಲಿನ ಮ್ಯಾರಿಯಟ್ ಹೋಟೆಲ್‌ನಲ್ಲಿ ನಡೆಯುತ್ತಿರುವ ವಿಶ್ವ ಕಪ್ ಚೆಸ್ ಟೂರ್ನಿಯಲ್ಲಿ ಗುರುವಾರ ತಮ್ಮ ಪಂದ್ಯಗಳನ್ನು ಗೆದ್ದು ಐದನೇ ಸುತ್ತಿಗೇರಿದರು.

ವಿದಿತ್ ನಾಲ್ಕನೇ ಸುತ್ತಿನಲ್ಲಿ 1.5–0.5 ರಿಂದ ಎಟಿನ್ ಬ್ಯಾಕ್ರೋಟ್ ಅವರನ್ನು ಸೋಲಿಸಿದರು. ಬುಧವಾರ ಮೊದಲ ಪಂದ್ಯದಲ್ಲಿ ಜಯ ಗಳಿಸಿದ್ದ ಅವರು ಎರಡನೇ ಪಂದ್ಯ ಡ್ರಾ ಮಾಡಿಕೊಂಡರು. ಇನ್ನೊಂದು ಪಂದ್ಯದಲ್ಲಿ ಅರ್ಜುನ್ 1.5–0.5 ರಿಂದ ಜಾವೊಖಿರ್ ಸಿಂಧರೋವ್ ಮೇಲೆ ಜಯ ಗಳಿಸಿದರು. ಅರ್ಜುನ್ ಗುರುವಾರದ ಪಂದ್ಯದಲ್ಲಿ ಯಶಸ್ಸು ಪಡೆದರು.

ನಿಹಾಲ್ ಸರೀನ್, ದೊಮ್ಮರಾಜು ಗುಕೇಶ್, ಪ್ರಜ್ಞಾನಂದ ರಮೇಶಬಾಬು ಅವರು ಎರಡು ಪಂದ್ಯಗಳ ನಂತರ ತಮ್ಮ ಎದುರಾಳಿಗಳ ಜೊತೆ 1–1 ಸಮಬಲ ಮಾಡಿಕೊಂಡಿದ್ದು, ಶುಕ್ರವಾರ ಟೈಬ್ರೇಕರ್ ಆಡಬೇಕಾಗಿದೆ.

ನಿಹಾಲ್ ಸರಿನ್– ಇಯಾನ್ ನೆಪೊಮ್ ನಿಯಾಶಿ; ಗುಕೇಶ್– ಆಂಡ್ರಿ ಇಸಿಪೆಂಕೊ; ಪ್ರಜ್ಞಾನಂದ– ಹಿಕಾರು ನಕಾಮುರ ನಡುವಣ ಎರಡನೇ ಪಂದ್ಯ ವೂ 'ಡ್ರಾ' ಆಗಿದೆ. ಬುಧವಾರ ಮೊದಲ ಪಂದ್ಯ ಸೋತಿದ್ದ ಮ್ಯಾಗ್ನಸ್ ಕಾರ್ಲ್‌ಸನ್ (ನಾರ್ವೆ) ಗುರುವಾರ ವಿನ್ಸೆಂಟ್ ಕೀಮರ್ ಎದುರು ಜಯ ಸಾಧಿಸಿದರು. ಹೀಗಾಗಿ ಈ ಪಂದ್ಯವೂ ಟೈಬ್ರೇಕರ್‌ಗೆ ಹೋಗಿದೆ.

ಜಪಾನ್‌ಗೆ ಸ್ವೀಡನ್ ಸವಾಲು

ವಿಶ್ವಕಪ್ ಫುಟ್‌ಬಾಲ್: ಇಂದು ಎರಡು ಕ್ವಾರ್ಟರ್‌ಫೈನಲ್



ಜಪಾನ್ ತಂಡದ ಆಟಗಾರ್ತಿಯರು ಅಭ್ಯಾಸ ನಡೆಸಿದರು –ಎಎಫ್‌ಪಿ ಚಿತ್ರ

ಆಕ್ಲೆಂಡ್ (ಎಪಿ): ಹಾಲಿ ಮಹಿಳಾ ವಿಶ್ವಕಪ್ ಫುಟ್‌ಬಾಲ್ ಟೂರ್ನಿಯಲ್ಲಿ ಜಪಾನ್ ತಂಡಕ್ಕೆ ಮಾತ್ರ ಹೆಚ್ಚು ಸತ್ವಪರೀಕ್ಷೆ ಎದುರಾಗಿಲ್ಲ. ಪ್ರಿಕ್ವಾರ್ಟರ್‌ಫೈನಲ್‌ನಲ್ಲಿ 3–1 ನಾರ್ವೆ ವಿರುದ್ಧ ಜಯ ಗಳಿಸಿದ್ದ ಈ ತಂಡ ಶುಕ್ರವಾರ ಆಕ್ಲೆಂಡ್‌ನ ಈಡನ್‌ಪಾರ್ಕ್‌ನಲ್ಲಿ ನಡೆಯುವ ಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಸ್ವೀಡನ್ ತಂಡವನ್ನು ಎದುರಿಸಲಿದೆ.

ನೆದರ್ಲೆಂಡ್ಸ್ ತಂಡ, ವೆಲ್ಲಿಂಗ್ಟನ್‌ನಲ್ಲಿ ಶುಕ್ರವಾರವೇ ನಡೆಯುವ ಎಂಟರ ಘಟ್ಟದ ಇನ್ನೊಂದು ಪಂದ್ಯದಲ್ಲಿ ಸ್ಪೇನ್ ತಂಡವನ್ನು ಎದುರಿಸಲಿದೆ.

ಸ್ವೀಡನ್ ಸವಾಲು: ಸ್ವೀಡನ್ ಮಹಿಳಾ ಕ್ರಮಾಂಕ ಪಟ್ಟಿಯಲ್ಲಿ ಮೂರನೇ ಸ್ಥಾನದಲ್ಲಿದೆ. ಈ ವಿಶ್ವಕಪ್‌ನಲ್ಲಿ ಸ್ಪರ್ಧೆ ಇನ್ನೂ ಉಳಿಸಿಕೊಂಡಿರುವ ತಂಡಗಳಲ್ಲಿ ಸ್ಪೇನ್ ಗರಿಷ್ಠ ರ‍್ಯಾಂಕ್ ಹೊಂದಿದೆ. ಮೂರು ಬಾರಿ ಮೂರನೇ ಸ್ಥಾನದಲ್ಲಿ ವಿಶ್ವಕಪ್ ಅಭಿಯಾನ ಮುಗಿಸಿರುವ ಸ್ವೀಡನ್ ತಂಡ ಈ ಬಾರಿ ಫೈನಲ್‌ನಲ್ಲಿ ಆಡುವ ತವಕದಲ್ಲಿದೆ.

ಸತತ ಮೂರನೇ ವಿಶ್ವಕಪ್ ಗೆಲ್ಲುವ ಅಮೆರಿಕದ ಕನಸಿಗೆ ತಣ್ಣೀರೆರಚಿದ ಸ್ವೀಡನ್, ಈ ಹಿಂದೆ ಮೂರು ಬಾರಿ ಸೆಮಿಫೈನಲ್ ತಲುಪಿದೆ. 2003ರಿಂದೀಚೆಗೆ ಫೈನಲ್ ತಲುಪಿಲ್ಲ. ಸ್ವೀಡನ್ ಗೋಲ್‌ಕೀಪರ್ ಝೆಸಿರಾ ಮುಸೋವಿಕ್ ಸಾಹಸದಿಂದ ಸ್ವೀಡನ್, ಶೂಟೌಟ್‌ನಲ್ಲಿ ಅಮೆರಿಕವನ್ನು ಸೋಲಿಸಿತ್ತು.

ಜಪಾನ್ ತಂಡದ ಹಿನಾಟ ಮಿಯಾಝಾವಾ ಅವರು ನಾಲ್ಕು ಪಂದ್ಯಗಳಲ್ಲಿ ಐದು ಗೋಲುಗಳನ್ನು ಗಳಿಸಿದ್ದಾರೆ. ಅವರು ಗೋಲ್ಡನ್ ಬೂಟ್ ರೇಸ್‌ನಲ್ಲಿದ್ದಾರೆ. 2011ರಲ್ಲಿ ಜಪಾನ್ ವಿಶ್ವಕಪ್ ಗೆದ್ದಾಗ ಹೊಮಾರೆ ಸಾವಾ ಐದು ಗೋಲುಗಳಿಸಿದ್ದು, ಹಿನಾಟ ಅದನ್ನು ಈಗಾಗಲೇ ಸರಿಗಟ್ಟಿದ್ದಾರೆ.

ಜಪಾನ್ ಇದುವರೆಗಿನ ಪಂದ್ಯಗಳಲ್ಲಿ ದಾಖಲೆ 14 ಗೋಲುಗಳನ್ನು ಗಳಿಸಿದ್ದು, ಒಂದು ಗೋಲು ಮಾತ್ರ ಬಿಟ್ಟುಕೊಟ್ಟಿದೆ. ನಾರ್ವೆ ವಿರುದ್ಧ ನಾಕೌಟ್ ಪಂದ್ಯದಲ್ಲಿ 3–1 ಗೆಲುವಿನಲ್ಲಿ ಆ ಗೋಲು ಬಿಟ್ಟುಕೊಟ್ಟಿತ್ತು.

ಪ್ರತಿಷ್ಠೆಯ ಪಂದ್ಯ: ನಾಲ್ಕು ವರ್ಷಗಳ ಹಿಂದೆ ಅಮೆರಿಕ ಎದುರು ರನ್ನರ್ ಅಪ್ ಆಗಿದ್ದ ಡಚ್ ತಂಡ, ಈಗ ಪ್ರಬಲ ತಂಡವಾಗಿ ಹೊರಹೊಮ್ಮುವ ಅವಕಾಶ ಹೊಂದಿದೆ. ಟೋಕಿಯೊ ಒಲಿಂಪಿಕ್ಸ್‌ನ ಕ್ವಾರ್ಟರ್‌ಫೈನಲ್‌ನಲ್ಲೂ ನೆದರ್ಲೆಂಡ್ಸ್ ಓಟಕ್ಕೆ ಅಮೆರಿಕ ತಡೆಯೊಡ್ಡಿತ್ತು.

ಅಮೆರಿಕ ಈಗಾಗಲೇ ಹೊರಬಿದ್ದಿದ್ದು, ನೆದರ್ಲೆಂಡ್ಸ್‌ನ ದೊಡ್ಡ ತಡೆಯೊಂದು ನಿವಾರಣೆ ಆಗಿದೆ. ಆದರೆ ಅದು ಸ್ಪೇನ್ ಸವಾಲನ್ನು ಎದುರಿಸಬೇಕಾಗಿದೆ. ಸ್ಪೇನ್ ಈ ಹಿಂದೆ ಎಂದೂ ಮಹಿಳಾ ವಿಶ್ವಕಪ್ ಎಂಟರ ಘಟ್ಟ ತಲುಪಿರಲಿಲ್ಲ.

ಆದರೆ ಹಾಲಿ ವಿಶ್ವಕಪ್‌ನಲ್ಲಿ ಸ್ಪೇನ್ ಮಹಿಳೆಯರು ಆಕ್ರಮಣಕಾರಿಯಾಗಿ ಆಡಿದ್ದಾರೆ. ನಾಲ್ಕು ಪಂದ್ಯಗಳಲ್ಲಿ 13 ಗೋಲುಗಳನ್ನು ಬಾರಿಸಿದ್ದಾರೆ. ಜಪಾನ್ ವಿರುದ್ಧ ಲೀಗ್ ಹಂತದಲ್ಲಿ ಒಂದು ಸೋಲು ಬಿಟ್ಟರೆ ಉಳಿದಂತೆ ಅದರ ಅಭಿಯಾನದಲ್ಲಿ ಕಳಂಕ ಕಂಡುಬಂದಿಲ್ಲ.

ಮೊದಲ ಆರು ವಿಶ್ವಕಪ್ ಆವೃತ್ತಿಗಳಲ್ಲಿ ಅರ್ಹತೆ ಪಡೆಯಲು ವಿಫಲವಾಗಿದ್ದ ಡಚ್ ತಂಡ, 2015ರಲ್ಲಿ ವಿಶ್ವಕಪ್‌ಗೆ ಪದಾರ್ಪಣೆ ಮಾಡಿತ್ತು, ಕಳೆದ ಬಾರಿ (2019) ಫೈನಲ್ ತಲುಪಿತ್ತು.

ಹಾಕಿ: ಕೋಚ್ ವಿರುದ್ಧ ರಾಣಿ ರಾಂಪಾಲ್ ಆಕ್ರೋಶ



ರಾಣಿ ರಾಂಪಾಲ್

ಚೆನ್ನೈ (ಪಿಟಿಐ): ಕಳೆದ ಎರಡು ವರ್ಷಗಳಿಂದ ತಮ್ಮನ್ನು ರಾಷ್ಟ್ರೀಯ ತಂಡಕ್ಕೆ ಆಯ್ಕೆ ಮಾಡದಿರುವುದಕ್ಕೆ ಭಾರತ ಮಹಿಳಾ ಹಾಕಿ ತಂಡದ ಮಾಜಿ ನಾಯಕಿ ರಾಣಿ ರಾಂಪಾಲ್ ಅವರು ಮುಖ್ಯ ಕೋಚ್ ಯಾನೆಕ್ ಶೋಪ್‌ಮನ್ ವಿರುದ್ಧ ಹರಿಹಾಯ್ದಿದ್ದಾರೆ.

'ನನ್ನನ್ನು ತಂಡದಿಂದ ಕೈಬಿಟ್ಟಿರುವುದರ ಕಾರಣವನ್ನು ಕೋಚ್ ಮಾತ್ರ ತಿಳಿಸಬಲ್ಲರು' ಎಂದು ಅವರು ಗುರುವಾರ ಆಕ್ರೋಶ ಹೊರಹಾಕಿದರು. ಅದೇ ರೀತಿ ನಿವೃತ್ತಿಯ ಬಗ್ಗೆ ಯಾವುದೇ ಯೋಚನೆ ಮಾಡಿಲ್ಲ ಎಂದು ಸ್ಪಷ್ಟಪಡಿಸಿದರು.

'ಕಳೆದ ಎರಡು ವರ್ಷಗಳಲ್ಲಿ ನನಗೆ ಅನ್ಯಾಯ ಆಗಿದೆ. ಗಾಯದಿಂದ ಚೇತರಿಸಿಕೊಂಡು ಫಿಟ್‌ನೆಸ್ ಮರಳಿ ಪಡೆದು ರಾಷ್ಟ್ರೀಯ ಕ್ರೀಡಾಕೂಟದಲ್ಲಿ ಉತ್ತಮ ಪ್ರದರ್ಶನ ನೀಡಿದ್ದರೂ ಭಾರತ ತಂಡಕ್ಕೆ ನನ್ನನ್ನು ಮತ್ತೆ ಆಯ್ಕೆ ಮಾಡಿಲ್ಲ' ಎಂದು 28 ವರ್ಷದ ಅವರು ಹೇಳಿದ್ದಾರೆ.

'ತಂಡಕ್ಕೆ ಆಯ್ಕೆಯಾಗಿಲ್ಲ ಎಂಬ ಕಾರಣ ನಿವೃತ್ತಿ ಬಗ್ಗೆ ಯೋಚಿಸಿಲ್ಲ. ಆಟಗಾರ್ತಿಯಾಗಿ ಕ್ರೀಡೆಗೆ ಇನ್ನೂ ಹೆಚ್ಚಿನದನ್ನು ನೀಡುವ ಸಾಮರ್ಥ್ಯ ಇದೆ. ನಾನು ಎಂದಿಗೂ ಸುಲಭದಲ್ಲಿ ಬಿಟ್ಟುಕೊಡುವವಳಲ್ಲ. ನಿವೃತ್ತಿಯಾಗಲು ಮನಸ್ಸು ಮಾಡಿದ್ದರೆ, ಟೋಕಿಯೊ ಒಲಿಂಪಿಕ್ಸ್‌ನ ಬೆನ್ನಲ್ಲೇ ಅಂತಹ ನಿರ್ಧಾರ ತೆಗೆದುಕೊಳ್ಳುತ್ತಿದ್ದೆ' ಎಂದಿದ್ದಾರೆ.

ಕೋಚ್ ಆಗಿ ನೇಮಕ: ಯೂತ್ ಮಟ್ಟದಲ್ಲಿ ಹಾಕಿ ಕ್ರೀಡೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಸಬ್ ಜೂನಿಯರ್ (17 ವರ್ಷದೊಳಗಿನವರ) ಬಾಲಕರ ಮತ್ತು ಬಾಲಕಿಯರ ವಿಭಾಗಗಳಲ್ಲಿ ರಾಷ್ಟ್ರೀಯ ತಂಡವನ್ನು ರಚಿಸುವುದಾಗಿ ಹಾಕಿ ಇಂಡಿಯಾ (ಎಚ್‌ಐ) ಗುರುವಾರ ಪ್ರಕಟಿಸಿದೆ. ಈ ತಂಡಗಳಿಗೆ ಕ್ರಮವಾಗಿ ಸರ್ದಾರ್ ಸಿಂಗ್ ಮತ್ತು ರಾಣಿ ರಾಂಪಾಲ್ ಅವರನ್ನು ಕೋಚ್ ಆಗಿ ನೇಮಕ ಮಾಡಿದೆ.

ಸಾತ್ವಿಕ್– ಚಿರಾಗ್ ಜೋಡಿಗೆ 'ಬೈ'

ಕ್ವಾಲಾಲಂಪುರ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಮತ್ತು ಪುರುಷರ ಡಬಲ್ಸ್‌ನಲ್ಲಿ ಸಾತ್ವಿಕ್‌ಸಾಯಿರಾಜ್ ರಣಕಿರೆಡ್ಡಿ– ಚಿರಾಗ್ ಶೆಟ್ಟಿ ಅವರು ಬಿಡಬ್ಲ್ಯುಎಫ್ ವಿಶ್ವ ಬ್ಯಾಡ್ಮಿಂಟನ್ ಚಾಂಪಿಯನ್‌ಷಿಪ್ ಟೂರ್ನಿಯ ಮೊದಲ ಸುತ್ತಿನಲ್ಲಿ 'ಬೈ' ಪಡೆದಿದ್ದಾರೆ.

ಡೆನ್ಮಾರ್ಕ್‌ನ ಕೋಪನ್ ಹ್ಯಾಗನ್‌ನಲ್ಲಿ ಆ.21ರಿಂದ 27ರವರೆಗೆ ಟೂರ್ನಿ ನಡೆಯಲಿದೆ. ಮೊದಲ ಸುತ್ತಿನ ಪಂದ್ಯಗಳ 'ಡ್ರಾ' ಎತ್ತುವ ಸಮಾರಂಭ ಗುರುವಾರ ನಡೆಯಿತು. ಮಹಿಳಾ ಸಿಂಗಲ್ಸ್‌ನಲ್ಲಿ ಸಿಂಧು ಭಾರತದ ಏಕೈಕ ಆಟಗಾರ್ತಿಯಾಗಿದ್ದಾರೆ. ಅವರು 2019ರಲ್ಲಿ ಚಾಂಪಿಯನ್ ಆಗಿದ್ದರು.

ವಿಶ್ವ ಚಾಂಪಿಯನ್‌ಷಿಪ್‌ನ ಕಂಚಿನ ಪದಕ ವಿಜೇತರಾದ ಭಾರತದ ಸಾತ್ವಿಕ್ ಮತ್ತು ಚಿರಾಗ್ ಜೋಡಿ ಪ್ರಸ್ತುತ ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನ ಪಡೆದಿದೆ. ಕಳೆದ ತಿಂಗಳು ಕೊರಿಯಾ ಓಪನ್‌ನಲ್ಲಿ ಚಾಂಪಿಯನ್ ಆದ ಬಳಿಕ ವೃತ್ತಿಜೀವನದ ಅತ್ಯುತ್ತಮ ಕ್ರಮಾಂಕ ಪಡೆದಿದೆ.

ಪುರುಷರ ಸಿಂಗಲ್ಸ್‌ನಲ್ಲಿ ಭಾರತದ ಸವಾಲನ್ನು ಎರಡನೇ ಶ್ರೇಯಾಂಕದ ಎಚ್.ಎಸ್. ಪ್ರಣಯ್ ಮುನ್ನಡೆಸಲಿದ್ದು, ಅವರು ಮೊದಲ ಸುತ್ತಿನಲ್ಲಿ ಫಿನ್ಲೆಂಡ್‌ನ ಕಾಲೆ ಕೊಲ್ಜೊನೆನ್ ಅವರ ಸವಾಲನ್ನು ಎದುರಿಸುವರು.

ಲಕ್ಷ್ಯ ಸೇನ್ ಮತ್ತು ಕಿದಂಬಿ ಶ್ರೀಕಾಂತ್ ಅವರು ಸಿಂಗಲ್ಸ್‌ನ ಮೊದಲ ರೌಂಡ್‌ನಲ್ಲಿ ಕ್ರಮವಾಗಿ ಮಾರಿಷಸ್‌ನ ಜಾರ್ಜಸ್ ಜೂಲಿಯನ್ ಪಾಲ್ ಮತ್ತು ಜಪಾನ್‌ನ ಕೆಂಟಾ ನಿಶಿಮೊಟೊ ಅವರನ್ನು ಎದುರಿಸುವರು. ಪುರುಷರ ಸಿಂಗಲ್ಸ್‌ನಲ್ಲಿ 66, ಮಹಿಳಾ ಸಿಂಗಲ್ಸ್‌ನಲ್ಲಿ 48 ಮಂದಿ ಭಾಗವಹಿಸಲಿದ್ದಾರೆ.

ಬಿಟಿಸಿಯಲ್ಲಿ ರೇಸ್ ಚಟುವಟಿಕೆ ಪುನರಾರಂಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಸರ್ಕಾರವು ಮಾಸಿಕ ಪರವಾನಗಿ ನವೀಕರಣ ಮಾಡಿರುವುದರಿಂದ ಬೆಂಗಳೂರು ಟರ್ಫ್ ಕ್ಲಬ್‌ನಲ್ಲಿ (ಬಿಟಿಸಿ) ರೇಸ್ ಚಟುವಟಿಕೆಗಳು ಶುಕ್ರವಾರ ಪುನರಾರಂಭವಾಗಲಿದೆ.

ಮಾಸಿಕ ಪರವಾನಗಿ ನವೀಕರಣ ಮಾಡಲು ಆರಂಭದಲ್ಲಿ ಸರ್ಕಾರ ಒಪ್ಪಿರಲಿಲ್ಲ. ಇದರಿಂದ ಆ.1 ರಿಂದ ಬಿಟಿಸಿಯಲ್ಲಿ ನಡೆಯಬೇಕಿದ್ದ ರೇಸ್‌ಗಳು, ಆಫ್‌ಕೋರ್ಸ್ ಬೆಟ್ಟಿಂಗ್ ಚಟುವಟಿಕೆಗಳು ಸ್ಥಗಿತವಾಗಿದ್ದವು.

ಸರ್ಕಾರದೊಂದಿಗಿನ ಮಾತುಕತೆ ಸಫಲವಾಗಿದ್ದು, ಆಗಸ್ಟ್ ತಿಂಗಳ ಪರವಾನಗಿ ನವೀಕರಣಗೊಂಡಿದೆ. ಆದ್ದರಿಂದ ಬೇಸಿಗೆ ರೇಸ್‌ನ ಇನ್ನುಳಿದ ನಾಲ್ಕು ರೇಸ್‌ಗಳನ್ನು ನಡೆಸಲು ಇದ್ದ ಅಡ್ಡಿ ದೂರವಾಗಿದೆ.

ಸ್ಥಳಾಂತರಕ್ಕೆ ಒಪ್ಪಿಗೆ: ನಗರದ ಹೃದಯ ಭಾಗದಲ್ಲಿರುವ ಸ್ಥಳದಿಂದ ರೇಸ್‌ಕೋರ್ಸ್ ಅನ್ನು ಬೇರೆಡೆಗೆ ಸ್ಥಳಾಂತರಿಸಬೇಕು ಮತ್ತು ಸುಪ್ರೀಂ ಕೋರ್ಟ್‌ನಲ್ಲಿರುವ ಪ್ರಕರಣವನ್ನು ಹಿಂಪಡೆಯಬೇಕು ಎಂದು ಸರ್ಕಾರ ಪಟ್ಟು ಹಿಡಿದಿತ್ತು.

ಕ್ಲಬ್ ಆಡಳಿತ ಸಮಿತಿಯು ಗುರುವಾರ ಮುಖ್ಯಮಂತ್ರಿ ಅವರನ್ನು ಭೇಟಿಯಾಗಿ ಎರಡನೇ ಸುತ್ತಿನ ಮಾತುಕತೆ ನಡೆಸಿದೆ. ಸರ್ಕಾರದ ಬೇಡಿಕೆಗಳಿಗೆ ಬಿಟಿಸಿ ತಾತ್ವಿಕ ಒಪ್ಪಿಗೆ ನೀಡಿದೆ ಎಂದು ಮೂಲಗಳು ತಿಳಿಸಿವೆ.

ಬೆಂಗಳೂರು ರೇಸ್

ಅಗ್ನಾಸ್ಟಿಕ್ ಗೆಲ್ಲುವ ನಿರೀಕ್ಷೆ

ಬೆಂಗಳೂರು ಸಿಟಿ ಸ್ಪ್ರಿಂಟ್ ಚಾಂಪಿಯನ್‌ಶಿಪ್ ಗೋಲ್ಡ್ ಕಪ್ ಶುಕ್ರವಾರದ ಬೆಂಗಳೂರು ರೇಸ್‌ಗಳ ಪ್ರಧಾನ ಆಕರ್ಷಣೆಯಾಗಿದ್ದು, ಅಗ್ನಾಸ್ಟಿಕ್ ಈ ರೇಸ್‌ನಲ್ಲಿ ಗೆಲ್ಲುವ ನಿರೀಕ್ಷೆಯಿದೆ. ಮಧ್ಯಾಹ್ನ 1:00ಕ್ಕೆ ಪ್ರಾರಂಭವಾಗಲಿರುವ ದಿನದ ಹತ್ತು ರೇಸ್‌ಗಳಿಗೆ ನಮ್ಮ ಆಯ್ಕೆ ಈ ಕೆಳಕಂಡಂತಿವೆ:

1ನೇ ರೇಸ್: ಸ್ಲಿಂಗ್ ಶಾಟ್ 6, ಕೊನಿಚಿವ 1, ಏರ್ ಬ್ಲಾಸ್ಟ್ 2

2ನೇ ರೇಸ್: ದಿ ಪಿರೇಟ್ 4, ಫಿಯರ್ಲೆಸ್ ಜೊಯಿ 3, ಈಸ್ಟರ್ನ್ ಸೀ 1

3ನೇ ರೇಸ್: ಸಸ್ಸಿ 10, ಐರಿಶ್ ಕಾಫಿ 2, ಆಲ್ಡೀವ 1

4ನೇ ರೇಸ್: ರಾಪ್ಸೊಡಿ ಇನ್ ಗ್ರೀನ್ 6, ಮೆಮೋರಬಲ್ ಟೈಮ್ 3, ಬ್ರೂಸ್ ಆಲ್‌ಮೈಟಿ 1

5ನೇ ರೇಸ್: ನ್ಯಾಯ 10, ಸ್ಟಾರ್ ಕಾನ್ಸೆಪ್ಟ್ 8, ಕ್ರಾಸ್‌ವಾಟರ್ 9

6ನೇ ರೇಸ್: ಫಾಂಡ್‌ನೆಸ್ ಆಫ್ ಯೂ 3, ಕ್ಲಿಫೋರ್ಡ್ 4, ಲೆದರ್‌ಬ್ಯಾಕ್ 6

7ನೇ ರೇಸ್: ಅಗ್ನಾಸ್ಟಿಕ್ 1, ಆಲ್ ಅಟ್ರ್ಯಾಕ್ಟಿವ್ 2

8ನೇ ರೇಸ್: ಟಚ್ ಆಫ್ ಗ್ರೇ 1, ಆಸ್ಪೀಸಿಯಸ್ ಕ್ವೀನ್ 2

9ನೇ ರೇಸ್: ಇನ್‌ಯುವಿಬಿಲೀವ್ 1, ಅಕ್ವಾಮೆಟಿಕ್ 12, ವಿಕ್ಟೋರಿಯಾ ಪಂಚ್ 2

10ನೇ ರೇಸ್: ಅಕಸ್ಟರ್ 1, ಸದರ್ನ್ ಪವರ್ 2, ಸ್ಟ್ರೈಕಿಂಗ್ ಮೆಮೋರಿ 3

ಉತ್ತಮ ಬೆಟ್: ನ್ಯಾಯ

ಜಾಕ್‌ಪಾಟ್	1ನೇ ಟ್ರಿಬಲ್	2ನೇ ಟ್ರಿಬಲ್	3ನೇ ಟ್ರಿಬಲ್
6,7,8,9,10	2,3,4	5,6,7	8,9,10

ಚೆನ್ನೈಯಿನ್ ತಂಡಕ್ಕೆ ಜಯ

ಗುವಾಹಟಿ (ಪಿಟಿಐ): ಚೆನ್ನೈಯಿನ್ ಎಫ್.ಸಿ ತಂಡದವರು ಡುರಾಂಡ್ ಕಪ್ ಫುಟ್‌ಬಾಲ್ ಟೂರ್ನಿಯಲ್ಲಿ 3–1ರಿಂದ ಹೈದರಾಬಾದ್ ಎಫ್.ಸಿ ತಂಡವನ್ನು ಮಣಿಸಿದರು.

ಗುರುವಾರ ನಡೆದ 'ಇ' ಗುಂಪಿನ ಪಂದ್ಯದಲ್ಲಿ ಹೈದರಾಬಾದ್ ತಂಡದ ನಾಯಕ ಚಿಂಗ್ಲೆನ್ ಸನಾ ಸಿಂಗ್ ಪೆನಾಲ್ಟಿ ಮೂಲಕ 4ನೇ ನಿಮಿಷದಲ್ಲಿ ಗೋಲು ಗಳಿಸುವ ಮೂಲಕ ತಂಡಕ್ಕೆ ಮುನ್ನಡೆ ತಂದುಕೊಟ್ಟರು. ಆದರೆ, ಚೆನ್ನೈಯಿನ್ ತಂಡದ ಅಲೆಕ್ಸ್ ಸಾಜಿ 6ನೇ ನಿಮಿಷದಲ್ಲಿ ಚೆಂಡನ್ನು ಗುರಿ ಸೇರಿಸಿ, ಸಮಬಲಕ್ಕೆ ತಂದಿಟ್ಟರು. ನಂತರದಲ್ಲಿ ಕಾನರ್ ಶೀಲ್ಡ್ಸ್ (15ನೇ) ಮತ್ತು ಜೋರ್ಡಾನ್ ಮುರ್ರೆ (46 ನೇ) ಗೋಲು ಗಳಿಸಿ, ತಂಡದ ಗೆಲುವಿನ ಅಂತರ ಹೆಚ್ಚಿಸಿದರು.

ಕೋಲ್ಕತ್ತ: ಮತ್ತೊಂದು ಪಂದ್ಯ ದಲ್ಲಿ ಪಂಜಾಬ್ ಎಫ್.ಸಿ ತಂಡ ಗೋಲು ರಹಿತವಾಗಿ ಬಾಂಗ್ಲಾದೇಶ ಆರ್ಮಿ ತಂಡದೊಂದಿಗೆ ಡ್ರಾ ಸಾಧಿಸಿದರು.

ಇಸ್ರೊ: ವೈಜ್ಞಾನಿಕ ಅನ್ವೇಷಣೆಗೆ ಸೀಮಿತವಾಗದ ಅಂತರಿಕ್ಷ ಕಾರ್ಯಕ್ರಮ

'ಚಂದ್ರನ ಬಾಹ್ಯಾಕಾಶ ಅಧ್ಯಯನಕ್ಕೆ ತಯಾರಿ'

ಪ್ರಜಾವಾಣಿ ವಾರ್ತೆ



'ಚಂದ್ರಯಾನ–3'ರ ಲ್ಯಾಂಡರ್‌ನಲ್ಲಿರುವ ಕ್ಯಾಮೆರಾ (ಎಲ್‌1) ಸೆರೆಹಿಡಿದಿರುವ ಭೂಮಿಯ ಚಿತ್ರ –ಪಿಟಿಐ ಚಿತ್ರ

ಬೆಂಗಳೂರು: ವಿಶ್ವದ ಗಮನ ಸೆಳೆದಿರುವ ಅಂತರಿಕ್ಷ ಕಾರ್ಯಕ್ರಮ 'ಚಂದ್ರಯಾನ–3'ರ ನೌಕೆ ಚಂದ್ರನನ್ನು ಸಮೀಪಿಸುತ್ತಿರುವಂತೆಯೇ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಮತ್ತಷ್ಟು ಅಧ್ಯಯನ ಆರಂಭಿಸಿದೆ.

ಚಂದ್ರನ ವಾತಾವರಣ ಹಾಗೂ ಸುತ್ತಲಿನ ಬಾಹ್ಯಾಕಾಶದಲ್ಲಿನ ಸದ್ಯದ ಪರಿಸ್ಥಿತಿ ಕುರಿತು ಇಸ್ರೊ ಪರಿಶೀಲನೆ ನಡೆಸುತ್ತಿದೆ. ಅದರಲ್ಲೂ, ಮುಂದಿನ ಕೆಲ ವರ್ಷಗಳಲ್ಲಿ 'ಆರ್ಟೆಮಿಸ್' ಬಾಹ್ಯಾಕಾಶ ಕಾರ್ಯಕ್ರಮದಡಿ ಚಂದ್ರನ ಸುತ್ತಮುತ್ತ ಮತ್ತಷ್ಟು ಚಟುವಟಿಕೆಗಳು ಕಂಡುಬರುವ ಕಾರಣ ಈ ಪರಿಶೀಲನೆಗೆ ಮಹತ್ವ ಇದೆ ಎಂದು ಇಸ್ರೊ ಹೇಳಿದೆ.

'ಭವಿಷ್ಯದಲ್ಲಿನ ಬಾಹ್ಯಾಕಾಶ ಕಾರ್ಯಕ್ರಮಗಳು ವೈಜ್ಞಾನಿಕ ಅನ್ವೇಷಣೆಗೆ ಮಾತ್ರ ಸೀಮಿತವಾಗಿರುವುದಿಲ್ಲ. ಅಂತರಿಕ್ಷ ಸಂಪನ್ಮೂಲವನ್ನು ವಾಣಿಜ್ಯ ಉದ್ದೇಶಕ್ಕೆ ಬಳಸಿಕೊಳ್ಳುವುದನ್ನು ಕೂಡ ಒಳಗೊಂಡಿರುತ್ತವೆ. ಈ ಕಾರಣಕ್ಕಾಗಿ, ಚಂದ್ರನ ಪರಿಸರ ಕುರಿತ ಹೆಚ್ಚಿನ ಅರಿವು ಗ್ರಹಗಳ ಕಕ್ಷೆಗಳಲ್ಲಿ ಎದುರಾಗಬಹುದಾದ ಅಪಾಯಗಳನ್ನು ಎದುರಿಸುವ ಕಾರ್ಯಾಚರಣೆ ರೂಪಿಸಲು ನೆರವಾಗುತ್ತದೆ' ಎಂದು ಇಸ್ರೊ ವಿಜ್ಞಾನಿಗಳು ಹೇಳಿದ್ದಾರೆ.

ಕಳೆದ ಜುಲೈಗೆ ಅಂತ್ಯಗೊಂಡ ಅವಧಿಯಲ್ಲಿ ಚಂದ್ರನ ಕಕ್ಷೆಯಲ್ಲಿ ಆರು ಗಗನನೌಕೆಗಳು ಪರಿಭ್ರಮಣ ಮಾಡುತ್ತಿವೆ. ನಾಸಾದ ನಾಲ್ಕು, ಇಸ್ರೊದ 'ಚಂದ್ರಯಾನ–2' ಕೊರಿಯಾದ ಗಗನನೌಕೆ 'ಕೆಪಿಎಲ್‌ಒ' ಕಕ್ಷೆಯಲ್ಲಿವೆ.

ಭಾರತದ 'ಚಂದ್ರಯಾನ–1' ಹಾಗೂ 2009ರಲ್ಲಿ ಜಪಾನ್ ಉಡ್ಡಯನ ಮಾಡಿದ್ದ 'ಔನಾ' ನೌಕೆ ಈಗ ನಿಷ್ಕ್ರಿಯಗೊಂಡಿದ್ದರೂ, ಕಕ್ಷೆಯಲ್ಲಿ ಪರಿಭ್ರಮಿಸುತ್ತಿವೆ.

ಇನ್ನು, ರಷ್ಯಾದ 'ಲೂನಾ–25' ನೌಕೆಯು ಆಗಸ್ಟ್ 16ರ ವೇಳೆಗೆ ಚಂದ್ರನಿಂದ 100 ಕಿ.ಮೀ. ದೂರದಲ್ಲಿರುವ ಕಕ್ಷೆಯನ್ನು ಪ್ರವೇಶಿಸುವ ನಿರೀಕ್ಷೆ ಇದ್ದು, ಆಗಸ್ಟ್ 21–23ರ ನಡುವೆ ಈ ನೌಕೆ ಕೂಡ ಚಂದ್ರನ ದಕ್ಷಿಣ ಧ್ರುವದಲ್ಲಿ ಇಳಿಯಲಿದೆ. 'ಚಂದ್ರಯಾನ–3'ರ ಸಾಫ್ಟ್‌ಲ್ಯಾಂಡಿಂಗ್ ಆಗಸ್ಟ್ 23ರಂದು ನಿಗದಿಯಾಗಿದೆ.

ಹಿಮಾಚಲ ಪ್ರದೇಶದಲ್ಲಿ ಮೇಘಸ್ಫೋಟ

ಮನೆ ಕುಸಿತ, ಎರಡು ಶವ ಪತ್ತೆ



ಸಿರ್ಮೌರ್ ಜಿಲ್ಲೆಯಲ್ಲಿ ಮೇಘಸ್ಫೋಟ ಸಂಭವಿಸಿದ್ದು, ಅವಶೇಷಗಳಡಿಯಲ್ಲಿ ಸಿಲುಕಿರುವವರ ರಕ್ಷಿಸುವ ಕಾರ್ಯಾಚರಣೆ ನಡೆಯಿತು –ಪಿಟಿಐ ಚಿತ್ರ

ನಾಹನ್ (ಪಿಟಿಐ): 'ಹಿಮಾಚಲ ಪ್ರದೇಶದಲ್ಲಿ ಮೇಘಸ್ಫೋಟ ಸಂಭವಿಸಿ, ಸಿರ್ಮೌರ್ ಜಿಲ್ಲೆಯ ಹಳ್ಳಿಯೊಂದಕ್ಕೆ ನೀರು ನುಗ್ಗಿದೆ. ಅದರ ಪರಿಣಮವಾಗಿ ಕುಸಿದುಬಿದ್ದ ಮನೆಯೊಂದರ ಅವಶೇಷಗಳಡಿಯಲ್ಲಿ ಸಿಲುಕಿದ್ದ ಕುಟುಂಬದ ಐದು ಮಂದಿ ಪೈಕಿ ಇಬ್ಬರ ಮೃತದೇಹಗಳನ್ನು ರಕ್ಷಣಾ ತಂಡಗಳು ಗುರುವಾರ ಪತ್ತೆ ಹಚ್ಚಿವೆ' ಎಂದು ಅಧಿಕಾರಿಗಳು ತಿಳಿಸಿದ್ದಾರೆ.

'ಮೃತರನ್ನು ಕುಲದೀಪ್ ಮತ್ತು ನಿತೀಶ್ ಎಂದು ಗುರುತಿಸಲಾಗಿದೆ. ಬುಧವಾರ ರಾತ್ರಿಯ ಮೇಘಸ್ಫೋಟದಿಂದಾಗಿ ಪಾವೊಂಟಾ ಸಾಹಿಬ್ ಪ್ರದೇಶದ ಮಾಳಗಿ ದಡಿಯಾತ್ ಗ್ರಾಮದ ಹಲವಾರು ಮನೆಗಳಿಗೆ ನೀರು ನುಗ್ಗಿದೆ' ಎಂದು ಹೇಳಿದ್ದಾರೆ.

'ಕುಟುಂಬದ ಇತರ ಮೂವರಿಗಾಗಿ ಶೋಧ ಮುಂದುವರಿದಿದೆ' ಎಂದು ಪಾವೊಂಟಾ ಉಪವಿಭಾಗೀಯ ಮ್ಯಾಜಿಸ್ಟ್ರೇಟ್ ಗುಂಜಿತ್ ಸಿಂಗ್ ಚೀಮಾ ಅವರು ತಿಳಿಸಿದ್ದಾರೆ.

ಇಲ್ಲಿಯವರೆಗೆ ಮೂರು ಮನೆಗಳಿಗೆ ಹಾನಿಯಾಗಿದೆ ಎಂದು ವರದಿಯಾಗಿದೆ.

'ನ್ಯೂಸ್‌ಕ್ಲಿಕ್' ಸುದ್ದಿಪೋರ್ಟಲ್ ನಂಟಿನ ಹಣ ಅಕ್ರಮ ವರ್ಗಾವಣೆ ಆರೋಪ

ಪ್ರಕಾಶ್ ಕಾರಟ್ ಇ–ಮೇಲ್‌ಗಳ ತನಿಖೆ

ನವದೆಹಲಿ (ಪಿಟಿಐ): 'ನ್ಯೂಸ್‌ಕ್ಲಿಕ್' ಸುದ್ದಿಪೋರ್ಟಲ್ ವಿರುದ್ಧದ ಹಣ ಅಕ್ರಮ ವರ್ಗಾವಣೆ ಆರೋಪ ಕುರಿತ ತನಿಖೆ ಭಾಗವಾಗಿ ಅಮೆರಿಕದ ಉದ್ಯಮಿ ನೆವಿಲ್ಲೆ ರಾಯ್ ಸಿಂಘಂ ಹಾಗೂ ಸಿಪಿಎಂ ಹಿರಿಯ ನಾಯಕ ಪ್ರಕಾಶ್ ಕಾರಟ್ ನಡುವೆ ವಿನಿಮಯವಾಗಿರುವ ಇ–ಮೇಲ್‌ಗಳ ಬಗ್ಗೆಯೂ ಜಾರಿ ನಿರ್ದೇಶನಾಲಯ (ಇ.ಡಿ) ತನಿಖೆ ನಡೆಸಲಿದೆ.

ಚೀನಾ ಪರ ನಿಲುವುಗಳನ್ನು ಪ್ರಚುರಪಡಿಸುವ ಸಲುವಾಗಿ ನ್ಯೂಸ್‌ಕ್ಲಿಕ್ ಪೋರ್ಟಲ್, ಉದ್ಯಮಿ ಸಿಂಘಂ ಅವರಿಂದ ಸಂಶಯಾಸ್ಪದ ರೀತಿ ಹಣ ಪಡೆದಿದೆ ಎಂಬ ಆರೋಪಕ್ಕೆ ಸಂಬಂಧಿಸಿ ಈ ತನಿಖೆ ನಡೆಸಲಾಗುತ್ತಿದೆ ಎಂದು ಮೂಲಗಳು ಗುರುವಾರ ಹೇಳಿವೆ.

ನ್ಯೂಸ್‌ಕ್ಲಿಕ್ ಪೋರ್ಟಲ್‌ನಿಂದ ಸಾಮಾಜಿಕ ಹೋರಾಟಗಾರ್ತಿ ತೀಸ್ತಾ ಸೆಟಲ್ವಾಡ್ ಕುಟುಂಬ ಸದಸ್ಯರಿಗೆ ₹ 40 ಲಕ್ಷದಷ್ಟು, ಪತ್ರಕರ್ತ ಮತ್ತು ಲೇಖಕ ಪರಂಜಯ ಗುಹಾ ಠಾಕೂರ್ತಾ, ಸಂಸ್ಥೆಯ ಕೆಲ ಸಿಬ್ಬಂದಿ ಹಾಗೂ ಕೆಲ ಸ್ವತಂತ್ರ ಪತ್ರಕರ್ತರಿಗೆ ಅಂದಾಜು ₹ 72 ಲಕ್ಷ ವರ್ಗಾಯಿಸಲಾಗಿದೆ ಎನ್ನಲಾಗಿದೆ.

ಸದ್ಯ ಜೈಲಿನಲ್ಲಿರುವ ಸಾಮಾಜಿಕ ಹೋರಾಟಗಾರ ಗೌತಮ್ ನೌಲಖಾ ಅವರಿಗೆ 'ವೇತನ' ರೂಪದಲ್ಲಿ ₹ 17.08 ಲಕ್ಷ, ಪೋರ್ಟಲ್‌ನ ಪಾಲುದಾರರೂ ಆಗಿರುವ ಸಿಪಿಎಂನ ಐಟಿ ವಿಭಾಗದ ಸದಸ್ಯ ಬಪ್ಪಾದಿತ್ಯ ಸಿನ್ಹಾ ಅವರಿಗೆ ₹ 97.32 ಲಕ್ಷ 'ನ್ಯೂಸ್‌ಕ್ಲಿಕ್' ಸಂದಾಯ ಮಾಡಿರುವುದು ಗೊತ್ತಾಗಿದೆ ಎಂದು ತಿಳಿಸಿವೆ.

ಸಿಂಘಂ ನಂಟಿರುವ ಕಂಪನಿಗಳಿಂದ 'ನ್ಯೂಸ್‌ಕ್ಲಿಕ್' ಮಾತೃಸಂಸ್ಥೆ ಪಿಪಿಕೆ ನ್ಯೂಸ್‌ಕ್ಲಿಕ್ ಸ್ಟುಡಿಯೊ ಪ್ರೈವೇಟ್ ಲಿಮಿಟೆಡ್‌ಗೆ ₹ 86 ಕೋಟಿಗೂ ಅಧಿಕ ಹಣ ಹರಿದು ಬಂದಿದೆ ಎನ್ನಲಾಗಿದೆ. ಈ ಸಂಬಂಧ 'ನ್ಯೂಸ್‌ಕ್ಲಿಕ್' ಪ್ರವರ್ತಕರು ಮತ್ತಿತರರ ವಿರುದ್ಧ ತನಿಖೆ ನಡೆಸಿರುವ ಇ.ಡಿ ದೋಷಾರೋಪ ಪಟ್ಟಿ ಸಲ್ಲಿಸುವ ನಿರೀಕ್ಷೆ ಇದೆ.

ನೂಹ್: ಶಂಕಿತ ಗಲಭೆಕೋರರ ಬಂಧನ

ಗುರುಗ್ರಾಮ (ಪಿಟಿಐ): ಹರಿಯಾಣದ ನೂಹ್ ಜಿಲ್ಲೆಯಲ್ಲಿ ನಡೆದ ಕೋಮು ಘರ್ಷಣೆಯಲ್ಲಿ ಭಾಗಿಯಾಗಿದ್ದ ಇಬ್ಬರು ಶಂಕಿತ ಗಲಭೆಕೋರರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಗುರುವಾರ ತಿಳಿಸಿದ್ದಾರೆ.

ನೂಹ್ ಜಿಲ್ಲೆಯ ತೌರು ಪ್ರದೇಶದ ಸಖೋ ಗ್ರಾಮದ ಬೆಟ್ಟದ ಬಳಿ ಬುಧವಾರ ತಡರಾತ್ರಿ ಎನ್‌ಕೌಂಟರ್ ನಡೆದಿದ್ದು, ಆರೋಪಿಗಳ ಪೈಕಿ ಒಬ್ಬನ ಕಾಲಿಗೆ ಗುಂಡು ಹಾರಿಸಲಾಗಿದೆ.

ಬೈಕಿನಲ್ಲಿ ಪರಾರಿಯಾಗಲು ಪ್ರಯತ್ನಿಸಿದ ವೇಳೆ ಒಬ್ಬನ ಕಾಲಿಗೆ ಗುಂಡು ಹಾರಿಸಿದ ನಂತರ ಇಬ್ಬರೂ ಕೆಳಗೆ ಬಿದ್ದಿದ್ದಾರೆ. ಬಂಧಿತರಿಂದ ನಾಡ ಪಿಸ್ತೂಲ್, ಗುಂಡುಗಳು ಮತ್ತು ಬೈಕ್ ವಶಪಡಿಸಿಕೊಳ್ಳಲಾಗಿದೆ. ಎನ್‌ಕೌಂಟರ್ ಸುಮಾರು ಒಂದು ತಾಸು ನಡೆಯಿತು.

ಆರೋಪಿಗಳನ್ನು ಗ್ವಾರ್ಕಾ ಗ್ರಾಮದ ನಿವಾಸಿಗಳಾದ ಮುನ್ಫೆದ್ ಮತ್ತು ಸೈಕುಲ್ ಎಂದು ಗುರುತಿಸಲಾಗಿದೆ. ಗುಂಡು ತಗುಲಿರುವ ಮುನ್ಫೆದ್‌ನನ್ನು ಚಿಕಿತ್ಸೆಗಾಗಿ ನಲ್ಹಾರ್ ವೈದ್ಯಕೀಯ ಕಾಲೇಜಿಗೆ ದಾಖಲಿಸಲಾಗಿದೆ. ಹೆಚ್ಚಿನ ತನಿಖೆ ನಡೆಯುತ್ತಿದೆ ಎಂದು ತೌರು ಡಿಎಸ್‌ಪಿ ಮುಖೇಶ್ ಕುಮಾರ್ ಹೇಳಿದ್ದಾರೆ.

ಘರ್ಷಣೆಯಲ್ಲಿ ಭಾಗಿಯಾಗಿರುವ ಆರೋಪಿಗಳಿಗಾಗಿ ಶೋಧಕಾರ್ಯಾಚರಣೆ ನಡೆಯುತ್ತಿದೆ ಮತ್ತು ಕೆಲವರು ಅರಾವಳಿ ಬೆಟ್ಟಗಳಲ್ಲಿ ಅಡಗಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸಂಕ್ಷಿಪ್ತ ಸುದ್ದಿ

ಇ.ಡಿಯಿಂದ ₹30 ಕೋಟಿ ಮೌಲ್ಯದ ಆಸ್ತಿ ಜಪ್ತಿ

ಚೆನ್ನೈ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿ ತಮಿಳುನಾಡು ಸಚಿವ ವಿ. ಸೆಂಥಿಲ್ ಬಾಲಾಜಿ ಅವರ ನಾದಿನಿಗೆ ಸೇರಿದ ₹ 30 ಕೋಟಿ ಮೌಲ್ಯದ 2.49 ಎಕರೆ ಜಮೀನನ್ನು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿದೆ.

ಹಣ ಅಕ್ರಮ ವರ್ಗಾವಣೆ ತಡೆ ಕಾಯ್ದೆಯಡಿ, ಕರೂರು ಜಿಲ್ಲೆಯ ಸೇಲಂ ಬೈಪಾಸ್ ರಸ್ತೆ ಬಳಿಯ ಜಮೀನಿನ ದಾಖಲೆಗಳನ್ನು ಜಪ್ತಿ ಮಾಡಿದ್ದು, ಈ ಜಮೀನಿನಲ್ಲಿ ಬಂಗಲೆಯೊಂದರ ನಿರ್ಮಾಣ ಕಾಮಗಾರಿ ನಡೆಯುತ್ತಿತ್ತು ಎಂದು ಅಧಿಕಾರಿಗಳು ಗುರುವಾರ ತಿಳಿಸಿದ್ದಾರೆ.

ಸೆಂಥಿಲ್ ಅವರ ಸಹೋದರ ಆರ್. ವಿ. ಅಶೋಕ್ ಬಾಲಾಜಿ ಅವರ ಅತ್ತೆಯ ಹೆಸರಿನಲ್ಲಿದ್ದ ಈ ಜಮೀನನ್ನು ಬಳಿಕ ಅವರು ಮಗಳು ಹಾಗೂ ಅಶೋಕ್ ಅವರ ಪತ್ನಿ ನಿರ್ಮಲಾ ಅವರಿಗೆ ನೀಡಿದ್ದರು ಎಂದೂ ವಿವರಿಸಿದ್ದಾರೆ.

'ಸುಸ್ವಾಗತಂ' ಪೋರ್ಟಲ್ ಆರಂಭ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್ ಪ್ರವೇಶಿಸಲು ಬೇಕಾದ ಪಾಸ್‌ಗಾಗಿ ಇನ್ನು ಮುಂದೆ ಸರದಿಯಲ್ಲಿ ನಿಲ್ಲುವ ಅಗತ್ಯವಿಲ್ಲ. ಇದಕ್ಕಾಗಿ ಆನ್‌ಲೈನ್ ಮೂಲಕ ಇ–ಪಾಸ್ ನೀಡುವ 'ಸುಸ್ವಾಗತಂ' ಪೋರ್ಟಲ್ ಅನ್ನು ಆರಂಭಿಸಲಾಗಿದೆ.

ಸಂವಿಧಾನದ 370ನೇ ವಿಧಿಯಡಿ ಜಮ್ಮು–ಕಾಶ್ಮೀರಕ್ಕೆ ನೀಡಿದ್ದ ವಿಶೇಷ ಸ್ಥಾನಮಾನವನ್ನು ರದ್ದುಪಡಿಸಿದ್ದ ಕೇಂದ್ರದ ನಿರ್ಧಾರ ಪ್ರಶ್ನಿಸಿ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆ ನಡೆಸುತ್ತಿರುವ ಮುಖ್ಯನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ನ್ಯಾಯಪೀಠವು ಪೋರ್ಟಲ್ ಆರಂಭಿಸಿರುವುದಾಗಿ ಗುರುವಾರ ಘೋಷಿಸಿದೆ.

ವೆಬ್ ಆಧರಿತ ಪೋರ್ಟಲ್ ಮೊಬೈಲ್ ಸ್ನೇಹಿ ಆಗಿದ್ದು, ವಿಚಾರಣೆಗೆ ಹಾಜರಾಗಲು ಹಾಗೂ ವಕೀಲರನ್ನು ಭೇಟಿಯಾಗಲು ನ್ಯಾಯಾಲಯಕ್ಕೆ ಬರುವವರು ಇದರ ಮೂಲಕ ಇ–ಪಾಸ್‌ಗೆ ನೋಂದಣಿ ಮಾಡಬಹುದು ಎಂದು ಡಿ.ವೈ. ಚಂದ್ರಚೂಡ್ ಅವರು ಹೇಳಿದ್ದಾರೆ.

'ಹಿಮಾಲಯ ರಕ್ಷಣೆಗೆ ತುರ್ತು ಕ್ರಮ ಕೈಗೊಳ್ಳಿ'

ನವದೆಹಲಿ (ಪಿಟಿಐ): ಪ್ರವಾಸೋದ್ಯಮ ಚಟುವಟಿಕೆಯಲ್ಲಿ ಹೆಚ್ಚಳ, ಹೋಟೆಲ್, ರೆಸಾರ್ಟ್‌ಗಳ ಅಕ್ರಮ ನಿರ್ಮಾಣವು ಹಿಮಾಲಯ ಶ್ರೇಣಿಯಲ್ಲಿಯ ಸ್ವಾಭಾವಿಕ ಸಂಪನ್ಮೂಲವನ್ನು ಶಿಥಿಲಗೊಳಿಸುತ್ತಿದೆ. ಜೋಶಿಮಠದಂಥ ದುರಂತಗಳು ಸಂಭವಿಸದಂತೆ ಮುನ್ನೆಚ್ಚರಿಕೆ ವಹಿಸುವ ನಿಟ್ಟಿನಲ್ಲಿ ಸರ್ಕಾರವು ಈ ಕುರಿತು ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಸಂಸತ್ತಿನ ಸ್ಥಾಯಿ ಸಮಿತಿ ಗುರುವಾರ ತಿಳಿಸಿದೆ.

ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ಅವರ ನೇತೃತ್ವದ ಸಮಿತಿಯು ಈ ವರದಿಯನ್ನು ರಾಜ್ಯಸಭೆ ಎದುರಿಟ್ಟಿತು. ಪರಿಸರದ ದೃಷ್ಟಿಯಿಂದ 'ಸೂಕ್ಷ್ಮ' ಎಂದು ಪರಿಗಣಿಸಲ್ಪಟ್ಟಿರುವ ಪ್ರದೇಶಗಳಲ್ಲಿ ಅಕ್ರಮವಾಗಿ ನಿರ್ಮಾಣವಾಗಿರುವ ಕಟ್ಟಡಗಳನ್ನು ಸ್ಥಳೀಯ ಆಡಳಿತಗಳ ಸಹಯೋಗದಿಂದಿಗೆ ಪರಿಶೀಲನೆಗೆ ಒಳಪಡಿಸಬೇಕು. ಕಟ್ಟಡಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು ಎಂದು ವರದಿಯಲ್ಲಿ ಹೇಳಲಾಗಿದೆ.

ಸಂಭಾಜಿ ವಿರುದ್ಧ ತುಷಾರ್ ಗಾಂಧಿ ದೂರು

ಪುಣೆ (ಪಿಟಿಐ): ರಾಷ್ಟ್ರಪಿತನ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದಾರೆ ಎಂದು ದೂರಿ, ಮಹಾರಾಷ್ಟ್ರದ ಶ್ರೀ ಶಿವ ಪ್ರತಿಷ್ಠಾನ ಹಿಂದೂಸ್ತಾನ್ ಸಂಘಟನೆಯ ಸಂಸ್ಥಾಪಕ ಸಂಭಾಜಿ ಭಿಡೆ ವಿರುದ್ಧ ಮಹಾತ್ಮ ಗಾಂಧಿ ಮರಿಮೊಮ್ಮಗ ತುಷಾರ್ ಗಾಂಧಿ ಗುರುವಾರ ಪುಣೆ ಪೊಲೀಸರಿಗೆ ದೂರು ಸಲ್ಲಿಸಿದ್ದಾರೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಜುಲೈ ನಡೆದ ಕಾರ್ಯಕ್ರಮವೊಂದರಲ್ಲಿ ಸಂಭಾಜಿ ಅವರು, ಮಹಾತ್ಮಗಾಂಧಿ ವಂಶಸ್ಥರ ಬಗ್ಗೆ ಆಕ್ಷೇಪಾರ್ಹವಾಗಿ ಮಾತನಾಡಿದ್ದಾರೆ ಎಂದು ಆರೋಪಿಸಿ ಈಗಾಗಲೇ ಎರಡು ಎಫ್‌ಐಆರ್‌ಗಳು ದಾಖಲಾಗಿದೆ.

ಮಹಾರಾಷ್ಟ್ರ: ಪತ್ರಕರ್ತನ ಮೇಲೆ ಹಲ್ಲೆ, ಸಿಇಒ ಅಪಹರಣ ಪ್ರಕರಣ

ಶಿಂದೆ ಸರ್ಕಾರದ ವಿರುದ್ಧ ವಿಪಕ್ಷ ವಾಗ್ದಾಳಿ

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಶಾಸಕ ಪ್ರಕಾಶ್ ಸುರ್ವೆ ಮಗ ರಾಜ್ ಸುರ್ವೆ ವಿರುದ್ಧ ಪ್ರಕರಣ
- ಮೂವರ ಬಂಧನ
- ಆರೋಪ ತಳ್ಳಿಹಕಿದ ಶಾಸಕ ಕಿಶೋರ್ ಪಾಟೀಲ್

ಮುಂಬೈ: ಪತ್ರಕರ್ತರೊಬ್ಬರ ಮೇಲಿನ ಹಲ್ಲೆ ಮತ್ತು ಮ್ಯೂಸಿಕ್ ಕಂಪನಿಯ ಸಿಇಒ ಅಪಹರಣ ಪ್ರಕರಣಗಳಲ್ಲಿ ಮಹಾರಾಷ್ಟ್ರದ ಮುಖ್ಯಮಂತ್ರಿ ಏಕನಾಥ ಶಿಂದೆ ನೇತೃತ್ವದ ಶಿವಸೇನಾದ ಇಬ್ಬರು ಶಾಸಕ ಹೆಸರು ಕೇಳಿ ಬಂದಿದ್ದು, ಈ ವಿಚಾರವಾಗಿ ವಿಪಕ್ಷ ನಾಯಕರು ಸರ್ಕಾರದ ವಿರುದ್ಧ ಗುರುವಾರ ವಾಗ್ದಾಳಿ ನಡೆಸಿದ್ದಾರೆ.

ಸಿಇಒ ಅಪಹರಿಸಿ ಹಲ್ಲೆ ಮಾಡಿರುವ ಪ್ರಕರಣದಲ್ಲಿ ಮಗಠಾಣೆ ಶಾಸಕ ಪ್ರಕಾಶ್ ಸುರ್ವೆ ಅವರ ಮಗ ರಾಜ್ ಸುರ್ವೆ ಅವರ ವಿರುದ್ಧ ಪೊಲೀಸರು ಪ್ರಕರಣ ದಾಖಲಿಸಿಕೊಂಡಿದ್ದಾರೆ. ಮೂವರನ್ನು ಬಂಧಿಸಲಾಗಿದೆ.

ಮ್ಯೂಸಿಕ್ ಕಂಪನಿಯೊಳಗೆ ನುಗ್ಗಿದ 10 ರಿಂದ 15 ಮಂದಿಯ ಗುಂಪು ಸಿಬ್ಬಂದಿ ಮೇಲೆ ಹಲ್ಲೆ ನಡೆಸಿ, ಈ ಸಿಇಒ ಅವರನ್ನು ಎಳೆದೊಯ್ಯುವ ದೃಶ್ಯ ಸಿ.ಸಿ. ಟಿ.ವಿ. ಕ್ಯಾಮೆರಾದಲ್ಲಿ ದಾಖಲಾಗಿದೆ.

ಸ್ಥಳೀಯ ದಿನಪತ್ರಿಕೆಯ ಪತ್ರಕರ್ತ ಸಂದೀಪ್ ಮಹಾಜನ ಎಂಬವರ ಮೇಲೆ ಜಲಗಾಂವ್ ಜಿಲ್ಲೆಯ ಪಚೋರಾದ ಶಾಸಕ ಕಿಶೋರ್ ಪಾಟೀಲ್ ಬೆಂಬಲಿಗರು ಹಲ್ಲೆ ನಡೆಸಿದ್ದಾರೆ ಎಂದು ಆರೋಪಿಸಲಾಗಿದೆ.

ಎಂಟು ವರ್ಷದ ಬಾಲಕಿಯ ಮೇಲೆ ಅತ್ಯಾಚಾರ ನಡೆಸಿ, ಕೊಲೆ ಮಾಡಿರುವ ಪ್ರಕರಣದ ಕುರಿತು ವರದಿ ಮಾಡಿರುವ ಕಾರಣಕ್ಕೆ ಸಂದೀಪ್ ಅವರ ಮೇಲೆ ಹಲ್ಲೆ ಮಾಡಲಾಗಿದೆ ಎಂದು ಮೂಲಗಳು ತಿಳಿಸಿವೆ.

ಸಂದೀಪ್ ಅವರನ್ನು ದ್ವಿಚಕ್ರ ವಾಹನದಿಂದ ಎಳೆದು ಹಲ್ಲೆ ನಡೆಸಿರುವ ದೃಶ್ಯವಿರುವ ವಿಡಿಯೊ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡಿದೆ.

'ಪತ್ರಕರ್ತನ ಮೇಲೆ ನಡೆದ ಹಲ್ಲೆಯಲ್ಲಿ ಶಿವಸೇನಾದ ಸ್ಥಳೀಯ ಶಾಸಕ ಕಿಶೋರ್ ಪಾಟೀಲ್ ಅವರ ಗೂಂಡಾಗಳ ಕೈವಾಡವಿದೆ' ಎಂದು ವಿಧಾನಸಭೆ ವಿರೋಧಪಕ್ಷದ ನಾಯಕ ವಿಜಯ್ ವಡೆಟ್ಟೀವಾರ್ ಮತ್ತು ಶಿವಸೇನಾ (ಯುಬಿಟಿ) ಸಂಸದ ಸಂಜಯ್ ರಾವುತ್ ಅವರು ಆರೋಪಿಸಿದ್ದಾರೆ.

ಈ ಆರೋಪವನ್ನು ತಳ್ಳಿ ಹಾಕಿರುವ ಕಿಶೋರ್ ಪಾಟೀಲ್, ಈ ಘಟನೆಗೂ ತಮಗೂ ಯಾವುದೇ ಸಂಬಂಧವಿಲ್ಲ ಎಂದಿದ್ದಾರೆ. ಎನ್‌ಸಿಪಿ ಕಾರ್ಯಾಧ್ಯಕ್ಷೆ ಸುಪ್ರಿಯಾ ಸುಳೆ ಅವರು ಹಲ್ಲೆಯನ್ನು ಖಂಡಿಸಿದ್ದು, ದಾಳಿಕೋರರ ವಿರುದ್ಧ ಸರ್ಕಾರ ಕೂಡಲೇ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದ್ದಾರೆ.

ಈ ಎರಡು ಘಟನೆಗಳನ್ನು ಉಲ್ಲೇಖಿಸಿ ಶಿಂದೆ ಸರ್ಕಾರದ ವಿರುದ್ಧ ವಾಗ್ದಾಳಿ ನಡೆಸಿರುವ ಕಾಂಗ್ರೆಸ್, ರಾಜ್ಯದಲ್ಲಿ ಕಾನೂನು ಮತ್ತು ಸುವ್ಯವಸ್ಥೆ ಇದೆಯೇ ಎಂದು ಪ್ರಶ್ನಿಸಿದೆ.

‘ನೇರಪ್ರಸಾರಕ್ಕಾಗಿ ಬೆಂಗಳೂರಿನಲ್ಲಿ ಪಂದ್ಯ’

ಕೆಎಸ್‌ಸಿಎ ಟಿ20 ಕ್ರಿಕೆಟ್ ಮಹಾರಾಜ ಟ್ರೋಫಿ ಅನಾವರಣ; ಇದೇ 13 ರಿಂದ 29ರವರೆಗೆ ಟೂರ್ನಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಈ ಬಾರಿ ಮಹಾರಾಜ ಟ್ರೋಫಿಯ ಎಲ್ಲ ಪಂದ್ಯಗಳು ಆಯೋಜನೆಗೊಳ್ಳಲಿವೆ ಎಂದು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಘೋಷಣೆ ಮಾಡಿದಾಗಿನಿಂದಲೂ ಗ್ರಾಮಾಂತರ ವಿಭಾಗದ ಕ್ರಿಕೆಟ್ ಅಭಿಮಾನಿಗಳು ತಮ್ಮ ಅಸಮಾಧಾನ ವ್ಯಕ್ತಪಡಿಸುತ್ತಲೇ ಇದ್ದಾರೆ.

ಅಲ್ಲದೇ ಟೂರ್ನಿಗೆ ಸಂಬಂಧಿಸಿದ ಪ್ರಚಾರ ವಿಡಿಯೊಗಳು ಮತ್ತು ಪ್ರಕಟಣೆಗಳಲ್ಲಿ ಕನ್ನಡ ಭಾಷೆಯು ನಿರ್ಲಕ್ಷ್ಯಕ್ಕೆ ಒಳಗಾಗಿರುವ ಬಗ್ಗೆಯೂ ಸಾಮಾಜಿಕ ಜಾಲತಾಣಗಳಲ್ಲಿ ಬಹಳಷ್ಟು ಟೀಕೆಗಳು ವ್ಯಕ್ತವಾಗುತ್ತಿವೆ. ಈ ಹಿಂದೆ ನಡೆದಿದ್ದ ಟೂರ್ನಿಗಳಲ್ಲಿ ಪಂದ್ಯಗಳನ್ನು ಹುಬ್ಬಳ್ಳಿ ಮತ್ತು ಮೈಸೂರಿನಲ್ಲಿ ಆಯೋಜಿಸಲಾಗಿತ್ತು.

ಈ ಕುರಿತು ಗುರುವಾರ ಸುದ್ದಿಗೋಷ್ಠಿಯಲ್ಲಿ ಪ್ರತಿಕ್ರಿಯಿಸಿದ ಕೆಎಸ್‌ಸಿಎ ಉಪಾಧ್ಯಕ್ಷ ಸಂಪತ್ ಕುಮಾರ್, ‘ಕೆಲವು ದಿನಗಳ ಹಿಂದೆ ಇಲ್ಲಿ ನಡೆದಿದ್ದ ಐಪಿಎಲ್ ಪಂದ್ಯದ ಸಂದರ್ಭದಲ್ಲಿ ಭಾರಿ ಮಳೆಯಾಗಿತ್ತು. ಆದರೂ ಸಂಪೂರ್ಣ ಪಂದ್ಯ ನಡೆಸಲು ಸಾಧ್ಯವಾಗಿತ್ತು. ಸಬ್ ಏರ್ ವ್ಯವಸ್ಥೆ ಇರುವುದರಿಂದ ಮಳೆ ಬಂದು ನಿಂತ ನಂತರ ಪಂದ್ಯ ನಡೆಸುವ ಸೌಲಭ್ಯ ಇರುವುದು ಇಲ್ಲಿ ಮಾತ್ರ. ಈಗ ಮುಂಗಾರು ಮಳೆ ಆಗುತ್ತಿರುವುದರಿಂದ ಹುಬ್ಬಳ್ಳಿ, ಮೈಸೂರು, ಶಿವಮೊಗ್ಗ ಮತ್ತಿತರೆಡೆ ಪಂದ್ಯಗಳಿಗೆ ವ್ಯತ್ಯಯವಾಗಬಹುದು. ಆದ್ದರಿಂದ ಬೆಂಗಳೂರು ಸೂಕ್ತ ಎಂದು ನಿರ್ಧರಿಸಲಾಗಿದೆ. ಅಲ್ಲದೇ ಈ ಪಂದ್ಯಗಳನ್ನು ನೇರಪ್ರಸಾರ ಮಾಡಲಾಗುತ್ತಿದೆ. ಆದ್ದರಿಂದ ಅಧಿಕೃತ ಪ್ರಸಾರ ಸಂಸ್ಥೆಗೆ ಸರಂಜಾಮು ಸಾಗಾಟ ಕೂಡ ಕಠಿಣ ಕೆಲಸವಾಗುವ ಕಾರಣದಿಂದ ಗ್ರಾಮಾಂತರ ಕೇಂದ್ರಗಳಲ್ಲಿ ನಡೆಸುತ್ತಿಲ್ಲ. ಮುಂದಿನ ವರ್ಷ ಈ ಬಗ್ಗೆ ಸೂಕ್ತ ಯೋಜನೆ ಮಾಡುತ್ತೇವೆ. ರಾಜ್ಯದ ಎಲ್ಲ ಭಾಗಗಳಲ್ಲಿ ಕ್ರಿಕೆಟ್ ಆಟವನ್ನು ಬೆಳೆಸಲು ನಾವು ಬದ್ಧರಾಗಿದ್ದೇವೆ’ ಎಂದರು.


ಚಿನ್ನಸ್ವಾಮಿ ಕ್ರೀಡಾಂಗಣದ ಸಭಾಭವನದಲ್ಲಿ ಗುರುವಾರ ನಡೆದ ಕಾರ್ಯಕ್ರಮದಲ್ಲಿ ಮಹಾರಾಜ ಟ್ರೋಫಿಯನ್ನು ಕ್ರಿಕೆಟ್ ದಿಗ್ಗಜ ಜಿ.ಆರ್. ವಿಶ್ವನಾಥ್ ಅನಾವರಣಗೊಳಿಸಿದರು. ಕೆಎಸ್‌ಸಿಎ ಉಪಾಧ್ಯಕ್ಷ ಸಂಪತ್ ಕುಮಾರ್, ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್, ಅಧ್ಯಕ್ಷ ರಘುರಾಮ್ ಭಟ್ ಇದ್ದಾರೆ

ಮಯಂಕ್, ವೈಶಾಖ, ಕರುಣ್ ನಾಯಕರು

ಈ ಟೂರ್ನಿಯಲ್ಲಿ ಆಡಲಿರುವ ಬೆಂಗಳೂರು ಬ್ಲಾಸ್ಟರ್ಸ್ ತಂಡಕ್ಕೆ ಮಯಂಕ್ ಅಗರವಾಲ್, ಗುಲ್ಬರ್ಗ ಮಿಸ್ಟಿಕ್ಸ್ ತಂಡಕ್ಕೆ ವೇಗದ ಬೌಲರ್ ವೈಶಾಖ ವಿಜಯಕುಮಾರ್ ಮತ್ತು ಮೈಸೂರು ವಾರಿಯರ್ಸ್ ತಂಡಕ್ಕೆ ಕರುಣ್ ನಾಯರ್ ಅವರನ್ನು ನಾಯಕರನ್ನಾಗಿ ನೇಮಕ ಮಾಡಲಾಗಿದೆ.

‘ಕನ್ನಡನಾಡಿನಲ್ಲಿ ಇರುವ ನಾವು ಕನ್ನಡಿಗರು ಎನ್ನುವುದರಲ್ಲಿ ಸಂಶಯವಿಲ್ಲ. ಕೆಎಸ್‌ಸಿಎಯಿಂದ ಯಾವುದೇ ವಿಡಿಯೊ ಸಿದ್ಧಪಡಿಸಿಲ್ಲ. ಫ್ರ್ಯಾಂಚೈಸಿಗಳು ಸಿದ್ಧ ಮಾಡಿಕೊಂಡಿವೆ. ಭಾಷೆಗಳ ಬಳಕೆ ಅವರ ಅಭಿವ್ಯಕ್ತಿ ಸ್ವಾತಂತ್ರ್ಯವಾಗಿದೆ. ಅವರ ಮೇಲೆ ನಾವು ದಬ್ಬಾಳಿಕೆ ಮಾಡಲು ಆಗುವುದಿಲ್ಲ. ಬೆಂಗಳೂರಿನಲ್ಲಿ ಎಲ್ಲ ಭಾಷಿಕರೂ ಇದ್ದಾರೆ. ಎಲ್ಲ ಭಾಷೆಗಳಲ್ಲಿಯೂ ವ್ಯವಹರಿಸುವ ಜನರಿದ್ದಾರೆ’ ಎಂದು ಸಂಪತ್ ಕುಮಾರ್ ಸ್ಪಷ್ಟಪಡಿಸಿದರು.

2019ರಲ್ಲಿ ನಡೆದಿದ್ದ ಕರ್ನಾಟಕ ಪ್ರೀಮಿಯರ್ ಲೀಗ್ ಟೂರ್ನಿಯಲ್ಲಿ ಕೆಲವು ಆಟಗಾರರು ಮತ್ತು ಫ್ರ್ಯಾಂಚೈಸಿಗಳು ಫಿಕ್ಸಿಂಗ್‌ನಲ್ಲಿ ಭಾಗಿಯಾದ ಆರೋಪ ಕೇಳಿಬಂದಿತ್ತು. ಪೊಲೀಸ್ ತನಿಖೆ ಕೂಡ ನಡೆದಿತ್ತು. ಅಂತಹ ಘಟನೆಗಳು ಮರುಕಳಿಸದಂತೆ ಈ ಬಾರಿ ಕ್ರಮ ಕೈಗೊಳ್ಳಲಾಗಿದೆ.

‘ಭ್ರಷ್ಟಾಚಾರ ತಡೆ ಕ್ರಮ ಕೈಗೊಳ್ಳಲು ಭಾರತ ಕ್ರಿಕೆಟ್ ನಿಯಂತ್ರಣ ಮಂಡಳಿಗೆ ಮನವಿ ಮಾಡಿದ್ದೆವು. ಮಂಡಳಿ ಸ್ಪಂದಿಸಿದೆ. ಒಬ್ಬರು ಮುಖ್ಯಸ್ಥರು ಮತ್ತು ಆರು ಸಿಬ್ಬಂದಿಗಳು ಇರುವ ಭ್ರಷ್ಟಾಚಾರ ತಡೆ ಘಟಕ ದ(ಎಸಿಯು) ತಂಡವನ್ನು ನಿಯೋಜಿಸಲಾಗಿದೆ. ಇವತ್ತು ಎಸಿಯು ಮತ್ತು ಫ್ರ್ಯಾಂಚೈಸಿಗಳ ಸಭೆ ಇತ್ತು. ಆಟಗಾರರಿಗೆ ಒಡ್ಡಬಹುದಾದ ಆಮಿಷಗಳು, ಹನಿಟ್ರ್ಯಾಪ್ ಮತ್ತಿತರ ಸಾಧ್ಯತೆಗಳ ಕುರಿತು ಅರಿವು ಮೂಡಿಸಲಾಗಿದೆ. ನಿಷ್ಕಳಂಕ ಟೂರ್ನಿ ನಡೆಸಲು ಆದ್ಯತೆ ನೀಡಲಾಗಿದೆ’ ಎಂದು ಹೇಳಿದರು.

‘ಪ್ರತಿದಿನವೂ ಎರಡು ಪಂದ್ಯಗಳು ನಡೆಯಲಿವೆ. ಮಧ್ಯಾಹ್ನ 1 ಗಂಟೆ ಮತ್ತು ಸಂಜೆ 5.30ಕ್ಕೆ ಆರಂಭವಾಗಲಿವೆ. ಈ ಟೂರ್ನಿ ನಡೆಯುವ ಸಂದರ್ಭದಲ್ಲಿ ಏಷ್ಯಾ ಕಪ್ ಟೂರ್ನಿ ಆರಂಭವಾಗಲಿದೆ. ಆದ್ದರಿಂದ ಅಧಿಕೃತ ಪ್ರಸಾರಕ ಸಂಸ್ಥೆಯ ಮನವಿ ಮೇರೆಗೆ ಈ ವೇಳಾಪಟ್ಟಿಯನ್ನು ನಿರ್ಧರಿಸಲಾಗಿದೆ’ ಎಂದು ಸುದ್ದಿಗೋಷ್ಠಿಯಲ್ಲಿದ್ದ ಜಂಟಿ ಕಾರ್ಯದರ್ಶಿ ಶಾವೀರ್ ತಾರಾಪುರ್ ಹೇಳಿದರು.

ಟ್ರೋಫಿ ಅನಾವರಣ: ಇದೇ ಸಂದರ್ಭದಲ್ಲಿ ಮಹಾರಾಜ ಟ್ರೋಫಿಯನ್ನು ದಿಗ್ಗಜ ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಅನಾವರಣ ಮಾಡಿದರು. ಟೂರ್ನಿಯು ಇದೇ 13 ರಿಂದ 29ರವರೆಗೆ ಟೂರ್ನಿ ನಡೆಯಲಿದೆ. ಆರು ತಂಡಗಳು ಆಡಲಿವೆ.

ನಾಲ್ಕನೇ ಕ್ರಮಾಂಕ: ಸಮಸ್ಯೆ ಒಪ್ಪಿಕೊಂಡ ರೋಹಿತ್

ಮುಂಬೈ (ಪಿಟಿಐ): ಯುವರಾಜ್ ಸಿಂಗ್ ಅವರು ನಿವೃತ್ತರಾದ ಮೇಲೆ, ಭಾರತ ಏಕದಿನ ತಂಡದ ನಾಲ್ಕನೇ ಕ್ರಮಾಂಕದಲ್ಲಿ ತಳವೂರಲು ಯಾವುದೇ ಬ್ಯಾಟರ್‌ಗೆ ಸಾಧ್ಯವಾಗಿಲ್ಲ ಎಂದು ನಾಯಕ ರೋಹಿತ್ ಶರ್ಮಾ ಗುರುವಾರ ಒಪ್ಪಿಕೊಂಡರು.

ರೋಹಿತ್ ಹೇಳಿಕೆ, ವಿಶ್ವಕಪ್ ಹತ್ತಿರ ಬರುತ್ತಿರುವಂತೆ ಕಳವಳಕ್ಕೆ ಕಾರಣವಾಗಿದೆ. ವಿಶ್ವಕಪ್ ಆರಂಭಕ್ಕೆ 55 ದಿನಗಳಷ್ಟೇ ಉಳಿದಿವೆ. ಆದರೆ ಬಲು ಮಹತ್ವದ ನಾಲ್ಕನೇ ಕ್ರಮಾಂಕದಲ್ಲಿ ಸೂಕ್ತ ಆಟಗಾರನನ್ನು ಕಂಡುಕೊಳ್ಳಲು ಆಗದಿರುವುದು ಚಿಂತೆಗೆ ಕಾರಣವಾಗಿದೆ.

ಗಾಯಾಳಾಗಿ ದೀರ್ಘಕಾಲ ಹೊರಗುಳಿದ ಶ್ರೇಯಸ್ ಅಯ್ಯರ್ ಪುನರಾಗಮನದ ಹಾದಿಯಲ್ಲಿದ್ದಾರೆ. ಅವರು 20 ಪಂದ್ಯಗಳಲ್ಲಿ ನಾಲ್ಕನೇ ಕ್ರಮಾಂಕದಲ್ಲಿ ಆಡಿದ್ದು 47.35 ಸರಾಸರಿಯಲ್ಲಿ 805 ರನ್ ಗಳಿಸಿ ಬೇರೂರುವ ಸೂಚನೆ ಮೂಡಿಸಿದ್ದರು. ಎರಡು ಶತಕಗಳು, ಐದು ಅರ್ಧಶತಕಗಳನ್ನು ಹೊಡೆದಿದ್ದರು.

‘ನಾಲ್ಕನೇ ಕ್ರಮಾಂಕದ ಸಮಸ್ಯೆ ನಮಗೆ ದೀರ್ಘಕಾಲದಿಂದ ಕಾಡುತ್ತಿದೆ. ಯುವಿ (ಯುವರಾಜ್ ಸಿಂಗ್) ನಂತರ ಆ ಸ್ಥಾನದಲ್ಲಿ ಯಾರೂ ಅಲ್ಲಿ ಗಟ್ಟಿಯಾಗಿಲ್ಲ’ ಎಂದು ‘ಲಾ ಲೀಗಾ’ ಕಾರ್ಯಕ್ರಮಕ್ಕೆ ಬಂದಿದ್ದ ಅವರು ಹೇಳಿದರು.

‘ಈ ಅವಧಿಯಲ್ಲಿ ಶ್ರೇಯಸ್ (ಅಯ್ಯರ್) 4ನೇ ಕ್ರಮಾಂಕದಲ್ಲಿ ಚೆನ್ನಾಗಿ ಆಡಿದ್ದು, ಉತ್ತಮ ಸ್ಕೋರು ಗಳಿಸಿದ್ದಾರೆ. ದುರದೃಷ್ಟವಶಾತ್ ಅವರನ್ನು ಗಾಯದ ಸಮಸ್ಯೆಗಳು ಕಾಡುತ್ತಿವೆ. ಗಾಯಾಳಾದ ಕಾರಣ ಹೊಸಬರು ಆ ಕ್ರಮಾಂಕದಲ್ಲಿ ಬಂದು ಆಡಿ ಹೋಗುತ್ತಾರೆ’ ಎಂದು ವಿಶ್ಲೇಷಿಸಿದರು.

ಚಿನ್ನಸ್ವಾಮಿಯಲ್ಲಿ ವಿಶ್ವಕಪ್ ಸಿದ್ಧತೆ ಆರಂಭ

ಬೆಂಗಳೂರು: ಅಕ್ಟೋಬರ್‌ನಲ್ಲಿ ಆರಂಭವಾಗಲಿರುವ ಐಸಿಸಿ ಏಕದಿನ ವಿಶ್ವಕಪ್ ಟೂರ್ನಿಯ ಕೆಲವು ಪಂಧ್ಯಗಳು ನಡೆಯಲಿರುವ ಚಿನ್ನಸ್ವಾಮಿ ಕ್ರೀಡಾಂಗಣಗಳು ಸಿದ್ಧತೆಗಳು ನಡೆದಿವೆ.

ಈ ಕ್ರೀಡಾಂಗಣದಲ್ಲಿ ಒಟ್ಟು ಐದು ಪಂದ್ಯಗಳು ನಡೆಯಲಿವೆ.

‘ಕೆಲವು ದಿನಗಳ ಹಿಂದೆ ಐಸಿಸಿ ನಿಯೋಗವು ಭೇಟಿ ನೀಡಿ ಕ್ರೀಡಾಂಗಣ ಪರಿಶೀಲನೆ ಮಾಡಿತ್ತು. ಇದೀಗ ಕೆಲವು ನವೀಕರಣ ಕಾರ್ಯವನ್ನು ಆರಂಭಿಸಲಾಗಿದೆ. ಕೆಲವು ಸ್ಟ್ಯಾಂಡ್‌ಗಳ ಮೇಲ್ಚಾವಣಿಗೆ ಹೊಸ ಶೀಟ್‌ಗಳನ್ನು ಅಳವಡಿಸಲಾಗುತ್ತಿದೆ. ಹಾಳಾಗಿರುವ ಆಸನಗಳನ್ನು ತೆಗೆದು ಹಾಕಿ ಹೊಸದನ್ನು ಹಾಕಲಾಗುತ್ತಿದೆ. ಪ್ರೇಕ್ಷಕರಿಗಾಗಿ ಶೌಚಾಲಯಗಳ ನವೀಕರಣ ಕೂಡ ನಡೆಯುತ್ತಿದೆ’ ಎಂದು ಕೆಎಸ್‌ಸಿಎ ಅಧ್ಯಕ್ಷ ರಘುರಾಮ್ ಭಟ್ ತಿಳಿಸಿದರು.

ಫುಟ್‌ಬಾಲ್: ಫೈನಲ್‌ಗೆ ಅಗ್ನಿಪುತ್ರ, ಸ್ಟೂಡೆಂಟ್ಸ್ ಯೂನಿಯನ್

ಬೆಂಗಳೂರು: ಎಫ್.ಸಿ ಅಗ್ನಿಪುತ್ರ ಮತ್ತು ಸ್ಟೂಡೆಂಟ್ಸ್ ಯೂನಿಯನ್ ಎಫ್.ಸಿ ತಂಡಗಳು ಬಿಡಿಎಫ್‌ಎ ಆಶ್ರಯದ ಸಿ. ಪುಟ್ಟಯ್ಯ ಸ್ಮಾರಕ ಫುಟ್‌ಬಾಲ್ ಟೂರ್ನಿಯ ಫೈನಲ್ ಪ್ರವೇಶ ಮಾಡಿವೆ.

ಗುರುವಾರ ನಡೆದ ಮೊದಲ ಸೆಮಿಫೈನಲ್ ಪಂದ್ಯದಲ್ಲಿ ಸ್ಟೂಡೆಂಟ್ಸ್ ಯೂನಿಯನ್ 1–1ರಿಂದ ಎಫ್‌ಸಿ ಡೆಕ್ಕನ್ ತಂಡದೊಂದಿಗೆ ಡ್ರಾ ಸಾಧಿಸಿದ ಕಾರಣ ಪೆನಾಲ್ಟಿ ಶೂಟೌಟ್ ನ ಮೊರೆ ಹೋಗಲಾಯಿತು. ಅಲ್ಲಿ 4–3ರಿಂದ ಗೆದ್ದು, ಪ್ರಶಸ್ತಿ ಸುತ್ತಿಗೆ ಲಗ್ಗೆಯಿಟ್ಟಿತು.

ಶೋರಯವ್ ಭಾರದ್ವಾಜ್ 11ನೇ ನಿಮಿಷದಲ್ಲಿ ಸ್ಟೂಡೆಂಟ್ಸ್ ತಂಡಕ್ಕೆ ಮುನ್ನಡೆ ಒದಗಿಸಿದರು. ಡೆಕ್ಕನ್ ತಂಡದ ಎಂ. ಅರಿವೊಲಿ (13ನೇ) ಚೆಂಡನ್ನು ಗುರಿ ಸೇರಿಸಿ ಗೋಲನ್ನು ಸಮಬಲಗೊಳಿಸಿದರು.

ಎರಡನೇ ಸೆಮಿಫೈನಲ್ ಪಂದ್ಯದಲ್ಲಿ ಅಗ್ನಿಪುತ್ರ ತಂಡವು 4–0ಯಿಂದ ಕಿಕ್‌ಸ್ಟಾರ್ಟ್ ಎಫ್.ಸಿ ತಂಡವನ್ನು ಮಣಿಸಿತು. ಅಗ್ನಿಪುತ್ರ ತಂಡದ ಲಾಲ್ಲುಂಜಮಾ (11, 78ನೇ) ಎರಡು ಗೋಲು ತಂದಿತ್ತರೆ, ಪ್ರಶಾಂತ್ ಚೆಟ್ರಿ (61ನೇ), ಒಮೆಗಾ ವನ್‌ಲಾಲ್ ಹ್ರುಯಿತ್ಲುಂಗಾ (90+3ನೇ) ಚೆಂಡನ್ನು ಗುರಿ ಸೇರಿಸಿದರು. ಫೈನಲ್ ಶನಿವಾರ (ಆ.12) ನಡೆಯಲಿದೆ.